Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–14 ಏಪ್ರಿಲ್ 3–9, 2023 ಪುಟ 16 ರೂ. 10/–
Volume-17 Issue-14 April 3-9, 2023 Pages:16 Price: 10/-



ಮುಸ್ಲಿಂ ಮೀಸಲಾತಿ ರದ್ದು : ಸಾಮಾಜಿಕ ನ್ಯಾಯದ ಸಿದ್ಧಾಂತ ನಾಶಪಡಿಸುವ ಗುರಿ

ರೇಗಾದ ಕತ್ತು ಹಿಸುಕದಿರಿ





ಬಗರ್ ಹುಕುಂ ಸಾಗುವಳಿದಾರರ ಮೇಲೆ ದೌರ್ಜನ್ಯ

ಚುನಾವಣೆ: ಜನತೆಯ ಹೊಣೆ


ಅದಾನಿಯನ್ನು ಕಟಕಟೆ ಹತ್ತಿಸಲು ನಿರಾಕರಣೆ

ಇದುವರೆಗೆ ಮೂರು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ
ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?
ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3 – ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಈಗ ಮಿಥ್ಯೆ 4: ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು ಎಂಬುದು.
ವಾಸ್ತವವಾಗಿ, ಜಿನ್ನಾರ ಮುಸ್ಲಿಂಲೀಗಿನ ಪ್ರತ್ಯೇಕತಾವಾದಕ್ಕೆ ಸಮರ್ಥನೆ ದೊರೆತದ್ದು ಸಾವರ್ಕರರಿಂದಲೇ ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ ಓದಿ.. .. ...

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಡಾ. ಶಮ್ಸುಲ್ ಇಸ್ಲಾಂ
ಅನು: ಟಿ.ಸುರೇಂದ್ರರಾವ್



ಭಾಗ–23

ಸಾವರ್ಕರ್ ಸಾಮಾನ್ಯವಾಗಿ ಕಾಂಗ್ರೆಸ್ ವಿರುದ್ಧ ಮುಸ್ಲಿಂ ಲೀಗಿನೊಂದಿಗೆ ಒಗ್ಗೂಡುತ್ತಿದ್ದರು

ವಿವಿಧ ಪ್ರಾಂತಗಳಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಾಗಿ ತಮ್ಮ ಪಕ್ಷವು ಮುಸ್ಲಿಂ ಲೀಗಿನೊಂದಿಗೆ ಒಗ್ಗೂಡಿ ಕೆಲಸ ಮಾಡುತ್ತಿತ್ತು ಎಂದು ಸಾವರ್ಕರ್ 1940 ರಲ್ಲಿ ಹಿಂದೂ ಮಹಾಸಭಾದ ಮದುರಾ ಸಮ್ಮೇಳನದ 22 ನೇ ಅಧಿವೇಶನದಲ್ಲಿ ಭಾಷಣ ಮಾಡುವಾಗ ಒಪ್ಪಿಕೊಂಡಿದ್ದರು. ಈ ಕೆಳಗಿನ ಅವರ ಮಾತುಗಳೇ ಹಿಂದೂ ಮುಸ್ಲಿಂ ಕೋಮುವಾದಿ ಪಕ್ಷಗಳು ಕಾಂಗ್ರೆಸ್ ವಿರುದ್ಧ ಐಕ್ಯತೆಯಿಂದ ಕೆಲಸ ಮಾಡಿದ್ದವು ಎನ್ನುವುದನ್ನು ಪುಷ್ಟೀಕರಿಸುತ್ತವೆ:

"ಹಲವಾರು ಸ್ಥಳಗಳಲ್ಲಿ ಅವರು (ಹಿಂದೂ ಮಹಾಸಭಾದವರು) ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದರು ಮತ್ತು ಇವತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಮತ್ತು ಕೆಲವು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದೂ ಸಂಘಟನೆಯ ಪಕ್ಷದ ಪ್ರತಿನಿಧಿಗಳು ಪ್ರಭಾವೀ ಅಲ್ಪಸಂಖ್ಯಾತ ಗುಂಪುಗಳನ್ನು ರಚಿಸಿದ್ದವು; ಅದರ ಪರಿಣಾಮವಾಗಿ ಬಹಳ ಸಾರಿ ಮುಸ್ಲಿಂ ಸಚಿವ ಸಂಪುಟವನ್ನು ರಚಿಸುವಲ್ಲಿ ಪ್ರಭಾವ ಬೀರುವಷ್ಟು ಸಮತೋಲನವನ್ನು ಕಾದುಕೊಂಡಿತ್ತು.

ಅದರ ಜತೆಯಲ್ಲೇ, ಇಬ್ಬರು ಅಥವಾ ಮೂವರು ಹಿಂದೂ ಟಿಕೆಟುಗಳಿಗೆ ಬದ್ಧರಾಗಿರುವ ಹಿಂದೂ ಸಚಿವರುಗಳೂ (ಮುಸ್ಲಿಂ) ಸಚಿವ ಸಂಪುಟದಲ್ಲಿ ಇದ್ದಾರೆ.

ಜಿನ್ನಾರವರಂತೆಯೇ ಸಾವರ್ಕರ್ ಕೂಡ ವಿಶಾಲ ದೃಷ್ಟಿಯ ಎಲ್ಲರನ್ನೂ ಒಳಗೊಳ್ಳುವ ಸ್ವತಂತ್ರ ಭಾರತದಲ್ಲಿ ತಮಗೆ ಆಸಕ್ತಿ ಇಲ್ಲ ಎಂದು ನಿಸ್ಸಂದಿಗ್ಧವಾಗಿ ಹೇಳಿದ್ದರು.

"ಆಗ ಸ್ವರಾಜ್ಯ ಎನ್ನುವುದರ ನಿಜವಾದ ಅರ್ಥವೇನೆಂದರೆ ಭಾರತವೆಂಬ ಭೂಮಿಯ ತುಂಡಾಗಿದ್ದ ಕೇವಲ ಭೌಗೋಳಿಕ ಸ್ವಾತಂತ್ರ್ಯವದಾಗಿರಲಿಲ್ಲ. ಹಿಂದೂಗಳಿಗೆ ಹಿಂದೂಸ್ತಾನದ ಸ್ವಾತಂತ್ರ್ಯ ಗಳಿಸುವುದು ಮಾತ್ರವೇ ಒಂದು ಮೌಲ್ಯವಾಗಿತ್ತು ಮತ್ತು ಅದು ಧಾರ್ಮಿಕ, ಜನಾಂಗೀಯ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಖಾತ್ರಿಪಡಿಸುವ ಹಿಂದುತ್ವವಾಗಿತ್ತು. ನಮ್ಮ 'ಸ್ವತ್ವ' ನಮ್ಮ ಹಿಂದುತ್ವವನ್ನೇ ಬಲಿಕೊಟ್ಟೇ ಪಡೆಯಬಹುದಾದ 'ಸ್ವರಾಜ್ಯ'ದ ಸಲುವಾಗಿ ಹೋರಾಡುವುದು ನಮ್ಮ ಧ್ಯೇಯವಾಗಿರಲಿಲ್ಲ."

'ಹಿಂದೂ ರಾಷ್ಟ್ರ'ಕ್ಕೆ ಒತ್ತಾಯ ಮತ್ತು 'ಶುದ್ಧಿ'ಗೆ ಸಮರ್ಥನೆ

ಮುಸ್ಲಿಂ ಕೋಮುವಾದಿಗಳಂತೆ ಸಾವರ್ಕರ್ ಅವರು ಕೂಡ ಭಾರತೀಯ ಸಮುದಾಯದ ಒಗ್ಗಟ್ಟನ್ನು ನಾಶಪಡಿಸಲು ಪಟ್ಟು ಹಿಡಿದಿದ್ದರು. ಸಾಮ್ರಾಜ್ಯವಾದಿ ದೊರೆಗಳಿಗೆ ಸವಾಲು ಎಸೆಯುವ ಯಾವುದೇ ಕನಸನ್ನು ಅವರು ಕಂಡಿರಲಿಲ್ಲ. ಸಾವರ್ಕರ್ ಅವರ ಶತ್ರುಗಳ ಪಟ್ಟಿಯಲ್ಲಿ ಆಳರಸರು ಇರಲಿಲ್ಲ. ಅವರ ನಿಜವಾದ ಶತ್ರುಗಳೆಂದರೆ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಾಂಗ್ರೆಸ್ ಮುಖಂಡರಾಗಿದ್ದರು. ಭಾರತೀಯ ಸಮುದಾಯದ ಐಕ್ಯತೆಯ ಬಗ್ಗೆ ಭಯಬೀತರಾಗಿದ್ದ ಆಳರಸರಿಗೆ ಸಾವರ್ಕರ್ ಅವರ ತಂತ್ರಗಳು ಬಹಳ ಚೆನ್ನಾಗಿ ಸರಿಹೊಂದುತ್ತಿದ್ದವು ಎನ್ನುವುದಕ್ಕೆ ಈ ಪ್ರಸಂಗವೇ ಉದಾಹರಣೆ. ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಎಲ್ಲರ ಒಗ್ಗಟ್ಟು ಭಾರತದ ಅಗತ್ಯವಾಗಿದ್ದ ಸಮಯದಲ್ಲಿ ಸಾವರ್ಕರ್ ಈ ಕೆಳಗಿನ ಸಂಕುಚಿತ ಬುದ್ಧಿಯಿಂದ ಕರೆ ನೀಡುವುದರಲ್ಲಿ ನಿರತರಾಗಿದ್ದರು:

"ನೀವೆಲ್ಲರೂ ಹಿಂದೂಗಳೆಂದು ಸಾರಿ ಹೇಳಬೇಕೆಂದು ನಾನು ಹುರಿದುಂಬಿಸುತ್ತೇನೆ! ಹಾಗೆ ಹೇಳುವುದು ರಾಷ್ಟ್ರೀಯವಲ್ಲದ್ದು ಎಂತಲೋ, ಶ್ರೀರಾಮ ಮತ್ತು ಶ್ರೀ ಕೃಷ್ಣಶಿವಾಜಿ ಮತ್ತು ಪ್ರತಾಪ ಹಾಗೂ ಗೋವಿಂದ್ ಸಿಂಘ್‌ರ ವಂಶದಲ್ಲಿ ಹುಟ್ಟಿದ್ದೇ ಕಳಂಕಪ್ರಾಯವಾದುದು ಎಂದು ನಾವು ಹಿಂದೂಗಳೆಂದು ಹೇಳಿಕೊಳ್ಳಲು ನಾಚಿಕೆಪಡುವ ಅಪರಾಧಿಭಾವಕ್ಕೆ ನನ್ನ ಧಿಕ್ಕಾರವಿದೆ! ನಾವು ಹಿಂದೂಗಳು ಈ ಸೌರಮಂಡಲದಲ್ಲಿ ನಮ್ಮದೇ ಆದ ರಾಷ್ಟ್ರವೊಂದನ್ನು ಹೊಂದಬೇಕು ಮತ್ತು ಶಕ್ತಿವಂತ ಜನರ ವಂಶದ ಕುಡಿಗಳಾಗಿ ಹಿಂದೂಗಳು ಪ್ರವೃದ್ಧಮಾನಕ್ಕೆ ಬರುವುದು ಮುಂದುವರಿಯಬೇಕು. ಕೇವಲ ಧಾರ್ಮಿಕ ಅರ್ಥದಲ್ಲಿ ಮಾತ್ರವಲ್ಲ ರಾಜಕೀಯ ದೃಷ್ಟಿಯಿಂದ ಕೂಡ ಶುದ್ಧಿಗಾಗಿ ಮೇಲೇಳಿ."

ಹಿಂದೂ ರಾಷ್ಟ್ರೀಯವಾದದ ಪ್ರತ್ಯೇಕತಾವಾದೀ ಸಿದ್ಧಾಂತದ ಅಪ್ಪಟ ನಂಬಿಕಸ್ಥನಾಗಿ ಸಾವರ್ಕರ್ "ಮತಾಂತರ ಮಾಡುವುದು ರಾಷ್ಟ್ರವಾದಿಯ ಬದಲಾವಣೆಗೆ ದಾರಿ ಮಾಡಿ ಕೊಡುತ್ತದೆ ಎಂದು ಘೋಷಣೆ ಮಾಡಿದರು. ಎಲ್ಲಾ ಹಿಂದೂ ಸಂಘಟನೆಯವರಿಗೆ ಸಾವರ್ಕರ್ ಹೀಗೆ ಹೇಳಿದರು:

"ಕ್ರಿಶ್ಚಿಯನ್ ಮಿಷನರಿಯವರ ಮತಾಂತರದ ಚಟುವಟಿಕೆಗಳನ್ನು ಗಮನಿಸಿ, ಅದು ಯಾವಾಗಲೂ ರಾಷ್ಟ್ರೀಯತ್ವದ ಬದಲಾವಣೆಗೆ ದಾರಿ ಮಾಡಿಕೊಟ್ಟಿದೆ . . ಆದ್ದರಿಂದ ಹಿಂದೂ ಮಹಾಸಭಾ, ಆರ್ಯಸಮಾಜ ಮತ್ತು ಜನಸಂಘ (ಈಗಿನ ಭಾರತೀಯ ಜನತಾ ಪಕ್ಷದ ಪೂರ್ವರೂಪ) ದವರಿಗೆ ಮನವಿ ಮಾಡಿ ಕ್ರಿಶ್ಚಿಯನ್ ಮಿಷನರಿಯವರ ಧಾರ್ಮಿಕ–ರಾಷ್ಟ್ರೀಯವಾದಿ ಆಕ್ರಮಣದ ವಿರುದ್ಧ ನೇರ ದಾಳಿ ಮಾಡಿ ಮತ್ತು ಆ ಮೂಲಕ ಭಾರತ ಕ್ರಿಶ್ಚಿಯನ್‌ಸ್ತಾನವಾಗುವುದನ್ನು ತಡೆಯಿರಿ ಮನವಿ ಮಾಡುತ್ತೇನೆ.

ಸಾವರ್ಕರ್ ಅವರ ಪೂನಾ ಭೇಟಿಯ ನಂತರ ಕಟ್ಟಾ ಹಿಂದೂ ಶ್ರದ್ಧಾಳುಗಳು ನಗರದಲ್ಲಿನ ಕ್ರಿಶ್ಚಿಯನ್ ಮಿಷನರಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸಿದರು; 'ಸರಿಯಾದ ಕೆಲಸ'ವನ್ನೇ ಮಾಡಿದ್ದೀರಿ ಎಂದ ಅವರು "ಹಿಂದೂಗಳು ಕ್ರಿಶ್ಚಿಯನ್ ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ಬಹಿಷ್ಕರಿಸಿ, ಏಕೆಂದರೆ ಭಾವಿ ಮತಾಂತರಿಗಳನ್ನು ಹುಟ್ಟುಹಾಕುವವರೇ ಅವರು" ಎಂದು ಒತ್ತಾಯಿಸಿದರು.

ಹಿಂದೂಗಳು ಮತ್ತು ಮುಸ್ಲಿಮರು ಎರಡು ಪ್ರತ್ಯೇಕ ರಾಷ್ಟ್ರಗಳಿಗೆ ಸೇರಿದವರು ಎಂದು ಸಾವರ್ಕರ್ ನಂಬಿದ್ದರು ಮತ್ತು ಆ ಸಿದ್ಧಾಂತದ ಪ್ರಕಾರ ಸಿಖ್ಖರು ಕೂಡ ಹಿಂದೂವಾದದ ಭಾಗವೇ ಆಗಿದ್ದಾರೆ. ಆದರೆ ಅವರ ಕಾಂಗ್ರೆಸ್ ವಿರೋಧಿ ಕುರುಡು ನಂಬಿಕೆಯಿಂದಾಗಿ, ಸಿಖ್ಖರು ತಮ್ಮದೇ ಆದ ಪ್ರತ್ಯೇಕ ಸಮುದಾಯ ಹಾಗೂ ದೇಶವನ್ನು ಕಟ್ಟಿಕೊಳ್ಳಲಿ ಎಂದು ಬಯಸಿದರು. ಸಿಖ್ಖರು ಸಿಖ್ಖಿಸ್ತಾನ್ ಅಥವಾ ಪ್ರತ್ಯೇಕ ಸಿಖ್ ತಾಯ್ನಾಡನ್ನು ರಚಿಸಿಕೊಳ್ಳಲಿ ಎನ್ನುವಷ್ಟರಮಟ್ಟಿಗೆ ಸಾವರ್ಕರ್ ಹೋದರು. ಸಾವರ್ಕರ್ ಹೇಳುತ್ತಾರೆ:

"ನಮ್ಮ ಸಿಖ್ ಬಂಧುಗಳು ಕಾಂಗ್ರೆಸ್ ಮನೋಭಾವದ ಸಂಕೋಲೆಯಿಂದ ಅಥವಾ ಮುಖ್ಯವಾಗಿ ಕಾಂಗ್ರೆಸ್ ಸಂಸ್ಥೆಯಿಂದ ಸಂಪೂರ್ಣವಾಗಿ ಮುಕ್ತರಾಗಬೇಕು ಎಂಬ ಅಂಶವನ್ನು ನಾನು ಒತ್ತಿಹೇಳಲು ಬಯಸುತ್ತೇನೆ. ಏಕೆಂದರೆ ಕಾಂಗ್ರೆಸ್ ತನ್ನ ಅಪ್ಪಟ ಅಹಿಂಸಾ ಹುಚ್ಚಾಟಗಳಿಂದಾಗಿ ಸಂಪೂರ್ಣವಾಗಿ ಹಿಂದೂ ವಿರೋಧಿಯಾಗಿದೆ ಮತ್ತು ದೇಶವಿರೋಧಿಯಾಗಿದೆ ಮತ್ತು ಪಾಕಿಸ್ತಾನ ಬೇಡಿಕೆಗೆ ಬಹಿರಂಗ ಮೌನಸಮ್ಮತಿ ನೀಡಿದೆ; ಮತ್ತು ಹಿಂದೂರಾಷ್ಟ್ರದ ಹಿತಾಸಕ್ತಿಯನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಸಿಖ್ ಬಂಧುಗಳು ಇಡಿಯಾಗಿ ಬಹಿರಂಗ ವಾಗ್ದಾನ ಮಾಡಿದರೆ ಮತ್ತು ಕಾಂಗ್ರೆಸ್ ಟಿಕೆಟ್‌ನ ಬದಲು ಪೂರ್ತಿಯಾಗಿ ಸಿಖ್ ಟಿಕೆಟಿನ ಮೇಲೆ ಶಾಸನಸಭೆಗೆ ತನ್ನ ಪ್ರತಿನಿಧಿಗಳನ್ನು ಕಳಿಸಿದರೆ ಮುಂಚಿನಂತೆ ಈ ದೇಶದ ಹೋರಾಟದ ಶಕ್ತಿಗಳ ಜತೆ ತಕ್ಕುದಾದ ಪಾಲನ್ನು ಪಡೆದರೆ, ಮುಸ್ಲಿಮರು ಪಾಕಿಸ್ತಾನದ ಹಗಲು ಕನಸಿನಿಂದ ಎಚ್ಚರವಾದಾಗ, ಇವರೂ ಕೂಡ ಪಂಜಾಬಿನ ಬದಲಾಗಿ ಸಿಖ್ಖಿಸ್ತಾನವನ್ನು ಸ್ಥಾಪನೆಯಾಗುವುದನ್ನು ನೋಡಬಹುದು."

ಸ್ವಾತಂತ್ರ್ಯ ಪೂರ್ವ ಭಾರತದ ಹಿಂದೂ–ಮುಸ್ಲಿಂ ಸ್ಪರ್ಧಾತ್ಮಕ ಕೋಮುವಾದಿ ರಾಜಕೀಯದ ಕಟು ಟೀಕಾಕಾರರಾದ ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಬಿಚ್ಚುಮನಸ್ಸಿನ ಅಭಿಪ್ರಾಯಗಳನ್ನು ಹೀಗೆ ತೆರೆದಿಡುತ್ತಾರೆ:

"ಮೇಲ್ನೋಟಕ್ಕೆ ಸೋಜಿಗವೆನಿಸಿದರೂ, ಸಾವರ್ಕರ್ ಮತ್ತು ಜಿನ್ನಾ ಇಬ್ಬರೂ ಒಂದು ರಾಷ್ಟ್ರ ಮತ್ತು ದ್ವಿರಾಷ್ಟ್ರದ ವಿಚಾರದಲ್ಲಿ ಪರಸ್ಪರ ವಿರೋಧಿಗಳಾಗುವ ಬದಲು ಅದರ ಬಗ್ಗೆ ಸಂಪೂರ್ಣ ಸಹಮತ ಹೊಂದಿದ್ದಾರೆ. ಇಬ್ಬರೂ ಸಹಮತ ಹೊಂದಿರುವುದು ಮಾತ್ರವಲ್ಲ, ಭಾರತದಲ್ಲಿ ಎರಡು ರಾಷ್ಟ್ರಗಳಿವೆ – ಒಂದು ಹಿಂದೂ ರಾಷ್ಟ್ರ ಮತ್ತು ಇನ್ನೊಂದು ಮುಸ್ಲಿಂ ರಾಷ್ಟ್ರ, ಎಂದು ಸಮರ್ಥಿಸುತ್ತಾರೆ ಕೂಡ. ಆ ಎರಡು ರಾಷ್ಟ್ರಗಳು ಯಾವ ಕರಾರುಗಳು ಹಾಗೂ ಷರತ್ತುಗಳ ಆಧಾರದಲ್ಲಿ ಇರಬೇಕು ಎಂಬ ಬಗ್ಗೆ ಮಾತ್ರ ಅವರಿಬ್ಬರಲ್ಲಿ ವ್ಯತ್ಯಾಸ ಇದೆ ಅಷ್ಟೆ.

ಭಾರತೀಯ ಮುಸ್ಲಿಮರ ಬಗೆಗಿನ ಸಾವರ್ಕರ್ ಅವರ ಉದ್ದೇಶಗಳು 'ಅತಾರ್ಕಿಕವಾದುದು' ಎಂದು ವಿವರಿಸುತ್ತಾ ಅಂಬೇಡ್ಕರ್ ಹೀಗೆ ಹೇಳುತ್ತಾರೆ:

"ಮುಸ್ಲಿಮರು ಪ್ರತ್ಯೇಕ ರಾಷ್ಟ್ರ ಎಂದು ಸಾವರ್ಕರ್ ಒಪ್ಪಿಕೊಳ್ಳುತ್ತಾರೆ. . . ಅವರು ರಾಷ್ಟ್ರೀಯ ಬಾವುಟ ಹೊಂದಲು ಸಮ್ಮತಿಸುತ್ತಾರೆ. ಆದರೂ ಮುಸ್ಲಿಂ ರಾಷ್ಟ್ರಕ್ಕೊಂದು ಪ್ರತ್ಯೇಕ ರಾಷ್ಟ್ರೀಯ ತಾಯಿನಾಡನ್ನು ಅವರು ವಿರೋಧಿಸುತ್ತಾರೆ. ಹಿಂದೂರಾಷ್ಟ್ರಕ್ಕೆ ಒಂದು ತಾಯಿನಾಡು ಬೇಕೆಂದು ಸಮರ್ಥಿಸುವ ಅವರು, ಮುಸ್ಲಿಂ ರಾಷ್ಟ್ರಕ್ಕೆ ಒಂದು ರಾಷ್ಟ್ರೀಯ ತಾಯಿನಾಡನ್ನು ಹೇಗೆ ತಿರಸ್ಕರಿಸುತ್ತಾರೆ?

"ಹಿಂದೂ ರಾಷ್ಟ್ರವು ಅದಕ್ಕೆ ಸಲ್ಲಬೇಕಾದ ಪ್ರಮುಖ ಸ್ಥಾನವನ್ನು ಹೊಂದಲು ಅವಕಾಶ ನೀಡುತ್ತದೆ ಮತ್ತು ಮುಸ್ಲಿಂ ರಾಷ್ಟ್ರವು ಹಿಂದೂ ರಾಷ್ಟ್ರದೊಂದಿಗೆ ಅಧೀನ ಸ್ಥಾನದ ಸಹಕಾರದಲ್ಲಿ ಬದುಕಿರಬೇಕು." ಎಂಬ ಸಾವರ್ಕರ್ ಅವರ ಹಿಂದುತ್ವ ಭಾವೋತ್ತೇಜಕ ಮಾತುಗಳ ಕುರಿತು ಡಾ.ಅಂಬೇಡ್ಕರ್ "ಅದು ನಿಜಕ್ಕೂ ಭಾರತದ ರಕ್ಷಣೆ ಮತ್ತು ಸುರಕ್ಷತೆಗೆ ಅತ್ಯಂತ ಅಪಾಯಕಾರಿ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ" ಎಂದು ಎಚ್ಚರಿಸುತ್ತಾರೆ. ಭಾರತವನ್ನು ಒಡೆಯುವ ಅಪಾಯ ಬಹಳ ದೂರವಿಲ್ಲ ಎಂದು ಬರೆದ ಡಾ.ಅಂಬೇಡ್ಕರ್ "ಸಾವರ್ಕರ್ ಅವರು ಮುಸ್ಲಿಂ ರಾಷ್ಟ್ರವನ್ನು ಹಿಂದೂ ರಾಷ್ಟ್ರದ ಸಮಾನ ಅಧಿಕಾರದೊಂದಿಗೆ ಇರಲು ಅವಕಾಶ ನೀಡುವುದಿಲ್ಲ. ಹಿಂದೂ ರಾಷ್ಟ್ರವು ಪ್ರಧಾನ ರಾಷ್ಟ್ರವಾಗಿರಬೇಕು ಮತ್ತು ಮುಸ್ಲಿಂ ರಾಷ್ಟ್ರವು ಅಧೀನವಾಗಿರಬೇಕು ಎಂದು ಸಾವರ್ಕರ್ ಬಯಸುತ್ತಾರೆ. ಹಿಂದೂ ರಾಷ್ಟ್ರ ಮತ್ತು ಮುಸ್ಲಿಂ ರಾಷ್ಟ್ರದ ನಡುವೆ ಹಗೆತನದ ಬೀಜ ಬಿತ್ತಿದ ನಂತರ, ಒಂದು ಸಂವಿಧಾನದ ಅಡಿಯಲ್ಲಿ ಮತ್ತು ಒಂದು ದೇಶವಾಗಿ ಅವರು ಇರಬೇಕೆಂದು ಸಾವರ್ಕರ್ ಏಕೆ ಬಯಸುತ್ತಾರೆ ಎನ್ನುವುದನ್ನು ವಿವರಿಸುವುದು ಕಷ್ಟವೇ ಸರಿ" ಎನ್ನುತ್ತಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂಪರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಸಂಪಾದಕೀಯ

ಚುನಾವಣೆ ಮತ್ತು ಜನತೆಯ ಹೊಣೆ

ಕರ್ನಾಟಕದ ವಿಧಾನಸಭಾ ಚುನಾವಣಾ ಪ್ರಕ್ರಿಯೆಗಳು ಆರಂಭಗೊಂಡಿವೆ. ಕಳೆದ ಮಾರ್ಚ್ 29 ರಿಂದಲೇ ನೀತಿ ಸಂಹಿತೆ ಜಾರಿಯಾಗಿದೆ. ದಾವಣಗೆರೆಯಲ್ಲಿ ಪ್ರಧಾನಿಗಳ ಕಾರ್ಯಕ್ರಮ 25ಕ್ಕೆ ಮುಗಿದ ಬಳಿಕ ಯಾವಾಗಲಾದರೂ ಘೋಷಿತವಾಗಬಹುದು ಎಂಬುದು ನಿರೀಕ್ಷಿತವೇ ಆಗಿತ್ತು. ಎಪ್ರಿಲ್ 10ರಿಂದ ನಾಮಪತ್ರ ಸಲ್ಲಿಕೆ, ಮೇ 10 ರಂದು ಮತದಾನ, 13 ಕ್ಕೆ ಎಣಿಕೆ ನಿಗದಿಯಾಗಿದೆ. ಈಗಿನ ಮಾಹಿತಿಯಂತೆ ರಾಜ್ಯದಲ್ಲಿ ಸುಮಾರು 5 ಕೋಟಿ 20ಲಕ್ಷ ಮತದಾರರಿದ್ದಾರೆ. 58,282 ಮತಗಟ್ಟೆಗಳಿವೆ. ಜನತೆ ಶಾಸಕಾಂಗವನ್ನು ಚುನಾಯಿಸಿ ಕೊಳ್ಳುವ ಪ್ರಜಾಪ್ರಭುತ್ವೀಯ ಪ್ರಕ್ರಿಯೆಯ ಅವಕಾಶವಿದು. ಈ ಒಟ್ಟು ಪ್ರಕ್ರಿಯೆಯೇ ಸ್ವಾಗತಾರ್ಹ. ತ್ಯಾಗ ಬಲಿದಾನಗಳ ಮಹಾನ್ ಹೋರಾಟದಿಂದ ಗಳಿಸಿದ, ಭಾರತದ ಸಂವಿಧಾನ ಕೊಡ ಮಾಡಿದ ಈ ಹಕ್ಕನ್ನು ಪ್ರಜೆಗಳು ಜಾಗೃತಿಯಿಂದ ಸೂಕ್ತವಾಗಿ ಚಲಾಯಿಸಬೇಕು. ಇತ್ತೀಚಿನ ದಿನಗಳಲ್ಲಿ ಮತದಾನದ ಬಗ್ಗೆ ನೀರಸ ಪ್ರತಿಕ್ರಿಯೆ ಹೆಚ್ಚುತ್ತಿರುವುದು ಆತಂಕದ ವಿಷಯ. ಇಂದಿನ ರಾಜಕೀಯ ವಾತಾವರಣ, ವಿಶೇಷವಾಗಿ, ಆಡಳಿತ ನಡೆಸುತ್ತಿರುವ, ನಡೆಸಿದ ರಾಜಕೀಯ ಪಕ್ಷಗಳ ಕಾರ್ಯ ವೈಖರಿ ಜನಸಾಮಾನ್ಯರಲ್ಲಿ ಹತಾಶೆ, ನಿರಾಶೆ ಹೆಚ್ಚಿಸಿ ಸಿನಿಕತನವನ್ನು, ಆಯ್ಕೆಗೆ ವಿರೋಧವನ್ನು ಬೆಳೆಸಿದೆ. ಇದನ್ನು ಚುನಾವಣಾ ಆಯೋಗ ವಿಶೇಷವಾಗಿ ಗಮನಿಸಬೇಕು, ಸಂಕುಚಿತ ಹಿತಾಸಕ್ತಿಗಳನ್ನು ಬದಿಗಿರಿಸಿ ರಾಜಕೀಯ ಪಕ್ಷಗಳು, ನಾಗರೀಕ ಸಂಘ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸಿ ಜನತೆ ಮತದಾನದಲ್ಲಿ ಪೂರ್ಣವಾಗಿ ತೊಡಗುವಂತೆ ಮಾಡಬೇಕು. ಮತದಾನದಿಂದಲೇ ದೂರ ಉಳಿಯುವ ಸಿನಿಕತೆಯು ಜನ ವಿರೋಧಿಗಳಿಗೆ ಪಾಠ ಕಲಿಸಲು ಸಿಕ್ಕ ಅತ್ಯುತ್ತಮ ಅವಕಾಶವನ್ನು ಕಳೆದುಕೊಳ್ಳುವಂತಾಗಿಸುತ್ತದೆ. ಇಂತಹ ನಿಷ್ಕ್ರಿಯತೆ ನಮ್ಮ ವಿರುದ್ಧವೇ ನಾವು ಎಸಗಿದಂತೆ ಎನ್ನುವುದನ್ನು ಜನತೆ ಸಹ ಅರ್ಥ ಮಾಡಿಕೊಳ್ಳಬೇಕಿದೆ. ಬಳಿಕ ಆಡಳಿತಗಾರರ ಬಗ್ಗೆ ಗೊಣಗಲೂ ನೈತಿಕತೆ ಇಲ್ಲವಾಗುತ್ತದೆ.

ಇದೇ ಸಂದರ್ಭದಲ್ಲಿ ಅತ್ಯಂತ ಅಪಾಯಕಾರಿ ಬೆಳವಣಿಗೆಯೊಂದು ಕಾಣಿಸಿಕೊಂಡಿದೆ.

ಜನವರಿಯಲ್ಲಿ ದೊರೆತ ಮಾಹಿತಿಯಂತೆ ಕರ್ನಾಟಕದ ಸುಮಾರು 25 ಲಕ್ಷಕ್ಕೂ ಅಧಿಕ ಮತದಾರರ ಹೆಸರುಗಳು ಪಟ್ಟಿಯಿಂದ ಕಾಣೆಯಾಗಿರುವುದು ವರದಿಯಾಗಿದೆ. ಅದರಲ್ಲಿ ಸುಮಾರು ಏಳು ಲಕ್ಷದಷ್ಟು ಜನ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಪರಿಶೀಲಿಸಿಕೊಳ್ಳಲು ಆಯೋಗ ಅವಕಾಶ ನೀಡಿದೆ. ಆದರೂ ಅಂತಹ ಒಂದು ತಿಳುವಳಿಕೆ ಮತ್ತು ಅವಕಾಶಗಳು ಸಾಮಾನ್ಯ ಜನತೆಗೆ ಇರುವುದಿಲ್ಲ ಎನ್ನುವುದು ವಾಸ್ತವ. ಮತ್ತೂ ಒಂದು ಅಂಶವೆಂದರೆ ತಮ್ಮ ಹೆಸರನ್ನು ಸೇರ್ಪಡೆ ಮಾಡಲು ಕೋರಿದಾಗಲು ಮುಸ್ಲಿಂ ಅಲ್ಪಸಂಖ್ಯಾತರ ಅಹವಾಲುಗಳಿಗೆ ಕಿವಿ ಕೊಡುತ್ತಿಲ್ಲ ಎನ್ನುವುದು. ಇಂಥಹ ಪ್ರಕರಣಗಳನ್ನು ಚುನಾವಣಾ ಆಯೋಗ ಗಂಭೀರವಾಗಿ ತೆಗೆದುಕೊಂಡು ಕೂಡಲೇ ಸರಿಪಡಿಸಬೇಕು. ಅಧಿಕಾರಿಗಳ ವ್ಯಾಪಕ ಪಾಲ್ಗೊಳ್ಳುವಿಕೆ ಇಲ್ಲದೆ ಇಂತಹ ಕೃತ್ಯಗಳು ಜರುಗಲು ಸಾಧ್ಯವಿಲ್ಲ. ಇದನ್ನು ತಡೆಯದಿದ್ದರೆ ಚುನಾವಣಾ ಆಯೋಗದ ಗೌರವವೇ ಪ್ರಶ್ನಾರ್ಥವಾಗುತ್ತದೆ.

ಇಂತಹ ಚುನಾವಣೆಗಳನ್ನು 'ಪ್ರಜಾಪ್ರಭುತ್ವದ ಹಬ್ಬ' ಎಂದು ಕರೆಯುವ ವಾಡಿಕೆ ಇದೆ. ಅಂತಹ ಅರ್ಥವಂತಿಕೆಯ ಮಾತು ರಾಜ್ಯದಲ್ಲಿ ಬಹುತೇಕ ಪ್ರಾಯೋಗಿಕವಾಗಿ ಸವಕಲಾಗಿದೆ. ಚುನಾವಣೆಯಲ್ಲಿ ಪಾಲ್ಗೊಳ್ಳುವ ರಾಜಕೀಯ ಪಕ್ಷಗಳ ನೀತಿ ನಿಲುವುಗಳು ಮತ್ತು ಅವುಗಳು ಮಾಡಿದ ಕೆಲಸ ಕಾರ್ಯಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸುವುದು ಮತ್ತು ಅವು ಕೊಟ್ಟ ಮಾತಿಗೆ ತಪ್ಪಿದಲ್ಲಿ ಮತ್ತು ಜನದ್ರೋಹವೇನಾದರೂ ಎಸಗಿದಲ್ಲಿ ಅವುಗಳನ್ನು ತಿರಸ್ಕರಿಸುವುದು ಮತ್ತು ಪರ್ಯಾಯವಾಗಿ ಹೊಸ ಶಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆ ವಿಷಯಗಳ ಆಧಾರಿತವಾಗಿ ಚರ್ಚೆ, ಸಂವಾದ, ಟೀಕೆ–ವಿಮರ್ಶೆಗಳು ಮತ್ತು ಪರ್ಯಾಯದ ಸೂಚನೆಗಳನ್ನು ನೀಡಬೇಕು. ಜನಮತ ಮಂಥನವಾಗಬೇಕು. ಆದರೆ ಇಂದಿನ, ಇತ್ತೀಚಿನ ಎಲ್ಲಾ ಚುನಾವಣೆಗಳಲ್ಲಿ ಪ್ರಚಾರ ವೈಖರಿಗಳನ್ನು ಗಮನಿಸಿದಾಗ ಅಂತಹದ್ದೊಂದು ಆರೋಗ್ಯಕರ ಪ್ರಜಾಸತ್ತಾತ್ಮಕ ಚರ್ಚೆಯ ವಾತಾವರಣವೇ ಇಲ್ಲವಾಗಿದೆ ಎನಿಸುತ್ತದೆ.

ರಾಜಕೀಯ ಪಕ್ಷಗಳ ಪ್ರಚಾರ ಎನ್ನುವುದು ವ್ಯಕ್ತಿಗತ ದೂಷಣೆ ಮತ್ತು ಜನರ ನಡುವೆ ದ್ವೇಷಗಳನ್ನು ಹೆಚ್ಚಿಸುವ ಕೃತ್ಯಗಳಾಗಿವೆ. ಈಗಲೂ ಕರ್ನಾಟಕದ ಚುನಾವಣೆಯ ಸಿದ್ಧತೆಗೆ ಹಲವು ತಿಂಗಳುಗಳ ಹಿಂದಿನಿಂದಲೇ ಪಕ್ಷಗಳು ಧುಮುಕಿದ್ದರೂ ರಾಜ್ಯದ ಜನತೆ ಎದುರಿಸಿದ ಮತ್ತು ಭವಿಷ್ಯದಲ್ಲಿ ಆಗಬೇಕಿರುವ ಬದಲಾವಣೆ ಮತ್ತು ಸಾಧಿಸುವ ಕಣ್ಣೋಟದ ವಿಷಯ ಕೇಂದ್ರೀತವಾಗಿ ಚರ್ಚೆಗಳು ನಡೆಯುತ್ತಿಲ್ಲ. ಹೇಗಾದರೂ, ಯಾವುದೇ ಮಾರ್ಗಗಳನ್ನು ಅನುಸರಿಸಿ ಅಧಿಕಾರ ಹಿಡಿಯಬೇಕು ಎನ್ನುವ ದಾವಂತ ಪ್ರಧಾನವಾಗಿ ಕಾಣುತ್ತಿದೆ. ಚುನಾವಣಾ ನೀತಿ ಸಂಹಿತೆ ಘೋಷಿತವಾದ ಬೆನ್ನಲ್ಲೇ ರಾಜ್ಯದಲ್ಲಿ ಸಿಕ್ಕಿರುವ ಹಣ ಸೀರೆ ಕುಕ್ಕರ್ ಮುಂತಾದ ಮತದಾರರಿಗೆ ಕೊಡುವ ಕೊಡುಗೆಗಳ ಪ್ರಮಾಣ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ ಒಂದು ಸರಕಾರದ ಆಡಳಿತ ಪಕ್ಷದ ಕೆಲಸ ಕಾರ್ಯಗಳನ್ನು ವಿಮರ್ಶಿಸಿ ಮುಂದಿನ ಸರಕಾರವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ ಆಮಿಷಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಮತ್ತು ಅದನ್ನು ಬಹು ಮುಖ್ಯ ಸಾಧನವೆಂದು ರಾಜಕೀಯ ಪಕ್ಷಗಳು ಪರಿಗಣಿಸಿವೆ. ಚುನಾವಣಾ ಆಯೋಗ ಕ್ರಮ ವಹಿಸುತ್ತಿದೆ ಎಂದರೂ ಅಂತಹ ಅಡ್ಡ ದಾರಿಯ ಮಾರ್ಗಗಳಿಗೆ ತಡೆಯಾಗುತ್ತದೆ ಎನ್ನುವ ಸೂಚನೆಗಳೇನು ಇಲ್ಲ. ಚುನಾವಣಾ ಆಯೋಗವನ್ನು ಕಣ್ಣು ತಪ್ಪಿಸುವ ಅಥವಾ ಅಧಿಕಾರಿಗಳೇ ಒಂದೊಮ್ಮೆ ಕಣ್ಣುಮುಚ್ಚುವ ಅನೇಕ ನಿದರ್ಶನಗಳು ಇಲ್ಲದಿಲ್ಲ. ಶಾಂತಿಯುತ, ಒಂದು ಪ್ರಜಾಸತ್ತಾತ್ಮಕ ವಾತಾವರಣವು ಇರಕೂಡದು ಎನ್ನುವಂತೆ ಪ್ರಧಾನ ರಾಜಕೀಯ ಪಕ್ಷಗಳು ಹಣಬಲ ತೋಳ್ಬಲಗಳನ್ನು ಆಕ್ರಮಣಕಾರಿಯಾಗಿ ಪ್ರದರ್ಶಿಸುತ್ತಿವೆ.

ಚುನಾವಣೆಯಲ್ಲಿ ಜನಾದೇಶ ಇಲ್ಲದಿದ್ದರೂ ಸೆಳೆದ ಶಾಸಕರ ಬಲದಿಂದ ಕಳೆದ ನಾಲ್ಕು ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ ಪಕ್ಷ ಚುನಾವಣೆಯಲ್ಲಿ ಹೇಗಾದರೂ ಮಾಡಿ ಶತಾಯಗತಾಯ ಮತ್ತೇ ಅಧಿಕಾರ ಹಿಡಿಯಬೇಕೆಂದು ಪೂರ್ಣವಾಗಿ ತೊಡಗಿದೆ. ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳ ಬಲವನ್ನು, ಅಪಾರ ಸಂಪನ್ಮೂಲಗಳನ್ನು ಯಥೇಚ್ಛವಾಗಿ ಬಳಸುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಮತ್ತು ಗೃಹ ಸಚಿವ ಅಮಿತ್ ಶಾ ರವರು ರಾಜ್ಯಕ್ಕೆ ನೀಡುತ್ತಿರುವ ಭೇಟಿಗಳು ಮಾಡುತ್ತಿರುವ ಕಸರತ್ತುಗಳು ಆ ಪಕ್ಷ ಆಂತರಿಕವಾಗಿ ಸೋಲುವ ಭಯದಲ್ಲಿ ಇನ್ನಿಲ್ಲದ ಪ್ರಯತ್ನಗಳನ್ನು ನಡೆಸುತ್ತಿರುವುದನ್ನು ತೋರಿಸುತ್ತವೆ. ಅದು ಜನಾದೇಶಕ್ಕೆ ತಲೆಬಾಗದೇ ಇರುವ ದುರಹಂಕಾರವನ್ನು ತೋರಿಸುತ್ತದೆ. ಅಷ್ಟು ಮಾತ್ರವೇ ಅಲ್ಲ, ಜನತೆಯನ್ನು ಜಾತಿ ಮತ್ತು ಮತೀಯತೆಯ ಆಧಾರದಲ್ಲಿ ವಿಭಜಿಸುವ, ವಿದ್ವೇಷಗಳನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿರುವುದು, ಈಗಲೂ

ಪುಟ 05 ಕ್ಕೆ

ರಾಜ್ಯದಲ್ಲಿ ವಿಧಾನ ಸಭೆಗೆ ಚುನಾವಣೆಗಳು ಘೋಷಿತವಾದ ಕೂಡಲೇ ವಿವಿಧ ಪಕ್ಷಗಳು (ಮತದಾನ ಮೇ 10, 2023) ನಡೆಸುತ್ತಿದ್ದ ರಾಜಕೀಯ ಚಟುವಟಿಕೆಗಳು ತೀವ್ರ ವೇಗವನ್ನು ಪಡೆದುಕೊಂಡವು. ಕಾಂಗ್ರೆಸ್, ಬಿಜೆಪಿ, ಜಾತ್ಯಾತೀತ ಜನತಾ ದಳ ಪಕ್ಷಗಳಲ್ಲಿ ಹೆಚ್ಚಿದ ಚಟುವಟಿಕೆಗಳು. ವೇಗ ಪಡೆದುಕೊಂಡ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ. ಆಕಾಂಕ್ಷಿಗಳಲ್ಲೂ ತಳಮಳ. ಹೈಕಮಾಂಡ್ ಗಳಿಗೆ ಪಟ್ಟಿ ತಿದ್ದಿ ತೀಡಿ ನೀಡಿದರೂ ಅಂತಿಮಗೊಳಿಸಲಾಗದ ಸ್ಥಿತಿ. ಮೇಲೆ ಕೆಳಗೆ ಸಮಾಲೋಚನೆ. ಭಿನ್ನಮತ, ಪಕ್ಷಾಂತರ! ಯಾರು, ಯಾವ ಪಕ್ಷಕ್ಕೂ ಸುಲಭವಾಗಿ ಹೋಗಬಹುದು! ಯಾರಾದೂ ಯಾವ ಪಕ್ಷದಲ್ಲಿದ್ದರೂ ಆ ಪಕ್ಷದ ಸಿದ್ಧಾಂತ ಆದರ್ಶಗಳಿಗೆ ಬದ್ಧವಾಗಿ ಇರಬೇಕು ಎನ್ನುವ ಕಟ್ಟುಪಾಡೇನು ಇಲ್ಲವಲ್ಲ, ಹಣದ ಚೀಲ ಹಿಡಿದ ಗೆಲ್ಲುವ ಕುದುರೆ ಆಗಿದ್ದರೆ ಸಾಕು!

* * *

ಓಟುಗಳಿಗೆ ಗಾಳ ಹಾಕಿ ಕೂತವರು

ಈ ವಾರ

ಎಸ್.ವೈ. ಗುರುಶಾಂತ್

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ–ಎಸ್.ಸಿ. ಹಾಗೂ ಎಸ್.ಟಿ. ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕು, ನ್ಯಾ ಎಚ್ಎಲ್ ನಾಗಮೋಹನದಾಸ್ ರವರ ಆಯೋಗದ ವರದಿ ಬಿಡುಗಡೆಗೊಳಿಸಿ ಒಪ್ಪಬೇಕು ಎಂಬ ನ್ಯಾಯ ಸಮ್ಮತ ಬೇಡಿಕೆಯೊಂದಿಗೆ ಚಳುವಳಿಗಳು ನಡೆದಿರುವಾಗ ಮೀಸಲಾತಿ ಅಂತಹ ಸಂಕೀರ್ಣ ವಿಷಯದಲ್ಲಿ 'ಕೈ ಹಾಕಬೇಡಿ. ಅವಸರದ ತೀರ್ಮಾನವನ್ನು ಮಾಡಬೇಡಿ' ಎಂದು ಸಲಹೆ ನೀಡಿದ್ದ ಗೃಹ ಸಚಿವ ಅಮಿತ್ ಶಾ ಇದೀಗ ಮುಸ್ಲಿಮರಿಗೆ ನೀಡುತ್ತಿದ್ದ ಮೀಸಲಾತಿ ಅಸಂವಿಧಾನಿಕ ಎಂದು ಹೇಳಿದ್ದಾರೆ, ರಾಜ್ಯ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿದ್ದಾರೆ. ಮಾನ್ಯ ಗೃಹ ಸಚಿವರು ಕರ್ನಾಟಕದಲ್ಲಿನ ಮೀಸಲಾತಿ ನೀತಿ, ಅದರ ಅಳವಡಿಕೆಯ ಒಳ ಹೊರಗೆಗಳನ್ನು ಆಳವಾಗಿ ಪರಿಶೀಲಿಸಿದರೋ ಇಲ್ಲವೋ? ಇದಕ್ಕೆ ಕೇವಲ ಮುಸ್ಲಿಂ ವಿರೋಧ ಒಂದೇ ಕಾರಣವೋ ಎನ್ನುವ ಅನುಮಾನ ಬರುತ್ತದೆ. ಒಂದುವೇಳೆ ಅದರ ಬಗ್ಗೆ ತಿಳುವಳಿಕೆ ಇದ್ದಲ್ಲಿ ಹೀಗೆ ಹೇಳಿದ್ದರ ಉದ್ದೇಶ ದುರುದ್ದೇಶ ಎನ್ನುವುದು ಅರ್ಥವಾಗುತ್ತದೆ. ಮುಸ್ಲಿಮರಿಗೆ ಶೆ.4 ರಷ್ಟು ಮೀಸಲಾತಿ ನೀಡಿರುವುದು ಧರ್ಮದ ಆಧಾರದಲ್ಲಿ ಅಲ್ಲ ಎನ್ನುವುದು ತಿಳಿಯದಷ್ಟು ಮೂಢ ಮಂತ್ರಿ ಇವರು ಅಲ್ಲ. ಹಾಗಾದರೆ ದುರುದ್ದೇಶವೇ ಇಲ್ಲಿ ಪ್ರಧಾನ ಎಂದಾಯಿತು.

ಬಿಜೆಪಿಯ ನಾಯಕಕರಿಗೆ ಮೀಸಲಾತಿ ನೀತಿ ಎನ್ನುವುದು ಬೇಕಾಬಿಟ್ಟಿಯಾಗಿ ಮಾಡಬಹುದಾದ ರಾಜಕೀಯ ಚದುರಂಗದಾಟ ಎಂದೇ ಭಾವಿಸಿದಂತಿದೆ. ಅದರ ಹಿಂದಿರುವ ತರ್ಕ, ಮೂಲ ಕಾಳಜಿ, ಅರ್ಥ,ಅಗತ್ಯತೆ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳುತ್ತಿಲ್ಲ! ಅದಕ್ಕಿಂತಲೂ ಇಡೀ ಮಿಸಲಾತಿ ವ್ಯವಸ್ಥೆಯನ್ನು ಅರ್ಥಹೀನ ಗೊಳಿಸುವ ಅವರ ತಂತ್ರವೇ ಇಲ್ಲಿ ಎದ್ದು ಕಾಣುತ್ತದೆ. ಮೀಸಲಾತಿಯ ಬಗ್ಗೆ ಏನು ತೀರ್ಮಾನ ಕೈಗೊಳ್ಳಬೇಡಿ ಎಂದು ಹೇಳಿದ್ದ ಅಮಿತ್ ಶಾ ಈಗ ಚುನಾವಣೆ ಬಂದಿದೆ. ಸೂಕ್ತ ಸಮಯ, ಕೈಗೊಳ್ಳಿ ಎಂದು ಹೇಳಿದರೆ?

ಒಂದೊಮ್ಮೆ ನಿರ್ಧಾರ ಬೇಡ ಎಂದು ಹೇಳಿದ ಅಮಿತ್ ಶಾ ಈಗ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರ ಮೀಸಲಾತಿಯ ಕುರಿತಂತೆ ಮಾಡುತ್ತಿರುವ ಗೊಂದಲ ಗೋಜಲು ಮತ್ತು ಅರ್ಥಹೀನ ನಡೆಗಳಿಗೆ ಬೆಂಬಲ ಕೊಟ್ಟಿರುವುದಾದರೂ ಯಾಕೆ ಎನ್ನುವ ಪ್ರಶ್ನೆ? ಒಳ ಮೀಸಲಾತಿಯ ಕುರಿತಾದಂತೆ ಖೇಳಿದ ಬೇಡಿಕೆ ಸಹಜವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅದಕ್ಕೆ ಗಟ್ಟಿಯಾದ ಧ್ವನಿಗೂ ಬಂದಿದೆ. ಚುನಾವಣೆಗಳು ಘೋಷಿತವಾದ ಬೆನ್ನಲ್ಲೇ ಬಸವರಾಜ್ ಬೊಮ್ಮಾಯಿ ಅವರು ಒಳ ಮೀಸಲಾತಿಯನ್ನು ನಿರ್ಧರಿಸಿ ಕೇಂದ್ರಕ್ಕೆ ಪತ್ರ ಬರೆದಿರುವುದು ಆತುರದ ಕ್ರಮ ಅಲ್ಲವೇ? ಮಾತ್ರವಲ್ಲ, ಮುಂಬರುವ ಚುನಾವಣೆಗಳಲ್ಲಿ ಜಾತಿಗಳನ್ನು ಓಲೈಸಿಕೊಂಡು ಹೇಗಾದರೂ ಅಧಿಕಾರಕ್ಕೆ ಬರಬೇಕೆನ್ನುವ ಹುನ್ನಾರ ಅಲ್ಲವೇ? ಒಳ ಮೀಸಲಾತಿಯ ಇಂತಹ ವಿಂಗಡಣೆಗೆ ಮೂಲ ಆಧಾರ ಯಾವುದು? ಯಾವುದಾದರೂ ಆಯೋಗದ ವರದಿಗಳು, ಅಧ್ಯಯನ ಮಾಡಿದ ವರದಿಗಳು ಆಧಾರವಾಗಿ ಇವೆಯೇ? ಅಥವಾ ಈಗ ಕೊಡಲಾದ ವರದಿಗಳನ್ನು ಅಂಗೀಕರಿಸಲಾಗಿದೆಯೇ? ಎಂದರೆ ಇಲ್ಲ. ಒಳ ಮೀಸಲಾತಿಯ ಪ್ರಸ್ತಾವ ಇದೆ ಎನ್ನಲಾಗುವ ಜಸ್ಟಿಸ್ ಸದಾಶಿವ ಆಯೋಗದ ವರದಿ ಇದುವರೆಗೂ ಸಾರ್ವಜನಿಕವಾಗಿ ಮಂಡಿಸಲಾಗಿಲ್ಲ. ಅದನ್ನು ಒಪ್ಪುವ ಇಲ್ಲವೇ ತಿರಸ್ಕರಿಸಿದ ನಿರ್ಧಾರವೂ ಇಲ್ಲ. ಆದರೆ ಆ ವರದಿಯ ಕುರಿತಾಗಂತೆ ಕಪೋಲ ಕಲ್ಪಿತ ಸುದ್ದಿಗಳ ಸುತ್ತಲೇ ಅನೇಕ ಘಟನೆಗಳು ನಡೆದು ಹೋದವು! ಒಳ ಮೀಸಲಾತಿ ನೀಡುವಲ್ಲಿ ಜಾತಿ ಗಣತಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆ ಬಗ್ಗೆಗೂ ಸರ್ಕಾರ ವರದಿಯನ್ನು ಬಿಡುಗಡೆಗೊಳಿಸಿಲ್ಲ. ಅಂದರೆ ಅದನ್ನು ಒಪ್ಪಿಯೂ ಇಲ್ಲ, ತಿರಸ್ಕರಿಸಿಲ್ಲ. ಹೀಗಿರುವಾಗ ಯಾವ ಆಧಾರದ ಮೇಲೆ ಇಂಥ ಮೀಸಲಾತಿಯನ್ನು ಹಂಚಲಾಗುತ್ತದೆ. ಈಗಿನ ಬೊಮ್ಮಾಯಿ ಸರ್ಕಾರದ ನಿರ್ಧಾರಕ್ಕೆ ಸಂವಿಧಾನಾತ್ಮಕ ಮತ್ತು ಕಾನೂನಿನ ಬಲವಿದೆಯೇ ಎಂದರೆ ಅದು ಇಲ್ಲ ಎನ್ನುವ ಅಭಿಪ್ರಾಯಗಳೇ ದಟ್ಟವಾಗಿವೆ. ಅಂದರೆ ಇಂದು ಮುಸ್ಲಿಮರಿಂದ ಕಿತ್ತು ಪಂಚಮಸಾಲಿ ಮತ್ತು ಒಕ್ಕಲಿಗರಿಗೆ ನೀಡಿರುವ ಕ್ರಮ ನಿಜಕ್ಕೂ ಆ ಸಮುದಾಯಗಳಿಗಾದರೂ ದಕ್ಕುವುದೇ ಎನ್ನುವುದು ಖಾತ್ರಿ ಇಲ್ಲ. ಕೇವಲ ರಾಜಕೀಯ ದುರ್ಲಾಭಕ್ಕಾಗಿ ನಡೆಸಿದ ಇಂತಹ ಪ್ರಯತ್ನಗಳು ಸಮಾಜದಲ್ಲಿ ಎಂತಹ ಸ್ಥಿತಿಯನ್ನು ನಿರ್ಮಿಸಬಲ್ಲವೂ ಎನ್ನುವುದರ ಕನಿಷ್ಠ ಅರಿವು ಮತ್ತು ಹೊಣೆಗಾರಿಕೆ ಇಲ್ಲದವರು ಮಾತ್ರವೇ ಮಾಡಬಹುದಾದದ್ದು ಈ ಕ್ರಮಗಳು.

ಬೊಮ್ಮಾಯಿ ಸರ್ಕಾರದ ಈ ಕೆಲವು ಕ್ರಮಗಳು ಹಲವು ಜಾತಿ, ಸಮುದಾಯಗಳಲ್ಲಿ ಆತಂಕವನ್ನು, ಆಕ್ರೋಶವನ್ನು ಸೃಷ್ಟಿಸಿವೆ. ಆ ಕಾರಣದಿಂದಲೇ ಬಂಜಾರ ಸಮುದಾಯ ಪ್ರತಿಭಟನೆ ಇಳಿದಿದೆ. ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರ ಮನೆಯ ಮೇಲೆ ಕಲ್ಲುಗಳನ್ನು ತೂರಿದ ಘಟನೆಗಳು ಜನತೆಯ ಆಕ್ರೋಶ ಹೊರಹಾಕಿವೆ. ಅಂದು ದುಡುಕಬೇಡಿ ಜೇನುಗೂಡಿಗೆ ಕೈ ಹಾಕಬೇಡಿ ಎಂದು ಹೇಳಿದ್ದ ಅಮಿತ್ ಶಾ ಇಂದು ಚುನಾವಣೆಯಲ್ಲಿ ವೋಟುಗಳಿಗೆ ಗಾಳ ಹಾಕಿ ಕೂತಿರುವುದು ವಿಚಿತ್ರ!

* * *

ಎಲ್ಲಿ ಹೋಯಿತು ನೈತಿಕತೆ?

ಮೀಸಲಾತಿಯ ಗಡಬಡದ ನಡುವೆ ಹೀಗೊಂದು ಪ್ರಶ್ನೆ ಕೇಳು ಬರುತ್ತಲೇ ಇದೆ.

ಪಂಚಮಸಾಲಿಗಳ ಬೇಡಿಕೆ ಇದ್ದದ್ದು ಹಿಂದುಳಿದ ವರ್ಗಗಳ ಪ್ರವರ್ಗ –2 ಎ ಅಡಿಯಲ್ಲಿ ತಮಗೆ ಮೀಸಲಾತಿ ಬೇಕು ಎಂದು. ಇನ್ನು ಒಕ್ಕಲಿಗರ ಬೇಡಿಕೆ ಇದ್ದದ್ದು ತಮ್ಮ ಮೀಸಲಾತಿ ಶೇ 10ಕ್ಕೆ ಹೆಚ್ಚಿಸಬೇಕು ಎಂಬುದು.

ವಿಚಿತ್ರವೆಂದರೆ, ಇವ್ಯಾವುಗಳನ್ನು ಪರಿಗಣಿಸದ ಸರ್ಕಾರ ಮುಸ್ಲಿಮರ ಮೀಸಲಾತಿಯನ್ನು ಕಿತ್ತು ಇಬ್ಬರಿಗೂ ಸಮಭಾಗವಾಗಿ ಹಂಚಿಬಿಟ್ಟಿದೆ. ನಿಜಕ್ಕೂ ಎರಡು ಸಮುದಾಯಗಳು ಮುಸ್ಲಿಮರಿಂದ ಕಿತ್ತು ಕೊಡುವಂತೆ ಕೇಳಿರಲಿಲ್ಲ ನಿಜ. ಆದರೆ ನಮಗಿಂತಲೂ ಅತ್ಯಂತ ವಂಚಿತವಾದ ಪರಿಸ್ಥಿತಿಯಲ್ಲಿರುವ ಈ ಸಮುದಾಯಗಳ ಮೀಸಲಾತಿಯನ್ನು ಕಿತ್ತು ಹಂಚಿರುವುದು ತಪ್ಪು ಎಂದು ಈ ಸಮುದಾಯಗಳ ಮಠಾಧೀಶರಿಗೆ, ಮುಖಂಡರಿಗೆ ಅನಿಸಲಿಲ್ಲವೇ? ಕನಿಷ್ಠ ಅಕ್ಷೇಪದ ಒಂದು ಧನಿಯನ್ನು ಎತ್ತುವ ನೈತಿಕತೆ ಇಲ್ಲವಾಯಿತೇ? ಬಗ್ಗೆ ಪ್ರಶ್ನೆಗಳು ಮೂಡಿಬಂದಿವೆ. ಇಂತಹ ಪ್ರಶ್ನೆ ಎತ್ತಿ

ಪುಟ 04 ಕ್ಕೆ

ಬಗರ್ ಹುಕುಂ ಸಾಗುವಳಿದಾರರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿಗಳ ದೌರ್ಜನ್ಯ; ರಾಜ್ಯಾದ್ಯಂತ ವ್ಯಾಪಕ ಆಕ್ರೋಶ



ಗಂಗನಪಾಳ್ಯದಲ್ಲಿ ಮಾರ್ಚ್ 30ರಂದು ಬಗರ್ ಹುಕುಂ ಸಾಗುವಳಿ ರೈತರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ನಡೆಸಿದ ಮಾರಣಾಂತಿಕ ದೌರ್ಜನ್ಯಕ್ಕೆ ರಾಜ್ಯಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಇದನ್ನು ಖಂಡಿಸಿ ಮಾರ್ಚ್ 31ರಂದು ರಾಜ್ಯದ ಹಲವೆಡೆ ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ಮತ್ತು ಸಿಐಟಿಯು ನೇತೃತ್ವದಲ್ಲಿ ರೈತರು ಮತ್ತು ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ದೌರ್ಜನ್ಯಕ್ಕೆ ಕಾರಣರಾದ ಅರಣ್ಯ ಇಲಾಖೆಯ ಅಧಿಕಾರಿಗಳಾದ ಗುಬ್ಬಿ ಎಸಿಎಫ್ ಮಹೇಶ್, ರೇಂಜರ್ ದುಗ್ಗಯ್ಯ, ಮಹಮ್ಮದ್ ಮನ್ಸೂರ್ ಮತ್ತು ರೈತರ ಮೇಲೆ ದೌರ್ಜನ್ಯ ನಡೆಸಿದ ಅರಣ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳನ್ನು ಕೆಲಸದಿಂದ ವಜಾ ಮಾಡಬೇಕು, ರೈತರನ್ನು ಒಕ್ಕಲೆಬ್ಬಿಸುವ ತಂತ್ರಗಳನ್ನು ನಿಲ್ಲಿಸಬೇಕು, ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿಯ ಹಕ್ಕು ಪತ್ರ ನೀಡುವ ಮೂಲಕ ರೈತರಿಗೆ ನ್ಯಾಯ ಸಿಗಬೇಕೆಂದು ಎಂದು ರೈತರು ಒತ್ತಾಯಿಸಿದ್ದಾರೆ.

ತುಮಕೂರು, ಪಾವಗಡ ಸೇರಿದಂತೆ ತುಮಕೂರು ಜಿಲ್ಲೆಯಾದ್ಯಂತ ಪ್ರತಿಭಟನೆಗಳು ನಡೆದಿವೆ. ಶಹಾಪುರ, ಯಾದಗಿರಿ, ಗಂಗಾವತಿ, ರಾಯಚೂರು, ಉಡುಪಿ, ದೊಡ್ಡಬಳ್ಳಾಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ, ಕೋಲಾರ ಸೇರಿದಂತೆ ರಾಜ್ಯದ ಹಲವೆಡೆ ಪ್ರತಿಭಟನೆಗಳು ನಡೆದಿವೆ.

ತಲೆಗೆ ತೀವ್ರತರವಾದ ಪೆಟ್ಟು ಬಿದ್ದು ಚಿಕಿತ್ಸೆ ಪಡೆಯುತ್ತಿರುವ ದೊಡ್ಡ ನಂಜಯ್ಯನವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕೆ.ಪಿ.ಆರ್.ಎಸ್. ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ನವೀನ್ ಕುಮಾರ್, ಭರತ್ ರಾಜ್, ಜನವಾಧಿ ಮಹಿಳಾ ಸಂಘಟನೆಯ ಪ್ರಭಾ ಬೆಳವಂಗಲ ಮುಂತಾದವರು ಧೈರ್ಯ ತುಂಬಿದರು.

ಏಕಾಏಕಿ ದಾಳಿಗಿಳಿದ ಸಿಬ್ಬಂದಿ

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಚೇಳೂರು ಹೋಬಳಿಯ ಗಂಗನಪಾಳ್ಯದ ಸುತ್ತಮುತ್ತಲಿನ ಗ್ರಾಮಗಳ ಬಗರ್ ಹುಕುಂ ಸಾಗುವಳಿದಾರರ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆ ತನ್ನ ವಶಕ್ಕೆ ಪಡೆದಿತ್ತು. ತಮ್ಮ ಸಾಗುವಳಿ ಭೂಮಿಯನ್ನು ಅರಣ್ಯ ಇಲಾಖೆಯಿಂದ ಬಿಡಿಸಿಕೊಳ್ಳಲು ವರ್ಷಗಳಿಂದ ಹೋರಾಟ ನಡೆಸಿದ್ದರು. ಹಲವಾರು ದಶಕಗಳಿಂದ ಸಾಗುವಳಿಯಲ್ಲಿ ತೊಡಗಿದವರು ಹಕ್ಕು ಪತ್ರಕ್ಕಾಗಿ ಸರ್ಕಾರಕ್ಕೆ ಫಾರಂ 50, 51, 53 ಮತ್ತು 57 ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರು. ಈಗ ಈ ಎಲ್ಲಾ ಅರ್ಜಿಗಳು ವಿಲೇ ಆಗದೇ ಪೆಂಡಿಂಗ್ ಇರುವಾಗಲೇ ಅರಣ್ಯ ಇಲಾಖೆಯ ಮೂಲಕ ರೈತರ ಬಗರ್ ಹುಕುಂ ಸಾಗುವಳಿಯ ಜಮೀನುಗಳನ್ನು ಬಲವಂತವಾಗಿ ಕಿತ್ತುಕೊಂಡಿರುವುದನ್ನು ವಿರೋಧಿಸಿ ಮತ್ತು ತಮ್ಮ ಸಾಗುವಳಿ ಭೂಮಿಯನ್ನು ಮರಳಿ ತಮ್ಮ ವಶಕ್ಕೆ ಬಿಟ್ಟುಕೊಡಬೇಕು ಎಂದು ಒತ್ತಾಯಿಸಿ, ತಮ್ಮ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ ರೈತರು, ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 2023 ಮಾರ್ಚ್ 17 ರಂದು ಹಗಲು–ರಾತ್ರಿ ಅನಿರ್ದಿಷ್ಟ ಕಾಲದ ಹೋರಾಟಕ್ಕಿಳಿದರು.

ಹೋರಾಟ ಪ್ರಾರಂಭವಾದ ಐದು ದಿನಗಳ ನಂತರ ಸರ್ಕಾರದ ಪರವಾಗಿ ತುಮಕೂರು ಜಿಲ್ಲಾಧಿಕಾರಿ ರೈತರನ್ನು ಮಾತುಕತೆಗೆ ನಡೆಸಿ, ಸಾಗುವಳಿ ಭೂಮಿಯನ್ನು ರೈತರಿಗೆ ಹಿಂತಿರುಗಿಸುವ ಭರವಸೆ ನೀಡಿದ್ದರು. ಇದಕ್ಕಾಗಿ ಸರ್ವೆ ನಡೆಸುವುದಾಗಿಯೂ, ನಿಜವಾಗಿಯೂ ಸಾಗುವಳಿ ಮಾಡುತ್ತಿದ್ದ ರೈತರಿಗೆ ಅವರ ಭೂಮಿಯನ್ನು ಹಿಂತಿರುಗಿಸಲಾಗುವುದು ಎಂದೂ ಭರವಸೆ ಕೊಟ್ಟಿದ್ದರು. ಜಿಲ್ಲಾಧಿಕಾರಿಯ ಭರವಸೆ ಮೇರೆಗೆ ರೈತರು ತಮ್ಮ ಹೋರಾಟವನ್ನು ಹಿಂಪಡೆದಿದ್ದರು.

ಸರ್ಕಾರ ರೈತರಿಗೆ ಆಶ್ವಾಸನೆ ಕೊಟ್ಟು ಒಂದು ವಾರ ಕಳೆಯುವಷ್ಟರಲ್ಲಿ ಅರಣ್ಯ ಇಲಾಖೆ ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಅರಣ್ಯಕ್ಕೆ ಸೇರಿಸಲು ಬೃಹತ್ ಯಂತ್ರದ ಮೂಲಕ ದೊಡ್ಡ ಹೊಂಡ ತೋಡಲು ಮುಂದಾಗಿದೆ. ರೈತರು, ಮಹಿಳೆಯರು ಸೇರಿ ಇದನ್ನು ವಿರೋಧಿಸಿ ತಡೆಯಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಅರಣ್ಯ ಇಲಾಖೆಯ ಸಿಬ್ಬಂದಿ ದೊಣ್ಣೆಗಳಲ್ಲಿ ಹೊಡೆಯುವ ಮೂಲಕ ಏಕಾಏಕಿ ರೈತರ ಮೇಲೆ ಮುಗಿಬಿದ್ದಿದ್ದಾರೆ. ಹಿರಿಯರು, ಮಹಿಳೆಯರು ಎಂಬುದನ್ನೂ ನೋಡದೆ ಮನಬಂದಂತೆ ಥಳಿಸುತ್ತಿರುವ ದೃಶ್ಯ ವಿಡಿಯೋ ಒಂದರಲ್ಲಿ ಸರೆಯಾಗಿದೆ. ದಾಳಿಯ ಸಂದರ್ಭದಲ್ಲಿ ಚಿತ್ರೀಕರಿಸಿದ ವಿಡಿಯೋಗಳಲ್ಲಿ ಅರಣ್ಯ ಸಿಬ್ಬಂದಿಗಳಿಂದ ಪೆಟ್ಟು ತಿಂದ ಮಹಿಳೆಯರು ಮತ್ತು ರೈತರ ಚೀರಾಟ, ನರಳಾಟ ನೋಡುಗರ ಹೃದಯ ಹಿಂಡುವಂತಿದೆ.

ಮುಖಂಡರೊಬ್ಬರ ತಲೆಗೆ 31 ಹೊಲಿಗೆ

ಈ ಸಂದರ್ಭದಲ್ಲಿ ಪ್ರತಿಭಟನೆಯ ಮುಂದಾಳತ್ವ ವಹಿಸಿದ್ದ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷರಾದ ದೊಡ್ಡ ನಂಜಯ್ಯನವರಿಗೆ ಅರಣ್ಯ ಇಲಾಖೆ ಸಿಬ್ಬಂದಿಗಳು ನಡೆಸಿದ ದೊಣ್ಣೆ ಏಟಿನಿಂದ ತಲೆಗೆ ತೀವ್ರತರವಾದ ಪೆಟ್ಟು ಬಿದ್ದಿದ್ದು, ತಲೆಗೆ 31 ಹೊಲಿಗೆ ಹಾಕಲಾಗಿದೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು ಹತ್ತಾರು ಜನರನ್ನು ವಿಪರೀತವಾಗಿ ಹೊಡೆದಿದ್ದಾರೆ. ಲಾಠಿ ಪ್ರಹಾರದಿಂದ ಕೋಡಿ ಪಾಳ್ಯದ ಚೇತನ್, ಮತ್ತು ಸಿದ್ದಮ್ಮ, ಕೆಪಿಆರ್ ಎಸ್ ತುಮಕೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಜ್ಜಪ್ಪ, ಕೊಲ್ಲಾಪುರ ಗ್ರಾಮದ ಅಳ್ಳಪ್ಪ, ನೆಲ್ಲೂರುನವ ಗ್ರಾಮದ ಸಣ್ಣ ಚಿಕ್ಕಯ್ಯ, ಭೋಗನಹಳ್ಳಿಯ ವಿವೇಕ್, ಚಿಕ್ಕತೋಟಿಂಕೆರೆ ಗ್ರಾಮದ ಗಿರೀಶ್, ಕೆಂಪದಾಳಹಳ್ಳಿಯ ಆನಂದ ಇವರುಗಳಿಗೆ ತೀವ್ರತರವಾದ ಪೆಟ್ಟು ಬಿದ್ದಿದೆ. ಮಹಿಳೆಯರು ಸೇರಿದಂತೆ ಹತ್ತಾರು ರೈತರಿಗೆ ಪೆಟ್ಟಾಗಿದೆ ಎಂದು ಸಾಗುವಳಿದಾರರು ಆರೋಪಿಸಿದ್ದಾರೆ.

'ಅರಣ್ಯ ಇಲಾಖೆ ಸಿಬ್ಬಂದಿ ಲಾಠಿ ಚಾರ್ಜ್ ಮಾಡುವ ಅಧಿಕಾರ ಕೊಟ್ಟವರು ಯಾರು' ಎಂದು ಪ್ರಶ್ನಿಸಿದ ರೈತರು, ರೈತರ ಜೊತೆ ಅಪಹರಿಸಿಕೊಂಡು ಹೋಗಿರುವ ತೀವ್ರ ಗಾಯಗೊಂಡ ದೊಡ್ಡ ನಂಜಯ್ಯ ಅವರನ್ನು ವಾಪಸ್ಸು ಕರೆತರಲು ಆಗ್ರಹಿಸಿ ಆ ದಿನವೇ ಸ್ಥಳದಲ್ಲೇ ಪ್ರತಿಭಟನೆ ನಡೆಸಿದ್ದರು.



ಬಾಗೇಪಲ್ಲಿ: ಸಿಪಿಐ(ಎಂ) ಪಕ್ಷದಿಂದ ಉಚ್ಚಾಟನೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಅನ್ನು ದುರ್ಬಲಗೊಳಿಸಲು ಮತ್ತು ಬಂಡವಾಳಶಾಹಿ ಪಕ್ಷಗಳ ಜೊತೆಯಲ್ಲಿ ಕೈಜೋಡಿಸಲು ಪಿತೂರಿ ನಡೆಸಿರುವ ಪಕ್ಷದ ರಾಜ್ಯ ಸಮಿತಿ ಸದಸ್ಯ ಹೆಚ್.ಪಿ. ಲಕ್ಷ್ಮಿನಾರಾಯಣ ಸೇರಿದಂತೆ ಬಾಗೇಪಲ್ಲಿ ಕ್ಷೇತ್ರದಲ್ಲಿನ ಅವರ ಹಿಂಬಾಲಕರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಪಕ್ಷದಿಂದ ಉಚ್ಚಾಟನೆಗೊಂಡವರಲ್ಲಿ ಮಂಜುನಾಥ ರೆಡ್ಡಿ, ಮಹಮ್ಮದ್ ಅಕ್ರಂ (ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು), ರವಿಚಂದ್ರಾರೆಡ್ಡಿ, ಆಂಜನೇಯರೆಡ್ಡಿ, ಫಾತಿಮಾ (ಜಿಲ್ಲಾ ಸಮಿತಿ ಸದಸ್ಯರು) ಮತ್ತು ಇವರ ಕೆಲವು ಹಿಂಬಾಲಕರು ಸೇರಿದ್ದಾರೆ. ಈ ಸಂಬಂಧ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿ ಹೇಳಿಕೆವೊಂದನ್ನು ಬಿಡುಗಡೆ ಮಾಡಿದೆ.

ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಸಿಪಿಐ(ಎಂ) ಬಾಗೇಪಲ್ಲಿ ವಿಧಾನಸಭೆ ಕ್ಷೇತ್ರದಿಂದ ಡಾ.ಅನಿಲ್ ಕುಮಾರ್ ಅವರನ್ನು ಕಣಕ್ಕೆ ಇಳಿಸಿದೆ. ರೈತರು, ಕಾರ್ಮಿಕರು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು, ದಲಿತರು, ಅಲ್ಪಸಂಖ್ಯಾತರು, ಮಧ್ಯಮ ವರ್ಗಗಳು, ಹೀಗೆ ಎಲ್ಲಾ ಜನರ ಸಮಸ್ಯೆಗಳಿಗಾಗಿ ನಿರಂತರವಾದ ಹೋರಾಟಗಳನ್ನು ನಡೆಸುತ್ತಾ ಬಂದಿರುವ ಸಿಪಿಐ(ಎಂ) ಬಾಗೇಪಲ್ಲಿ ಕ್ಷೇತ್ರದ ಜನತೆಯ ಕಣ್ಮಣಿಯಾಗಿದೆ. ಡಾ. ಅನಿಲ್ ಕುಮಾರ್ ಅವರು ಜನತೆಯ ವೈದ್ಯರಾಗಿ, ಜನಾನುರಾಗಿಯಾಗಿ ಕ್ಷೇತ್ರದ ಎಲ್ಲಾ ವಿಭಾಗದ ಜನರ ನಡುವೆಯೂ ಪ್ರೀತಿಪಾತ್ರರಾಗಿದ್ದಾರೆ. ಹೀಗಾಗಿ ಈ ಬಾರಿ ಸಿಪಿಐ(ಎಂ) ಅನ್ನು ವಿಧಾನಸಭೆಗೆ ಗೆಲ್ಲಿಸಿ ಕಳುಹಿಸಬೇಕೆಂಬುದು ಕ್ಷೇತ್ರದ ಜನತೆಯ ಅಪೇಕ್ಷೆಯಾಗಿದೆ ಎಂದು ಹೇಳಿರುವ ಪಕ್ಷವು, ಸಿಪಿಐ(ಎಂ)ಗೆ ಪೂರಕವಾದ ಪರಿಸ್ಥಿತಿಯಿಂದ ಗಲಿಬಿಲಿಗೊಂಡಿರುವ ಇತರೆ ಪಕ್ಷಗಳು, ಹೇಗಾದರೂ ಸಿಪಿಐ(ಎಂ) ನ ಗೆಲುವನ್ನು ತಡೆಯಲೇಬೇಕೆಂದು ಅಡ್ಡ ಮಾರ್ಗಗಳನ್ನು ಹಿಡಿದಿದ್ದಾರೆ. ಇವರು ಪಕ್ಷದಲ್ಲಿರುವ ಅತೃಪ್ತ ವ್ಯಕ್ತಿಗಳನ್ನು ದಾರಿ ತಪ್ಪಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಪಕ್ಷದಲ್ಲಿರುವ ಕೆಲವು ಮುಖಂಡರು ಬಂಡವಾಳಶಾಹಿ ಪಕ್ಷಗಳ ಆಸೆ ಆಮಿಷಗಳಿಗೆ ಬಲಿಬಿದ್ದು ಸಿಪಿಐ(ಎಂ) ಗೆ ದ್ರೋಹ ಬಗೆದು, ಪಕ್ಷ ಒಡೆಯುವ ಮತ್ತು ಪಕ್ಷದ ಕೇಂದ್ರ ಹಾಗೂ ರಾಜ್ಯ ನಾಯಕತ್ವದ ಮತ್ತು ಅಭ್ಯರ್ಥಿಯ ವಿರುದ್ಧ ನಿಂದನೆಯಲ್ಲಿ ತೊಡಗಿದ್ದಾರೆ ಎಂದು ಅದು ಆರೋಪಿಸಿದೆ.

ಸಿಪಿಐ(ಎಂ) ಪಕ್ಷವು ದುಡಿಯುವ ಜನತೆಯ ಪಕ್ಷ. ಕೆಲವು ನಾಯಕರ ಸ್ವಾರ್ಥ ನಿಲುವುಗಳಿಗೆ ಪಕ್ಷದ ಸದಸ್ಯರು ಮತ್ತು ಬೆಂಬಲಿಗರು ವಿಚಲಿತಗೊಳ್ಳುವುದಿಲ್ಲ. ಇಡೀ ಕ್ಷೇತ್ರದ ಜನತೆ ಸಿಪಿಐ(ಎಂ)ನ್ನು ಗೆಲ್ಲಿಸಲು ತೀರ್ಮಾನಿಸಿದ್ದಾರೆ. ಪಕ್ಷವನ್ನು ದುರ್ಬಲಗೊಳಿಸಲು ಮತ್ತು ಬಂಡವಾಳಶಾಹಿ ಪಕ್ಷಗಳ ಜೊತೆಯಲ್ಲಿ ಕೈಜೋಡಿಸಲು ಪಿತೂರಿ ನಡೆಸಿರುವ ವ್ಯಕ್ತಿಗಳನ್ನು ನಿರ್ಲಕ್ಷಿಸುವಂತೆ ಮತ್ತು ಸಿಪಿಐ(ಎಂ) ಪಕ್ಷವನ್ನು ಗೆಲ್ಲಿಸುವಂತೆ ಬಾಗೇಪಲ್ಲಿ ಕ್ಷೇತ್ರದ ಜನತೆಯಲ್ಲಿ ಪಕ್ಷವು ಮನವಿ ಮಾಡಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ರವರು ಮನವಿ ಮಾಡಿದ್ದಾರೆ.

ಓಟುಗಳಿಗೆ ಗಾಳ ಹಾಕಿ ಕೂತವರು... ಪುಟ 3 ರಿಂದ

ಸಂಘಟನೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ವಿಜಯಾನಂದ ಕಾಶಪ್ಪನವರ್ ಅವರ ಧೈರ್ಯ, ನೈತಿಕತೆ ಉಳಿದವರಿಗೆ ಇಲ್ಲವಾಯಿತೇ?

ಸಹಜವಾಗಿ, ಇಂಥ ಕ್ರಮಗಳ ಮೂಲಕ ಮುಸ್ಲಿಂ ಸಮುದಾಯವನ್ನು ಕೆಣಕಿ ಅವರು ಪ್ರತಿಭಟನೆಗೆ ಇಳಿದರೆ ಎರಡು ಜಾತಿಗಳನ್ನು ಅವರ ವಿರುದ್ಧ ಎತ್ತಿ ಕಟ್ಟಿ ಹಿಂದುತ್ವದ ಅಜೆಂಡಕ್ಕೆ ಸೇರಿಸಬಹುದು ಎನ್ನುವ ದುರ್ಬುದ್ಧಿಗೆ ಮುಸ್ಲಿಂ ಸಮುದಾಯ ಅವಕಾಶವನ್ನೇ ಕೊಟ್ಟಿಲ್ಲ. 'ಪಂಚಮಸಾಲಿ ಅಥವಾ ಒಕ್ಕಲಿಗ ಸಮುದಾಯಗಳ ಜೊತೆಗೆ ನಮ್ಮದೇನೂ ತಕರಾರು ಇಲ್ಲ. ಕೂಡಿಗೆ ಬಾಳಿದವರು ನಾವು. ನಮ್ಮ ಪ್ರಶ್ನೆ ಕೇವಲ ಸರ್ಕಾರಕ್ಕೆ ಮಾತ್ರ. ನಮ್ಮ ಹಕ್ಕನ್ನು ನಾವು ನ್ಯಾಯಾಂಗದ ಮೂಲಕ ಪ್ರತಿಪಾದಿಸುತ್ತೇವೆ, ಪಡೆಯುತ್ತೇವೆ' ಎಂದ ಆ ಸಮುದಾಯದ ಪ್ರಮುಖರ ಮುತ್ಸದ್ದಿ ಮಾತುಗಳು, ನಡೆ ಅತ್ಯಂತ ಅರ್ಥಪೂರ್ಣ, ಅಭಿನಂದನೀಯ.

* * *

ಜೆ.ಡಿ.ಎಸ್. ಲೆಕ್ಕಾಚಾರ

ಪಂಚರತ್ನ ಯಾತ್ರೆಯ ಸಮಾರೋಪ ಸಮಾರಂಭ 2023 ಮಾರ್ಚ್ 25ರಂದು ಮೈಸೂರಿನಲ್ಲಿ ಜರುಗಿತು. ವಿಶೇಷವಾಗಿ, ದಕ್ಷಿಣ ಕರ್ನಾಟಕ ಭಾಗದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರ ತುಂಬಾ ಆಕ್ರಮಣಕಾರಿಯಾಗಿ ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಜೊತೆಗೆ ಬಿಜೆಪಿಯನ್ನು ಜೆ.ಡಿ.ಎಸ್. ಎದುರಿಸಬೇಕಿದೆ.

ಹಾಗೆ ನೋಡಿದರೆ ಪ್ರಧಾನವಾದ ಹೋರಾಟ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಇದೆ.

ಕೆಲವು ತಿಂಗಳುಗಳ ಹಿಂದೆ ಈ ಭಾಗದಲ್ಲಿ ಮತ್ತು ಕರ್ನಾಟಕದ ಇತರೆ ಕಡೆಗಳಲ್ಲಿಯೂ ಕೂಡ ಜೆಡಿಎಸ್ ತೀರಾ ದುರ್ಬಲವಾಗಿದೆ ಎಂಬಂತೆ ಕಾಣುತ್ತಿದ್ದ ವಾತಾವರಣ ಪಂಚರತ್ನ ಯಾತ್ರೆಯ ನಂತರದಲ್ಲಿ ಬದಲಾಗಿದೆ ಎಂದು ಹೇಳಲಾಗುತ್ತಿದೆ. 20 ರಿಂದ 25 ಸ್ಥಾನ ಪಡೆಯಬಹುದು ಎಂದು ಭಾವಿಸಿದ್ದ ನಾಯಕರು ಈಗ 50 ರಿಂದ 60ರವರೆಗೂ ಶಾಸಕರನ್ನು ಪಡೆಯಬಹುದು ಎನ್ನುವ ಆತ್ಮವಿಶ್ವಾಸದಲ್ಲಿದ್ದಾರೆ.

ಮೈಸೂರಿನಲ್ಲಿ ಜರುಗಿದ ಸಮರೋಪ ಸಮಾರಂಭ ಕೂಡ ಅಂತಹ ಆತ್ಮವಿಶ್ವಾಸವನ್ನು ಹೆಚ್ಚಿಸಿದ ರೀತಿಯಲ್ಲಿ ಕಂಡು ಬಂತು. ಈ ಸಮಾರೋಪ ಸಮಾರಂಭದಲ್ಲಿ ಅನಾರೋಗ್ಯದ ನಡುವೆಯೂ ಮಾಜಿ ಪ್ರಧಾನಿ ದೇವೇಗೌಡರು ಪಾಲ್ಗೊಂಡು ಸಂದೇಶ ನೀಡಿದ್ದು ಕಾರ್ಯಕರ್ತರಲ್ಲಿ ಉತ್ಸಾಹವನ್ನು ಸೃಷ್ಟಿಸಿತು. ಒಟ್ಟಾರೆ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ ಎನ್ನುವ ವಿಶ್ವಾಸದಲ್ಲಿ ಇದೆ. ಕಾರಣ ಮುಂಬರುವ ಅಸೆಂಬ್ಲಿಯಲ್ಲಿ ಯಾರಿಗೂ ಬಹುಮತ ಸಿಗದೇ ಹೋಗುವ ಕಾರಣ ಅತಂತ್ರ ವಿಧಾನಸಭೆಯಲ್ಲಿ ತಾವೇ ಕಿಂಗ್ ಮೇಕರ್, ಕಿಂಗ್ ಎನ್ನುವುದು ಜೆಡಿಎಸ್ ನಾಯಕರ ಗಟ್ಟಿಯಾದ ನಂಬಿಕೆ.

ಪ್ರಶ್ನೆ ಎಂದರೆ ಕಾಂಗ್ರೆಸ್ಸಿನ ಸ್ಥಾನವನ್ನು ಕಡಿಮೆ ಮಾಡಲು ಶತಾಯ ಗತಾಯ ಹೆಣಗುತ್ತಿರುವ ಬಿಜೆಪಿ ಪಕ್ಷ ಕೊನೆಗೆ ತನಗೆ ಬಹುಮತ ಬರದೇ ಹೋದರೆ ಇಂಥದೇ ಒಂದು ಸನ್ನಿವೇಶ ಸೃಷ್ಟಿಯಾಗಬಹುದಾದ ನಿರೀಕ್ಷೆಯಲ್ಲಿಯೂ ಇರುವುದು ಗುಟ್ಟೇನಲ್ಲ. ಕರ್ನಾಟಕವನ್ನು ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಶಕ್ತಿಗಳಿಂದ ಬಿಡುಗಡೆಗೊಳಿಸಿ, ಜನತೆಗೆ ಒಂದು ಜನಪರ ಆಡಳಿತವನ್ನು ಕೊಡಬೇಕಾಗಿರುವ ಅತ್ಯಂತ ನಿರ್ಣಾಯಕ ಸಂದರ್ಭದಲ್ಲಿ ಜೆ.ಡಿ.ಎಸ್. ಬಿಜೆಪಿಯನ್ನು ಅಧಿಕಾರದ ಪೀಠದಲ್ಲಿ ಕೂಡಿಸಿಕೊಳ್ಳದಿರಲಿ. ಮತದಾರರ ಮನಸ್ಸಿನಲ್ಲಿ ಏನಿದೆ ಎಂಬುದು ಗೊತ್ತಿಲ್ಲ, ಆದರೆ ಜನತೆ ಗೊಂದಲದ ಫಲಿತಾಂಶ ನೀಡದಂತೆ ನಿರ್ಣಾಯಕವಾಗಿ ಕೋಮುವಾದಿ ಬಿಜೆಪಿಯನ್ನು ಧೂಳಿಪಟ ಮಾಡಲು ನಿರ್ಧಾರ ಕೈಗೊಳ್ಳಲಿ ಎಂಬುದು ಶಾಂತಿ, ಸೌಹಾರ್ದತೆ, ಪ್ರಗತಿ ಬಯಸುವ ಎಲ್ಲರ ಆಶಯ.

ಹೊರಗುತ್ತಿಗೆ ಎಂಬ ಜೀತ ಪದ್ಧತಿಯನ್ನು ಕೈಬಿಡಿ: ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಒತ್ತಾಯ;



ಭೀಮಶೆಟ್ಟಿ ಯಂಪಳ್ಳಿ ರಾಜ್ಯಾಧ್ಯಕ್ಷರು

ಕೆ.ಹನುಮೇಗೌಡ ರಾಜ್ಯ ಪ್ರಧಾನ ಕಾರ್ಯದರ್ಶಿ



ಹೊರಗುತ್ತಿಗೆ ಎಂಬ ಜೀತ ಪದ್ಧತಿಯನ್ನು ಕೈಬಿಡಬೇಕು, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಹೊರಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ವೇತನವನ್ನು ಸರ್ಕಾರವೇ ನೇರವಾಗಿ ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಒತ್ತಾಯಿಸಿದೆ.

2023ರ ಮಾರ್ಚ್ 24-25 ಈ ಎರಡು ದಿನಗಳು ಕಲಬುರಗಿಯಲ್ಲಿ ನಡೆದ ಸಂಘದ 2ನೇ ರಾಜ್ಯ ಸಮ್ಮೇಳನದಲ್ಲಿ ಈ ಬೇಡಿಕೆಗಳೂ ಸೇರಿದಂತೆ ಒಟ್ಟು 12 ಬೇಡಿಕೆಗಳ ಹಕ್ಕೊತ್ತಾಯವನ್ನು ಮಂಡಿಸಿದೆ.

ನೇರ ನೇಮಕಾತಿ ಪದ್ಧತಿಯ ಹೆಸರಿನಲ್ಲಿ ಸಂಬಂಧಪಟ್ಟ ಕೆಲಸದ ಅನುಭವ ಇಲ್ಲದ ಸಿಬ್ಬಂದಿಗಳನ್ನು ನೇಮಿಸಬಾರದು. ಈಗಾಗಲೇ ಕೆಲಸದಿಂದ ಕೈಬಿಡಲಾದ ಎಲ್ಲಾ ಸಿ ಮತ್ತು ಡಿ ವರ್ಗದ ಹೊರಗುತ್ತಿಗೆ ಸಿಬ್ಬಂದಿಗಳನ್ನು ಮರಳಿ ಕೆಲಸಕ್ಕೆ ನೇಮಿಸಿಕೊಳ್ಳಬೇಕು ಮತ್ತು ಸಿ ಮತ್ತು ಡಿ ವರ್ಗದ ಹೊರಗುತ್ತಿಗೆ ಸಿಬ್ಬಂದಿಗಳೆಲ್ಲರನ್ನೂ ಕಾಯಂಗೊಳಿಸಬೇಕು. ಈ ಪ್ರಕ್ರಿಯೆಯಲ್ಲಿ ಸ್ವಜನ ಪಕ್ಷಪಾತ, ಲಂಚ ಪಡೆಯುವ ಅಕ್ರಮಗಳನ್ನು ತಡೆಗಟ್ಟಬೇಕು. ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನ, ಲಾಕ್ ಡೌನ್ ಪರಿಹಾರ ಹಾಗೂ ತುಟ್ಟಿಭತ್ತೆ ಅರಿಯರ್ಸ್ ಬಾಕಿ ಇರುವವರಿಗೆ ಕೂಡಲೇ ತಾರತಮ್ಯವಿಲ್ಲದೆ ಪಾವತಿ ಮಾಡಬೇಕು. ಇಲ್ಲವೆ ಅವರ ನಿವೃತ್ತಿ ವಯಸ್ಸಿನವರೆಗೆ ಸೇವಾ ಭದ್ರತೆಯನ್ನು ನೀಡಬೇಕು. ಹೊಸದಾಗಿ ಆರಂಭಿಸಲಾದ ಹಾಸ್ಟೆಲ್ ಹಾಗೂ ವಸತಿ ಶಾಲೆಗಳಲ್ಲಿ ಹಿಂದೆ ಕೆಲಸ ಮಾಡಿ ಅನುಭವ ಇರುವವರಿಗೆ ಮಾತ್ರ ಮರಳಿ ಕೆಲಸ ನೀಡಬೇಕು. ಶೈಕ್ಷಣಿಕ ಅರ್ಹತೆಯ ಷರತ್ತು ವಿಧಿಸಬಾರದು. ಕ್ರೈಸ್ ಸಂಸ್ಥೆ ಕಳೆದ ಐದಾರು ವರ್ಷಗಳಲ್ಲಿ ಆರಂಭಿಸಿರುವ ಹೊಸ ವಸತಿ ಶಾಲಾ ಕಾಲೇಜುಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಕಡಿತಮಾಡಬಾರದು. ಡಿ ವರ್ಗದ ಸಿಂಬ್ಬದಿಗಳು ನೂರು ವಿದ್ಯಾರ್ಥಿಗಳಿಗೆ ಕನಿಷ್ಠ ಎಂಟು ಜನ ಇರಬೇಕು. ಹಿಂದುಳಿದ ವರ್ಗಗಳ ಹಾಸ್ಟೆಲ್ ಗಳಿಗೆ ಕಾವಲುಗಾರರಾಗಿ ಹಿಂದಿನ ಅನುಭವ ಇದ್ದವರನ್ನೇ ನೇಮಿಸಬೇಕು. ಜೋಳದ ರೊಟ್ಟಿ ಬಳಕೆಯಾಗುತ್ತಿರುವ ಹಾಸ್ಟೆಲ್ ಗಳಲ್ಲಿ ರೊಟ್ಟಿ ತಯಾರಿಸುವ ಅನುಭವ ಇರುವ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನೇಮಿಸಬೇಕು. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಶೇ. 25ರಷ್ಟು ಅಡುಗೆ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನೇಮಿಸಬೇಕು. ಈ ಸಿಬ್ಬಂದಿಗಳಿಗೆ ಕಾನೂನು ಪ್ರಕಾರ ತಪ್ಪದೆ ವಾರದ ರಜೆ, ಹಬ್ಬಗಳ ರಜೆ, ಹೆರಿಗೆ ಭತ್ತೆ ನೀಡಬೇಕು. ಇ.ಎಸ್.ಐ., ಪಿ.ಎಫ್., ಗ್ರಾಚುಯಿಟಿ ಸೌಲಭ್ಯಗಳನ್ನು ವಿಸ್ತರಿಸಬೇಕು. ಸಂಸದರು, ಶಾಸಕರು ಹೊರಗುತ್ತಿಗೆ ನೌಕರರಾಗಿ ಕೆಲಸಕ್ಕೆ ತೆಗೆದು ಕೊಳ್ಳಲು ಕೊಡುವ ಶಿಫಾರಸ್ಸು ಪತ್ರಗಳನ್ನು ಪರಿಗಣಿಸಬಾರದು. ಇದರಿಂದ ಹಾಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರು ಕೆಲಸ ಕಳೆದು ಕೊಳ್ಳುತ್ತಾರೆ ಎಂದಿರುವ ಸಂಘದ ಹೇಳಿಕೆಯಲ್ಲಿ, ಈ ಹಕ್ಕೊತ್ತಾಯಗಳನ್ನು ಕುರಿತು ಚರ್ಚಿಸಲು ತುರ್ತಾಗಿ ಸಂಬಂಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಜಂಟಿ ಸಭೆಯನ್ನು ಕರೆಯಬೇಕು ಎಂದು ಆಗ್ರಹಿಸಿದೆ.

ಸಮ್ಮೇಳನದಲ್ಲಿ 28 ಜಿಲ್ಲೆಯನ್ನು ಪ್ರತಿನಿಧಿಸಿ 218 ಪ್ರತಿನಿಧಿಗಳು ಭಾಗವಹಿಸಿದ್ದರು.

ನೂತನ ರಾಜ್ಯ ಸಮಿತಿ ವಿವರ

ಗೌರವ ಅಧ್ಯಕ್ಷರಾಗಿ ನಿತ್ಯಾನಂದಸ್ವಾಮಿ, ರಾಜ್ಯಾಧ್ಯಕ್ಷರಾಗಿ ಭೀಮಶೆಟ್ಟಿಯಂಪಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಹನುಮೇಗೌಡ ಕೆ., ಖಜಾಂಚಿ ಚಂದ್ರಪ್ಪ ಹೊಸ್ಕೇರಾ, ರಾಜ್ಯ ಉಪಾಧ್ಯಕ್ಷರಾಗಿ ಎಂ. ಪುಟ್ಟಮಾದು, ಜಂಬಯ್ಯ ನಾಯಕ ವಿಜಯನಗರ, ಮುನಿಯಪ್ಪ ಚಿಕ್ಕಬಳ್ಳಾಪುರ, ಇ.ಆರ್. ಯಲ್ಲಪ್ಪ ಬಳ್ಳಾರಿ, ಶಾಂತಕ್ಕ ಹಾವೇರಿ, ದಾವಲಸಾಬ ನದಾಫ್ ಯಾದಗಿರಿ, ಇಸಾಮುದ್ದೀನ್ ಬೀದರ್, ಗೌರಮ್ಮ ಬೀಳೂರು ವಿಜಯಪುರ, ದ್ವಾರಕಾ ಎದ್ದಲಾಪುಡಿ ಬೆಳಗಾವಿ, ಜಂಟಿ ಕಾರ್ಯದರ್ಶಿಯಾಗಿ ಗ್ಯಾನೇಶ ಕಡಗದ ಕೊಪ್ಪಳ, ಹುಲಗಪ್ಪ ಚಲವಾದಿ ವಿಜಯಪುರ, ಪ್ರದೀಪ್ ದಳವಾಯಿ ಬೆಳಗಾವಿ, ಶಿವಮೂರ್ತಿ ಚಿಕ್ಕಮಗಳೂರು, ರಾಜೇಶ ದೇಶಪಾಂಡೆ ಬಾಗಲಕೋಟೆ ನೂತನ ರಾಜ್ಯ ಪದಾಧಿಕಾರಿಗಳು ಸೇರಿದಂತೆ 122 ಜನ ಸದಸ್ಯರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಕರ್ನಾಟಕ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ(ರಿ), ಪರಿಶಿಷ್ಟ ಪಂಗಡ ಮತ್ತು ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಲಕ್ಷಾಂತರ ಬಡವರ ಮಕ್ಕಳು ಉಳಿದು ಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳಿಗೆ ತಿಂಡಿ-ಊಟ ಸಿದ್ದಪಡಿಸಿ ಬಡಿಸುವ ಕೆಲಸವನ್ನು ಹೊರಗುತ್ತಿಗೆ ನೌಕರರು ಮತ್ತು ಸಿಬ್ಬಂದಿಗಳು ಮಾಡುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಲ್ಲಿ ಅಂದಾಜು 1,92,000 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದಾರೆ. ಈ ಹಾಸ್ಟೆಲ್ ಗಳಲ್ಲಿ ಅಡುಗೆಯವರು, ಸಹಾಯಕರು, ಸ್ವಚ್ಚತಾಗಾರರು, ಕಾವಲುಗಾರರು ಸೇರಿದಂತೆ ಅಂದಾಜು 3,000 ಕಾಯಂ ನೌಕರರು, 6,000 ಹೊರಗುತ್ತಿಗೆ ನೌಕರರಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್ ಗಳಲ್ಲಿ 2,28,986 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದಾರೆ. ಇಲ್ಲಿ ಅಡುಗೆಯವರು, ಸಹಾಯಕರು, ಸ್ವಚ್ಚತಾಗಾರರು, ಕಾವಲುಗಾರರು ಸೇರಿದಂತೆ ಅಂದಾಜು 4,500 ಕಾಯಂ ನೌಕರರು ಮತ್ತು 6,000 ಹೊರಗುತ್ತಿಗೆ ನೌಕರರಿದ್ದಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಸ್ಟೆಲ್ ಗಳಲ್ಲಿ 22,000 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದಾರೆ. ಇಲ್ಲಿ ಅಡುಗೆಯವರು, ಸಹಾಯಕರು, ಸ್ವಚ್ಚತಾಗಾರರು, ಕಾವಲುಗಾರರು ಸೇರಿದಂತೆ ಅಂದಾಜು 304 ಕಾಯಂ ನೌಕರರು ಮತ್ತು 1,000 ಹೊರಗುತ್ತಿಗೆ ನೌಕರರಿದ್ದಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 830 ವಸತಿ ಶಾಲೆಗಳಲ್ಲಿ 2,15,000 ಮಕ್ಕಳು ವ್ಯಾಸಾಂಗ ಮಾಡುತ್ತಿದ್ದಾರೆ. ಇಲ್ಲಿ ಅಡುಗೆಯವರು, ಸಹಾಯಕರು, ಸ್ವಚ್ಚತಾಗಾರರು, ಕಾವಲುಗಾರರು ಸೇರಿದಂತೆ ಅಂದಾಜು 9130 ಹೊರಗುತ್ತಿಗೆ ನೌಕರರಿದ್ದಾರೆ.

ಚುನಾವಣೆ ಮತ್ತು ಜನತೆಯ ಹೊಣೆ... ಪುಟ 3 ರಿಂದ

ಮಾಡುತ್ತಿರುವುದು ಎದ್ದು ಕಾಣುತ್ತಿದೆ.

ರಾಜ್ಯದ ಅಭಿವೃದ್ಧಿ ಜನತೆಯ ಜನಜೀವನದ ರಕ್ಷಣೆ ಸೌಹಾರ್ದತೆ ಶಾಂತಿ ಮತ್ತು ಸಾಮರಸ್ಯಗಳು, ಕಾನೂನುಬದ್ಧ ಆಡಳಿತ ಹಿಂದೆಂದೂ ಇಲ್ಲದಷ್ಟು ಹಾನಿಗೊಳಗಾಗಿವೆ. ಮತ್ತು ಮುಂದಿನ ದಿನಗಳಲ್ಲಿ ಸೃಷ್ಟಿಗೊಳ್ಳಬಹುದಾದ ಭೀಕರ ಪರಿಸ್ಥಿತಿಯನ್ನು ಎತ್ತಿ ತೋರಿಸುತ್ತಿವೆ. ವಿದೇಶಿ ಬಂಡವಾಳ, ಕಾರ್ಪೊರೇಟ್ ಕಂಪನಿಗಳ ಹಿಡಿತಕ್ಕೆ ಕರ್ನಾಟಕದ ಎಲ್ಲ ಸಂಪನ್ಮೂಲಗಳನ್ನು ಒಪ್ಪಿಸುವ ರಾಜ್ಯವನ್ನು, ಜನತೆಯನ್ನು ದಿವಾಳಿ ಎಬ್ಬಿಸುವ ಕೃತ್ಯಗಳು ಮುಂದುವರಿಕೆಯುವ ಅಪಾಯವು ಕಾಣುತ್ತಿದೆ. ಇವುಗಳು ಕಾಣಬಾರದೆಂದು ಮೀಸಲಾತಿಯಂತಹ ಸಾಮಾಜಿಕ ನ್ಯಾಯದ ಬಹುಮುಖ್ಯ ಅಂಶವನ್ನು ಜಾತಿಗಳ ಓಲೈಕೆಗೆ ಮತ್ತು ವಿಭಜನೆಗೆ ಬಳಸುತ್ತಿರುವುದು ದುರಂತ. ಹಾಗೆಯೇ ಹಿಂದೂ ಮುಸ್ಲಿಂ ನಡುವಿನ ವಿದ್ವೇಶ ಹೆಚ್ಚಿಸುವ ಕೃತ್ಯಗಳು ಇದನ್ನೇ ತೋರಿಸುತ್ತಿವೆ. ಸಂಕಷ್ಟಗಳನ್ನು ಹೇರಿದ ಸಾಮರಸ್ಯಕ್ಕೆ ಧಕ್ಕೆ ತಂದಿರುವ, ರಾಜ್ಯದ ಸಂಪನ್ಮೂಲಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಪರಭಾರೆ ಮಾಡುವ ಪ್ರತಿಗಾಮಿ ಆಡಳಿತ ಮತ್ತೆ ಅಧಿಕಾರ ಹಿಡಿಯುವ ಯತ್ನಗಳನ್ನು ಜನತೆ ಸೋಲಿಸಬೇಕಿದೆ. ಇದೇ ಸಂದರ್ಭದಲ್ಲಿ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿರುವ ಕಾಂಗ್ರೆಸ್ ಪಕ್ಷ ಮತ್ತು ಜೆಡಿಎಸ್ ಪಕ್ಷಗಳು ಸಹ ತಮ್ಮ ಹಳೆಯ ನೀತಿಗಳನ್ನು ಕೈಬಿಡಬೇಕಾದ ಅಗತ್ಯವೂ ಇದೆ. ಅದಕ್ಕಾಗಿ ಜನತೆ ಒತ್ತಡವನ್ನು ಹೇರಬೇಕಿದೆ. ಒಂದು ಪಕ್ಷ ಹೋಗಿ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರುವುದರಲ್ಲಿ ಬದಲಾವಣೆಗಳು ಸಂಭವಿಸಲಾರವು ಎನ್ನುವುದು ಗೊತ್ತಿರುವ ಸಂಗತಿ. ಹೀಗಾಗಿ ಸ್ಪಷ್ಟ ಪರ್ಯಾಯ ಮತ್ತು ಅದಕ್ಕೆ ಬದ್ಧವಾಗಿರುವುದೂ ಮುಖ್ಯ.

ಕಳೆದ ವಿಧಾನಸಭೆಯಲ್ಲಿ ಶ್ರಮಜೀವಿಗಳ ಪ್ರತಿನಿಧಿತ್ವ ಇಲ್ಲವಾಗಿದೆ. ಇದು ದೊಡ್ಡ ಕೊರತೆ. ನಿಜಕ್ಕೂ ಕಾಂಗ್ರೆಸ್, ಬಿಜೆಪಿ ಮುಂತಾದ ಬಲಪಂಥೀಯ ಪಕ್ಷಗಳಿಗೆ ಅದರ ನೀತಿಗಳ ಮತ್ತು ಕಾರ್ಯವೈಖರಿಗೆ ಪರ್ಯಾಯವನ್ನು ಕಟ್ಟಿಕೊಡುವ, ಜನತೆಯ ಹಿತಗಳಿಗೆ ಶ್ರಮಿಸುವ ಒಂದು ಶಕ್ತಿಯೇ ವಿಧಾನಸಭೆಯಲ್ಲಿ ಇಲ್ಲದಂತಾಗಿದೆ. ಈ ಬಾರಿ ದುಡಿಯುವ ವರ್ಗದ ಪ್ರಾತಿನಿಧ್ಯ ಪ್ರವೇಶ ಪಡೆಯುವಂತೆ ಎಡ ಶಕ್ತಿಗಳು ಪ್ರಾತಿನಿಧ್ಯ ಪಡೆಯುವಂತೆ ಜನತೆ ನಿರ್ಧಾರ ಕೈಗೊಳ್ಳಬೇಕು. ಅಂತಹ ಶಾಸಕರ ಪ್ರಾತಿನಿಧ್ಯ ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಿರುವುದಿಲ್ಲ ಬದಲಾಗಿ ಇಡೀ ಕರ್ನಾಟಕದ ಎಲ್ಲಾ ಶ್ರಮಜೀವಿಗಳ, ಮಾನವ ಪ್ರೇಮಿಗಳ ಧ್ವನಿಯಾಗಿ ಮಾರ್ಧನಿಸುತ್ತದೆ ಎನ್ನುವುದು ಗಮನಿಸಬೇಕು.

ಈ ಎಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕದ ಜನತೆ ಈ ಚುನಾವಣೆಯ ಸಂದರ್ಭವನ್ನು ಹೋರಾಟದ ಸಾಧನವಾಗಿ ಬಳಸಿ ಸೂಕ್ತ ಬದಲಾವಣೆಯನ್ನು ತರಬೇಕು. ಕರ್ನಾಟಕವನ್ನು ಸಂರಕ್ಷಿಸಿ ಕೊಳ್ಳಬೇಕು.

ಆಧಾರ್-ಪಾನ್ ಕಾರ್ಡ್ ಲಿಂಕ್ ಹೆಸರಿನಲ್ಲಿ ಸುಲಿಗೆ ನಿಲ್ಲಿಸಿ; ಡಿವೈಎಫ್ಐ

ಆಧಾರ್ ಮತ್ತು ಪಾನ್ ಕಾರ್ಡ್ ಲಿಂಕ್ ಹೆಸರಿನಲ್ಲಿ ಸಾಮಾನ್ಯ ಜನರ ಸುಲಿಗೆಗೆ ಮುಂದಾಗಿರುವ ಕೇಂದ್ರ ಸರಕಾರದ ಕ್ರಮವನ್ನು ಬಲವಾಗಿ ಖಂಡಿಸಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಇಂತಹ ಸುಲಿಗೆಯನ್ನು ತಕ್ಷಣ ನಿಲ್ಲಿಸಿ ಎಂದು ಆಗ್ರಹಿಸಿದೆ.

ಆಧಾರ್ ಇಲ್ಲವೆಂದು, ಆಧಾರ್ ಲಿಂಕ್ ಆಗಿಲ್ಲವೆಂದು ಯಾವುದೇ ಸೇವೆಯನ್ನು ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದಾಗ್ಯೂ ದಂಡ ಕಟ್ಟಿ ಲಿಂಕ್ ಮಾಡಲು ಕಠಿಣ ಕ್ರಮ ಕೈಗೊಂಡಿರುವ ಸರ್ಕಾರ ಜನತೆಗೆ ಎಸಗುತ್ತಿರುವ ದ್ರೋಹವಲ್ಲದೇ ಇನ್ನೇನು? ಎಂದು ಪ್ರಶ್ನಿಸಿರುವ ಡಿವೈಎಫ್ ಐ, 1,000 ರೂ. ದಂಡದ ಕ್ರಮ ಹಿಂಪಡೆದು ಉಚಿತವಾಗಿ ಹಾಗೂ ಅಂತಿಮ ಗಡುವು ನೀಡದೆ ನಿರಂತರ ಸೇವೆ ಒದಗಿಸಬೇಕು ಎಂದು ಒತ್ತಾಯಿಸಿದೆ.

1,000 ರೂ. ದಂಡದೊಂದಿಗೆ ಪಾನ್ ಕಾರ್ಡ್‌ನ್ನು ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲು ಮಾರ್ಚ್ 31ರವರೆಗೆ ಸರ್ಕಾರ ಗಡುವು ನೀಡಿತ್ತು. ಬಡಜನರಿಂದ ಲೂಟಿ ಮಾಡುತ್ತಿರುವ ಕೇಂದ್ರ ಸರಕಾರದ ಇಂತಹ ಕ್ರಮಕ್ಕೆ ಜನ ಸಾಮಾನ್ಯರ ತೀವ್ರ ವಿರೋಧದಿಂದಾಗಿ ತನ್ನ ಗಡುವನ್ನು ಜೂನ್ 30 ರವರೆಗೆ ಮಾತ್ರ ವಿಸ್ತರಿಸಿದೆ ವಿನಃ ದಂಡದ ಹೆಸರಲ್ಲಿ ಯಥಾರೀತಿ ಸುಲಿಗೆಗೆ ಮುಂದಾಗಿದೆ ಎಂದು ಆರೋಪಿಸಿರುವ ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯು, ದಂಡದ ರೂಪದಲ್ಲಿ ದುಬಾರಿ ಹಣವನ್ನು ಜನಸಾಮಾನ್ಯರಿಂದ ದೋಚಿ, ಲಾಭ ಮಾಡಿಕೊಳ್ಳಲು ಹೊರಟಿರುವ ಕೇಂದ್ರ ಸರ್ಕಾರ, ಬಡವರ ಹಾಗೂ ಮಧ್ಯಮ ವರ್ಗದ ಜನರನ್ನು ಭಯ ಭೀತಿಗೊಳಿಸಿ ಲೂಟಿ ಮಾಡುತ್ತಿರುವ ಕ್ರಮವನ್ನು ಸಹಿಸಲು ಸಾಧ್ಯವಿಲ್ಲ ಎಂದಿದೆ.

ಈಗಾಗಲೇ ಜಿ.ಎಸ್.ಟಿ ಹೆಸರಿನಲ್ಲಿ ಲೂಟಿ ಮಾಡಿ, ರಾಜ್ಯಗಳಿಗೆ ಸರಿಯಾದ ಪಾಲೂ ಸಹ ಕೊಡದೇ ತನ್ನ ಬೊಕ್ಕಸ ತುಂಬಿಸಿಕೊಂಡಿರುವ ಕೇಂದ್ರದ ಬಿಜೆಪಿ ಸರ್ಕಾರ ಮತ್ತೆ ಪಾನ್ ಕಾರ್ಡ್ ಹೆಸರಿನಲ್ಲಿ ಸುಲಿಗೆಗೆ ಹೊರಟಿದೆ. ಸರ್ಕಾರದ ಜನವಿರೋಧಿ ನೀತಿಗಳ ಪರಿಣಾಮವಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ಬೆಲೆ ಏರಿಕೆ, ತೆರಿಗೆ ಹೆಚ್ಚಳದಿಂದಾಗಿ ಜನ ಸಾಮಾನ್ಯರು ದಿನನಿತ್ಯ ಕಷ್ಟ ಅನುಭವಿಸುತ್ತಿದ್ದಾರೆ. ಮತ್ತೆ ಪಾನ್ ಕಾರ್ಡ್ ಲಿಂಕ್ ಹೆಸರಲ್ಲಿ ದಂಡ ಕಟ್ಟಬೇಕಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಸಂಸದರು ಈ ಸಮಸ್ಯೆಯ ಕುರಿತು ಜನತೆಯ ಪರವಾಗಿ ಧ್ವನಿ ಎತ್ತಬೇಕಿತ್ತು. ಆದರೆ ಯಾರೊಬ್ಬರೂ ತುಟಿ ಬಿಚ್ಚದಿರುವುದು ಮತ ನೀಡಿ ಆಯ್ಕೆ ಮಾಡಿದ ಜನರಿಗೆ ಮಾಡುತ್ತಿರುವ ಅವಮಾನವಾಗಿದೆ. ಎಂದು ಅದು ಟೀಕಿಸಿದೆ.

ಇ.ಎಂ.ಎಸ್.ಅಗಲಿಕೆಯ 25 ವರ್ಷಗಳು:

'ನನ್ನ ಕಾಲಾನಂತರ ನನ್ನ ಆದರ್ಶ ಈಡೇರಿದರೆ ಸಾಕು...' ಇ.ಎಂ.ಎಸ್.

"ಭಾರತವು ಕಾಶ್ಮೀರದಿಂದ ಕನ್ಯಾಕುಮಾರಿ, ಗುಜರಾತ್ ಮತ್ತು ಸಿಂಧ್‌ನಿಂದ ಅಸ್ಸಾಂ ಮತ್ತು ಈಶಾನ್ಯದವರೆಗೆ ದೇಶದ ಜಾತಿ, ಧರ್ಮ, ಭಾಷೆ ಮತ್ತು ಪ್ರದೇಶವನ್ನು ಲೆಕ್ಕಿಸದೆ ಕೋಟ್ಯಂತರ ಜನರಿಂದ ಕೂಡಿದೆ. ಈ ಜನರ ಸ್ವಾತಂತ್ರ್ಯದ ಬಯಕೆ ಮತ್ತು ರಾಷ್ಟ್ರೀಯ ಏಕತೆಯ ದಾಹವೇ ಭಾರತವನ್ನು ಒಂದು ರಾಷ್ಟ್ರವನ್ನಾಗಿ ಮಾಡಿತು.

ಕಾಮ್ರೇಡ್ ಇಎಂಎಸ್ ನಂಬೂದಿರಿ ಪಾಡ್ ಅವರು ಮಾರ್ಚ್ 19, 1998 ರಂದು ನಿಧನರಾದಾಗ, ಎಲ್ಲಾ ಪತ್ರಿಕೆಗಳು ಅವರಿಗೆ ಶ್ರದ್ಧಾಂಜಲಿಗಳನ್ನು ಬರೆದವು. ತಮಿಳು ದಿನಮಣಿ ಪತ್ರಿಕೆಯು ಆ ದಿನ ಅವರನ್ನು ಶ್ಲಾಘಿಸಿ ಹೀಗೆ ಬರೆದಿದೆ: "ಅವರು ಶ್ರೀಮಂತ ಭೂಮಾಲೀಕರ ಕುಟುಂಬದಲ್ಲಿ ಜನಿಸಿದರು. ಆದರೆ ಕೊನೆಯವರೆಗೂ ಸಾಮಾನ್ಯರಂತೆ ಬದುಕಿದರು. ಈ ಸರಳತೆಯೇ ಆದರ್ಶ ಮನಸ್ಸಿನ ವಾಸ್ತವದ ನೆರಳು. ಅವರ ಚಿತ್ರಣ ಬಹಳ ಸರಳವಾಗಿದೆ. ಮಾತು ಒಂದೇ. ಆದರೆ ತೋರಿಕೆಗಿಂತ ಭಿನ್ನವಾದದ್ದು ಅವರೊಳಗಿನ ವಿವೇಕ. ಇದು ಅಸಾಮಾನ್ಯ – ಅಸಾಧಾರಣ ಕೂಡ. ಸಾಮಾನ್ಯ ವ್ಯಕ್ತಿಯೊಳಗಿನ ಅಸಾಧಾರಣ ತಿಳುವಳಿಕೆ! ತಮ್ಮ ಕೊನೆಯ ದಿನಗಳಲ್ಲಿ ಪಕ್ಷ ವ್ಯವಸ್ಥೆ ಮಾಡಿದ್ದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಆಧುನಿಕ ರಾಜಕಾರಣಿಗಳ ಇಂದಿನ ಜಗತ್ತಿನಲ್ಲಿ, ರಾಜಕೀಯ ಸೇರಿದ ನಂತರ ಅವರ ಆಸ್ತಿ ಹೆಚ್ಚೆಚ್ಚು ಶೇಖರಣೆಯಾಗುತ್ತಿದೆ. ಆದರೆ, ನಂಬೂದಿರಿ ಪಾಡ್ ಸರಳ ಸಂಗಾತಿಯಾಗಿ ಜೀವನ ನಡೆಸಿದರು."

"ಕೇರಳವು ಸಾಮಾಜಿಕ ಸಮಾನತೆಗೆ ಮಾದರಿಯಾಗಿದ್ದರೆ, ಶತಮಾನದೊಳಗೆ ಇದನ್ನು ಸಾಧಿಸುವಲ್ಲಿ ನಂಬೂದಿರಿ ಪಾಡ್ ಅವರ ಪಾತ್ರವು ಎದ್ದು ಕಾಣುತ್ತದೆ. ನಂಬೂದಿರಿಗಳು ಕೆಳವರ್ಗದವರನ್ನು ಕಾಣುವ ಅಸಹ್ಯಕರ ಆಚರಣೆಗಳು ಇತ್ತೀಚಿನ ದಿನಗಳಲ್ಲಿಯೂ ಮುಂದುವರಿದಿವೆ. ಅಂತಹ ಸಮಾಜವನ್ನು ಬದಲಿಸಿದ ಅಗ್ರಗಣ್ಯರಲ್ಲಿ ಇ.ಎಂ.ಎಸ್ ನಂಬೂದಿರಿ ಪಾಡ್ ಒಬ್ಬರು' ಎಂದು. "ಹಿಂದೂ" ದೈನಿಕವು ಅವರ ಮರಣದ ಸಮಯದಲ್ಲಿ ಅವರನ್ನು ಶ್ಲಾಘಿಸಿತು.

ಬಾಲ್ಯ

13 ಜೂನ್ 1909 ರಂದು ಎಲಂಕುಲಂ ಎಂಬ ಊರಿನಲ್ಲಿ ಪರಮೇಶ್ವರನ್ ನಂಬೂದಿರಿ ಪಾಡ್ ಮತ್ತು ವಿಷ್ಣುದತ ದಂಪತಿಗಳಿಗೆ ಜನಿಸಿದ ಇ.ಎಂ.ಶಂಕರನ್ ನಂಬೂದಿರಿಪಾಡ್ ಅವರು ತ್ರಿಶೂರ್‌ನ ಸೇಂಟ್ ಥಾಮಸ್ ಕಾಲೇಜಿನಲ್ಲಿ ಬಿಎ ಓದುತ್ತಿದ್ದಾಗ, ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಾಗರಿಕ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಕಾಲೇಜು ತೊರೆದರು. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಇದು ಮೊದಲ ಭಾಗವಹಿಸುವಿಕೆ.

ಇಎಂಎಸ್ ತನ್ನ ಹತ್ತನೇ ವಯಸ್ಸಿನಲ್ಲಿ ಮಲಯಾಳಂ, ಸಂಸ್ಕೃತ ಮತ್ತು ಹಿಂದಿಯನ್ನು ಓದುವ ಸಾಮರ್ಥ್ಯವನ್ನು ಪಡೆದುಕೊಂಡರು. ಚಿಕ್ಕ ವಯಸ್ಸಿನಲ್ಲೇ ಹಲವು ಪುಸ್ತಕಗಳನ್ನು ಓದಿ ಮುಗಿಸಿದರು. ಅವರು ಮೊದಲು ಬರೆದದ್ದು ಒಂದು ಸಣ್ಣ ಕಥೆ! ಅದು 'ಸ್ವದೇಶಾಭಿಮಾನಿ'ಎಂಬ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅವರು 1934 ರಲ್ಲಿ ಕಾಮ್ರೇಡ್ ಪಿ. ಕೃಷ್ಣಪಿಳ್ಳೆ ಮೊದಲಾದವರ ಜೊತೆಗೂಡಿ ಕೇರಳ ಕಾಂಗ್ರೆಸ್ ಸೊಸಿಯಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. 1937 ರಲ್ಲಿ ಕೇರಳದಲ್ಲಿ ರಚನೆಯಾದ ಕಮ್ಯುನಿಸ್ಟ್ ಪಕ್ಷದ ಮೊದಲ ಸಮಿತಿಯ ಸದಸ್ಯರಾದರು. 1941 ರಿಂದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಕೇಂದ್ರ ಸಮಿತಿಯ ಸದಸ್ಯರಾದರು. 1950ರಲ್ಲಿ ಪಕ್ಷದ ರಾಜಕೀಯ ಉನ್ನತ ಸಮಿತಿಯ ಸದಸ್ಯರಾದರು. 1953–56ರಲ್ಲಿ ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾದರು. 1962–63ರಲ್ಲಿ ಅದರ ಪ್ರಧಾನ ಕಾರ್ಯದರ್ಶಿಯಾದರು. ಪಕ್ಷದ ವಿಭಜನೆಯ ನಂತರ, ಅವರು 1964 ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ರಚನೆಯಾದಾಗ ಅದರ ರಾಜಕೀಯ ನಾಯಕತ್ವದ ಸದಸ್ಯರಾದರು. ಅವರು ತಮ್ಮ ಜೀವಿತದ ಕೊನೆಯವರೆಗೂ ಅದರಲ್ಲಿ ಕೆಲಸ ಮಾಡಿದರು. 1978 ರಿಂದ 1991 ರವರೆಗೆ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. 1957, 1967, 1970, 1977 ರಲ್ಲಿ ಇಎಂಎಸ್ ಕೇರಳ ವಿಧಾನಸಭೆಗೆ ಆಯ್ಕೆಯಾದರು. ಅವರು 1957–59 ಮತ್ತು 1967–69 ರಲ್ಲಿ ಕೇರಳದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು.



ಗಾಂಧಿವಾದದಿಂದ ನೆಹರೂ ವಾದಕ್ಕೆ...
ಅವರ ಮಾತುಗಳಲ್ಲಿ ಅವರ ಬಗ್ಗೆ ನೋಡೋಣ:

"ನಾನು ಹತ್ತು ವರ್ಷದ ಬಾಲಕನಾಗಿದ್ದಾಗ ರಾಜಕೀಯದತ್ತ ಆಕರ್ಷಿತನಾಗಿದ್ದೆ. ಆ ದಿನ ನಾನು ಡಾಂಗೆ, ಮುಜಾಫರ್ ಅಹಮದ್ ಅಥವಾ ಸಿಂಗಾರವೇಲು ಬಗ್ಗೆ ಕೇಳಿರಲಿಲ್ಲ. ಆಗ ಕಮ್ಯುನಿಸಂ ಅಥವಾ ಮಾರ್ಕ್ಸ್‌ವಾದ ನನ್ನ ಕಣ್ಣಿಗೆ ಬೀಳಲೇ ಇಲ್ಲ. ಆದರೆ ನಾನು ಮಹಾತ್ಮಾ ಗಾಂಧಿ ಮತ್ತು ಅಲಿ ಸಹೋದರರು ಮತ್ತು ಅಸಹಕಾರ ಚಳವಳಿಯ ಇತರ ನಾಯಕರ ಬಗ್ಗೆ ಆ ಸಮಯದಲ್ಲಿ ಲಭ್ಯವಿರುವ ಪತ್ರಿಕೆಗಳಿಂದ ಓದಿದ್ದೇನೆ. ಆ ನಾಯಕರಲ್ಲಿ ಮಹಾತ್ಮ ಗಾಂಧೀಜಿಯೇ ಶ್ರೇಷ್ಠರಾಗಿದ್ದರಿಂದ ನಾನು 'ಗಾಂಧಿ ಭಕ್ತ'ನಾದೆ. ಒಂದು ದಶಕದ ಕಾಲ ಹಾಗೆಯೇ ನಡೆಯಿತು. ಆದರೆ ನಡುವೆ ನೆಹರೂ ಬಗ್ಗೆ ತಿಳಿಯತೊಡಗಿದೆ. ಅವರ ಒಂದಕ್ಕಿಂತ ಹೆಚ್ಚು ಉಪನ್ಯಾಸಗಳನ್ನು ಕೇಳಿದ ನಂತರ ಮತ್ತು ಅವರ ಬಗ್ಗೆ ಕೆಲವು ಪುಸ್ತಕಗಳನ್ನು ಓದಿದ ನಂತರ ನಾನು ಆಕರ್ಷಿತನಾಗಿದ್ದೆ. ನಾನು ಬರೆದು ಪ್ರಕಟಿಸಿದ ಮೊದಲ ಪುಸ್ತಕ ನೆಹರೂ ಅವರ ಜೀವನ ಚರಿತ್ರೆ." ಎಂದು ಹೇಳಿದರು.

"ನೆಹರೂ ಅವರಿಂದ ನಾನು ರಷ್ಯಾ ಮತ್ತು ಅಲ್ಲಿನ ಸಮಾಜವಾದಿ ವ್ಯವಸ್ಥೆಯ ಬಗ್ಗೆ ಮೊದಲು ಅರ್ಥಮಾಡಿಕೊಂಡಿದ್ದೇನೆ. ಈ ಐತಿಹಾಸಿಕ ಸನ್ನಿವೇಶದಲ್ಲಿ ನಾನು 1932ರಲ್ಲಿ ಜೈಲಿಗೆ ಹೋಗಿದ್ದೆ. ಮೊದಲು ಒಂದು ತಿಂಗಳು ಕಣ್ಣೂರು ಜೈಲಿನಲ್ಲಿ ಮತ್ತು ನಂತರ ಒಂದು ವರ್ಷ ವೆಲ್ಲೂರು ಜೈಲಿನಲ್ಲಿ. ನಾನು ವೆಲ್ಲೂರು ಜೈಲಿಗೆ ಹೋದಾಗ ಮಾತ್ರ ಭಗತ್ ಸಿಂಗ್ ಸಹಚರ, ಪಂಜಾಬಿ ಕೈದಿಯನ್ನು ನೋಡಿದೆ. ನಾನು ಅಲ್ಲಿ ಭಾರತದ ಮೊದಲ ಕೇಂದ್ರ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಒಬ್ಬ ಒಡನಾಡಿಯನ್ನು ನೋಡಿದೆ. ಇದೆಲ್ಲವೂ ನನ್ನನ್ನು ಗಾಂಧೀವಾದದಿಂದ ಎಡ ಕ್ರಾಂತಿಕಾರಿ ರಾಜಕಾರಣದತ್ತ ಕೊಂಡೊಯ್ದಿತು. ಹೀಗೆ ನಾನು ವೆಲ್ಲೂರು ಜೈಲಿನಲ್ಲಿದ್ದ ಒಂದೂವರೆ ವರ್ಷದ ವಾಸ ಒಂದು ಕಡೆ ಎಡ ಕ್ರಾಂತಿಕಾರಿ ರಾಜಕೀಯವನ್ನು ಕಲಿಯಲು ಸಹಾಯ ಮಾಡಿತು, ಇನ್ನೊಂದು ಕಡೆ ಗಾಂಧಿಯವರ ರಾಜಕೀಯವನ್ನು ಕಲಿಯಲು ಸಹಾಯ ಮಾಡಿತು. ಗಾಂಧಿವಾದದಿಂದ ನೆಹರೂವಾದದ ಮೂಲಕ ಮಾರ್ಕ್ಸ್‌ವಾದಕ್ಕೆ ನನ್ನ ಬೆಳವಣಿಗೆಯ ಅವಧಿ ಅದು.

ಕಾಮ್ರೇಡ್ ಇ.ಎಂ.ಎಸ್. ಹೀಗೆ ಹೇಳುತ್ತಾರೆ; "ರಷ್ಯಾದಲ್ಲಿ ನವೆಂಬರ್ ಕ್ರಾಂತಿ ನಡೆದಾಗ ನನಗೆ ಎಂಟು ವರ್ಷ. ನಾನು ಕ್ರಾಂತಿಯ ಕಥೆಗಳನ್ನು ಕೇಳಲು ಸಾಧ್ಯವಾಗಲಿಲ್ಲ. ನಾಲ್ಕೈದು ವರ್ಷಗಳ ನಂತರವೇ ನಮ್ಮ ಮನೆಗೆ ಕೆಲವರು ಚುನಾವಣೆ ಸಂದರ್ಭದಲ್ಲಿ ಮತ ಕೇಳಲು ಬಂದಿದ್ದರು. ಅವರ ಮಾತಿನಿಂದಲೇ ನಾನು ರಷ್ಯಾದ ಬಗ್ಗೆ ಮೊದಲ ಬಾರಿಗೆ ಕೇಳಿದೆ. ಮಲಬಾರ್ ಸೀಮೆಯ ಜಮೀನ್ದಾರರಿಗೆ ಕೆಲವು ನಿರ್ಬಂಧಗಳನ್ನು ವಿಧಿಸುವ ಮಸೂದೆಯನ್ನು ರಚಿಸಿದ ವ್ಯಕ್ತಿಯನ್ನು ಸೋಲಿಸುವ ಮೂಲಕ ಜಮೀನ್ದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಬಗ್ಗೆ ಮಾತನಾಡಿದರು. ಈ ಮಧ್ಯೆ, ರಷ್ಯಾದ ಬಗ್ಗೆ ಅವರ ಟೀಕೆ ಇತ್ತು. ಜಮೀನ್ದಾರರ ಮೇಲೆ ನಿರ್ಬಂಧಗಳನ್ನು ಹೇರುವ ಮೂಲಕ ಮತ್ತು ರೈತರಿಗೆ ಅಧಿಕಾರ ಮತ್ತು ಹಕ್ಕುಗಳನ್ನು ನೀಡುವ ಮೂಲಕ ನಮ್ಮ ದೇಶವನ್ನು ರಷ್ಯಾವನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಎದುರಾಳಿ ಅಭ್ಯರ್ಥಿಯ ಬಗ್ಗೆ ಅವರು ಮಾತನಾಡುತ್ತಿದ್ದಾರೆ ಎಂದು ನನಗೆ ಅವರ ಭಾಷಣದಿಂದ ಅರ್ಥವಾಯಿತು." (ಇಎಂಎಸ್ ಅವರ 'ಕೆಂಪು ಮೈದಾನ' ಲೇಖನದಿಂದ)

ದೇಶಾಬಿಮಾನಿ ಆರಂಭಿಸಲು ಆರ್ಥಿಕ ನೆರವು

1932 ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಎಡಪಂಥೀಯ 'ಪ್ರಬಾದಮ್' ಪತ್ರಿಕೆಯನ್ನು ಪ್ರಕಟಿಸಲಾಯಿತು. ಕಷ್ಟಪಟ್ಟು ನಡೆಸುತ್ತಿದ್ದ ಈ ಪತ್ರಿಕೆಗೆ ಇಎಂಎಸ್ ಸಂಪಾದಕರು ಮತ್ತು ಕಾಮ್ರೇಡ್ ಎ.ಕೆ. ಗೋಪಾಲನ್ ಆಡಳಿತಗಾರರಾಗಿದ್ದರು. ಇಎಂಎಸ್ ಅವರು ಪತ್ರಿಕೆಯ ಸಂಪಾದಕರಾಗಿ ಅಧಿಕಾರ ವಹಿಸಿಕೊಂಡಾಗ ಅವರಿಗೆ 26 ವರ್ಷ. ಕಮ್ಯುನಿಸ್ಟ್ ಪಕ್ಷದ ಪತ್ರಿಕೆಯಾಗಿ "ದೇಶಾಭಿಮಾನಿ" ಆರಂಭಿಸಿದಾಗ ಇಎಂಎಸ್ ಅವರು ತಮ್ಮ ಪೂರ್ವಿಕರ ಆಸ್ತಿಯಿಂದ ಪಡೆದ ಪಾಲಿನ ಒಂದು ಭಾಗವನ್ನು ಮಾರಿ ಆ ಮೊತ್ತವನ್ನು ದೇಶಾಭಿಮಾನಿಗೆ ನೀಡಿದರು. 1970ರಲ್ಲಿ 'ಚಿಂತಾ' ವಾರಪತ್ರಿಕೆಯ ಸಂಪಾದಕರಾಗಿದ್ದ ಅವರು ಅದಕ್ಕೂ ಮುನ್ನ 'ನ್ಯೂ ಏಜ್'ಎಂಬ ಇಂಗ್ಲಿಷ್ ಪತ್ರಿಕೆಯ ಸಂಪಾದಕರಾಗಿದ್ದರು.

ಭೂ ಸುಧಾರಣಾ ಕಾಯಿದೆ

1956ರ ನವೆಂಬರ್ ಒಂದರಂದು ಕೇರಳ ರಾಜ್ಯ ರಚನೆಯಾದ ಮುಂದಿನ ವರ್ಷ, 28 ಫೆಬ್ರವರಿ 1957 ರಂದು, 126 ವಿಧಾನಸಭಾ ಕ್ಷೇತ್ರಗಳಿಗೆ ಪ್ರಜಾಸತ್ತಾತ್ಮಕವಾಗಿ ನಡೆದ ಮೊದಲ ಚುನಾವಣೆ, ಕಮ್ಯುನಿಸ್ಟ್ ಪಕ್ಷವು ಸ್ಪಷ್ಟ ಬಹುಮತದೊಂದಿಗೆ 60 ಕ್ಷೇತ್ರಗಳನ್ನು ಗೆದ್ದಿತು. (ಆ ಸಮಯದಲ್ಲಿ ಕೇರಳದ ಒಟ್ಟು ವಿಧಾನಸಭಾ ಕ್ಷೇತ್ರಗಳು 126) 5 ಸ್ವತಂತ್ರ ಶಾಸಕರು ಕಮ್ಯುನಿಸ್ಟ್ ಪಕ್ಷವನ್ನು ಬೆಂಬಲಿಸಿದರು. ಹೀಗೆ ಮೊಟ್ಟಮೊದಲ ಬಾರಿಗೆ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿಮಂಡಲ ಅಧಿಕಾರಕ್ಕೆ ಬಂತು. ಕಾಮ್ರೇಡ್ ಇ.ಎಂ.ಎಸ್. ಅವರು ಮುಖ್ಯ ಮಂತ್ರಿಯಾದರು. ಇಎಂಎಸ್ ಸರ್ಕಾರ ಭಾರತದಲ್ಲಿ ಮೊದಲ ಬಾರಿಗೆ, ಬಡ ಭೂರಹಿತ ರೈತರಿಗೆ ಭೂಮಿ ಲಭ್ಯವಾಗುವಂತೆ ಭೂ ಸುಧಾರಣಾ ಕಾಯ್ದೆಯನ್ನು ಪರಿಚಯಿಸಿತು. ಆ ನಂತರ ಕಾಮ್ರೇಡ್ ಜ್ಯೋತಿ ಬಸು ಅವರ ಪಶ್ಚಿಮ ಬಂಗಾಳ ಸರ್ಕಾರ.

ಇಎಂಎಸ್ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸ (ಮೂರು ಭಾಗಗಳು), ಮಲಯಾಳಿಗಳ ಕೇರಳ ಮಾತೃಭೂಮಿ, ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸ, ಮಾರ್ಕ್ಸಿಸಂ–ಲೆನಿನಿಸಂ – ಒಂದು ಪುಸ್ತಕ, ಕಮ್ಯುನಿಸಂ – ಒಂದು ಪರಿಚಯಾತ್ಮಕ ಪುಸ್ತಕ, ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ, ಗಾಂಧಿ ಮತ್ತು ಗಾಂಧಿವಾದ, ಮಾರ್ಕ್ಸ್‌ವಾದ ಮತ್ತು ಮಲಯಾಳಂ ಸಾಹಿತ್ಯ, ಒಂದು ಕಮ್ಯುನಿಸ್ಟ್‌ನ ನೆನಪುಗಳು. ಮಾಜಿ ಮುಖ್ಯಮಂತ್ರಿಯವರ ನೆನಪುಗಳು. ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಅವರ ಗ್ರಂಥ – ಒಂದು ಪರಿಚಯ, ಭಾರತೀಯ ಸ್ವಾತಂತ್ರ್ಯ ಮತ್ತು ನಂತರ, ಇತ್ಯಾದಿ ಇಎಂಎಸ್ ಅವರ ಕೆಲವು ಪ್ರಮುಖ ಪುಸ್ತಕಗಳು.

ಅಕ್ಟೋಬರ್ 6, 1972 ರಿಂದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ "ಚಿಂತಾ" ಎಂಬ ಮಲಯಾಳಂ ವಾರಪತ್ರಿಕೆಯಲ್ಲಿ, "ಪ್ರಶ್ನೋತ್ತರಗಳು"ವಿಭಾಗದಲ್ಲಿ ಹಲವು ವರ್ಷಗಳು ಕಾಮ್ರೇಡ್ ಇ.ಎಂ.ಎಸ್. ಅವರು ಉತ್ತರ ಬರೆದರು. ಪ್ರಶ್ನೋತ್ತರ ವಿಭಾಗವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಾಜಕೀಯ, ತತ್ವಶಾಸ್ತ್ರ, ಪಕ್ಷ ಸ್ಥಾಪನೆ, ಕಲೆ–ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ಕಾಮ್ರೇಡ್ ಸುರ್ಜಿತ್ ಅವರ ಪೇಟ ಮತ್ತು ಗಡ್ಡ ಸೇರಿದಂತೆ ವಿವಿಧ ಶ್ರೇಣಿಯ ವಿಷಯಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳಿಗೆ ಇದು ತುಂಬಾ ಉಪಯುಕ್ತವಾಗಿತ್ತು. ಅವರು ಇಎಂಎಸ್ ➚

ಸಾಹಿತ್ಯದಲ್ಲಿ ಯುನೈಟೆಡ್ ಫ್ರಂಟ್

ಇಎಂಎಸ್ ಅವರು ರಾಜಕೀಯದಲ್ಲಿ ಮಾತ್ರವಲ್ಲದೆ ಸಾಹಿತ್ಯದಲ್ಲಿಯೂ ಐಕ್ಯರಂಗವನ್ನು ರಚಿಸುವ ಅಗತ್ಯವನ್ನು ಒತ್ತಿ ಹೇಳಿದರು. ಅದನ್ನು ಅವರು 'ಪ್ರಗತಿಶೀಲ ಸಾಹಿತ್ಯ ಮತ್ತು ಕಮ್ಯುನಿಸ್ಟ್ ಸಾಹಿತ್ಯ' ಪುಸ್ತಕದಲ್ಲಿ ಸುಂದರವಾಗಿ ವಿವರಿಸಿದ್ದಾರೆ. "ಗಂಭೀರ ರಾಜಕೀಯ ಕೆಲಸಗಳಲ್ಲಿ ಪಾಲ್ಗೊಳ್ಳದ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಉದ್ದೇಶಿಸದ ಅನೇಕ ಪ್ರಗತಿಪರ ಸಾಹಿತಿಗಳು ಇದ್ದಾರೆ. ಕಾರ್ಮಿಕ ವರ್ಗದ ದೃಷ್ಟಿಕೋನವಲ್ಲದಿದ್ದರೂ, ಅವರು ಪ್ರಜಾಸತ್ತಾತ್ಮಕ ಮನೋಭಾವ, ಮಾನವತಾವಾದ ಮತ್ತು ಭವ್ಯವಾದ ಮತ್ತು ಸಮಾನತೆಯ ಪ್ರಪಂಚದ ಕನಸನ್ನು ಹೊಂದಿದ್ದಾರೆ. ಅಂತಹ ಸಾಹಿತ್ಯ ಕೃತಿಗಳ ಕೊರತೆ ಮತ್ತು ದೌರ್ಬಲ್ಯಗಳ ಹೊರತಾಗಿಯೂ, ಅವರು ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಚಳುವಳಿಗೆ ಸಹಾಯ ಮಾಡುತ್ತಾರೆ. ಅಂದರೆ ದುಡಿಯುವ ವರ್ಗದ ದೃಷ್ಟಿಕೋನ ಇಲ್ಲದಿದ್ದರೂ, ಭಾವನಾತ್ಮಕ ಕ್ರಾಂತಿಕಾರಕ ಕೆಲಸಗಳಲ್ಲಿ ಭಾಗವಹಿಸದಿದ್ದರೂ ಒಂದಷ್ಟು ಮಟ್ಟಿಗೆ ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಪುಸ್ತಕಗಳನ್ನು ತಯಾರಿಸುವ ಪ್ರಗತಿಪರ ಸಾಹಿತಿಗಳೂ ಇದ್ದಾರೆ. ಅವರನ್ನು ಸೌಹಾರ್ದ ಮತ್ತು ಸಹಕಾರ ಮನೋಭಾವದಿಂದ ನಡೆಸಿಕೊಳ್ಳಬೇಕಾದ ಕರ್ತವ್ಯ ನಮ್ಮ ಮೇಲಿದೆ. ಹಾಗೆಯೇ ಆ ಗೆಳೆಯರ ದೃಷ್ಟಿಕೋನದಿಂದ ಹೊರಹೊಮ್ಮುವ ನ್ಯೂನತೆ, ದೌರ್ಬಲ್ಯಗಳನ್ನು ಸೌಹಾರ್ದಯುತವಾಗಿ ಎತ್ತಿ ಟೀಕಿಸುವುದು ನಮ್ಮ ಕರ್ತವ್ಯ. ಇವೆರಡರ ಸಂಯೋಜನೆಯು ಸಾಹಿತ್ಯದಲ್ಲಿ ಐಕ್ಯರಂಗವಾಗಿದೆ. ಇ.ಎಂ.ಎಸ್. ಅವರ ಪುಸ್ತಕಗಳು ಮಲಯಾಳಂ ಮತ್ತು ತಮಿಳು ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲದೆ ಇಂಗ್ಲಿಷ್, ರಷ್ಯನ್, ಜರ್ಮನ್, ಜಪಾನೀಸ್ ಇತ್ಯಾದಿಗಳಲ್ಲಿ ಕಾಣಿಸಿಕೊಂಡಿವೆ.

ಮಹಿಳಾಪರ ಘೋಷಣೆಗಳುಳ್ಳ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿ

ರಾಜಕೀಯ ಪಕ್ಷಗಳಿಗೆ ಜನವಾದಿ ಮಹಿಳಾ ಸಂಘಟನೆ ಒತ್ತಾಯ

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ ಘೋಷಣೆಯಾಗಿದೆ. ಮೇ 10ರಂದು ಒಂದೇ ದಿನ ಚುನಾವಣೆ ನಡೆಯುತ್ತದೆ. ಚುನಾವಣೆ ಸಂದರ್ಭಗಳಲ್ಲಿ ರಾಜಕೀಯ ಪಕ್ಷಗಳು ರಾಜ್ಯದ ಜನತೆಗೆ ಹಲವು ಬಗೆಯ ಆಶ್ವಾಸನೆಗಳನ್ನು ನೀಡತೊಡಗಿವೆ. ಚುನಾವಣಾ ಪ್ರಣಾಳಿಕೆ ಸಿದ್ಧಪಡಿಸತೊಡಗಿವೆ. ಈ ಸಂದರ್ಭದಲ್ಲಿ ಮಹಿಳಾಪರ ಪ್ರಣಾಳಿಕೆ ಬಿಡುಗಡೆ ಮಾಡುವಂತೆ ಚುನಾವಣಾ ಕಣದಲ್ಲಿರುವ ರಾಜಕೀಯ ಪಕ್ಷಗಳಿಗೆ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ. ಈ ಸಂಬಂಧ ಸಂಘಟನೆಯು ಮಹಿಳಾ ಪ್ರಣಾಳಿಕೆಯೊಂದನ್ನು ಬಿಡುಗಡೆ ಮಾಡಿದೆ. ಇದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಪ್ರಿಯ ಮತದಾರ ಬಂಧುಗಳೇ,

ನಾವೀಗ ನಮ್ಮ ರಾಜ್ಯದ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿದ್ದೇವೆ. ಕಳೆದ ಐದು ವರ್ಷದ ಅವಧಿಯ ನಮ್ಮ ಬದುಕನ್ನು ಹಿಂತಿರುಗಿ ನೋಡಿಕೊಳ್ಳುವ ಮೂಲಕ ನಮ್ಮ ಕೈಯಲ್ಲಿರುವ ಮತವನ್ನು ಅತ್ಯಂತ ಜವಾಬ್ದಾರಿಯಿಂದ ಚಲಾಯಿಸಬೇಕಿದೆ. ಸಮಾನತೆ, ಸೌಹಾರ್ದತೆ, ಸಮಗ್ರ ಅಭಿವೃದ್ಧಿಯ ಆಶಯಗಳಿಗಾಗಿ ಹೋರಾಡುತ್ತಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು, ನಾಡಿನ ಮಹಿಳೆಯರ ಬಾಧಿತ ಸಮಸ್ಯೆಗಳ ಅನುಭವಗಳೊಂದಿಗೆ ಈ ಪ್ರಣಾಳಿಕೆಯನ್ನು ರೂಪಿಸಿದೆ. ಚುನಾವಣೆಯಿಂದ ಚುನಾವಣೆಗೆ ವಿವಿಧ ಪಕ್ಷಗಳ ಪ್ರಣಾಳಿಕೆಗಳಲ್ಲಿ ಕಾಣೆಯಾದ ಮಹಿಳಾ ಪರ ಘೋಷಣೆಗಳು, ಭರವಸೆಗಳು ಈ ಸಂದರ್ಭದಲ್ಲೂ ನಮ್ಮ ಮಹಿಳಾ ಪ್ರಣಾಳಿಕೆಯ ಹಕ್ಕೊತ್ತಾಯಗಳಾಗಿ ಉಳಿದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜಕೀಯ ದುರಂತವೇ ಆಗಿದೆ. ಚುನಾವಣಾ ಕಣದಲ್ಲಿರುವ ರಾಜಕೀಯ ಪಕ್ಷಗಳು ಈ ಹಕ್ಕೊತ್ತಾಯಗಳನ್ನು ತಮ್ಮ ಪ್ರಣಾಳಿಕೆಗಳಲ್ಲಿ ಒಳಗೊಳ್ಳಬೇಕೆಂದು ಆಗ್ರಹಿಸುತ್ತೇವೆ. ಈ ಹಿನ್ನಲೆಯಲ್ಲಿ ನಮ್ಮ ಪ್ರಣಾಳಿಕೆಯ ಹಕ್ಕೊತ್ತಾಯಗಳನ್ನು ರಾಜ್ಯದ ಮಹಿಳೆಯರ ಮುಂದೆ ತೆರೆದಿಟ್ಟು ಚಿಂಥನ ಮಂಥನಗಳ ಮೂಲಕ ನಾಡಿನ ಉಳಿವಿಗಾಗಿ ಮತ್ತು ಮಹಿಳೆಯರ ಉಳಿವಿಗಾಗಿ ಮತ ನೀಡಬೇಕೆಂದು ಮನವಿ ಮಾಡುತ್ತೇವೆ.

> "ಮತದಾನ ನಮ್ಮ ಹಕ್ಕು ಮತ್ತು ಕರ್ತವ್ಯ. ಮಹಿಳೆಯರ ಮತಗಳು ಮಾರಾಟಕ್ಕಿಲ್ಲ. ಧರ್ಮ, ಜಾತಿ, ಕೋಮು ಆಧಾರದಲ್ಲಿ ಮತ ಚಲಾಯಿಸದಿರಿ. ಒಂದೊಂದು ಮತದಲ್ಲಿ ಮಹಿಳೆಯರ ಮತ್ತು ನಾಡಿನ ಭವಿಷ್ಯವಿದೆ. ಎಚ್ಚರದಿಂದ ಮತ ಚಲಾಯಿಸಿ ನಾಡನ್ನು ರಕ್ಷಿಸಿ" ರಾಜ್ಯದ ಮಹಿಳಾ ಮತದಾರರಿಗೆ ಜನವಾಧಿ ಮಹಿಳಾ ಸಂಘಟನೆ ಕರೆ ನೀಡಿದೆ.

ಹಕ್ಕೊತ್ತಾಯಗಳು ಹೀಗಿವೆ;

ಸಾರ್ವಜನಿಕ ಪಡಿತರ ವ್ಯವಸ್ಥೆ:

ಆದಾಯ ತೆರಿಗೆದಾರರನ್ನು ಹೊರತು ಪಡಿಸಿ ಎಲ್ಲರಿಗೂ ಸಾರ್ವಜನಿಕ ಪಡಿತರ ವ್ಯವಸ್ಥೆ. ಪಡಿತರ ಚೀಟಿ ಯಾವುದೇ ಜಿಲ್ಲೆಯಲ್ಲಿ ಮಾಡಿಸಿದ್ದರೂ ಅವರಿರುವ ವಾಸದ ಸ್ಥಳದಲ್ಲಿ ಪಡಿತರ ಪಡೆಯಲು ಅವಕಾಶ. ಅಕ್ಕಿ, ರಾಗಿ, ಜೋಳ, ಬೇಳೆಕಾಳುಗಳು, ಅಡುಗೆ ಎಣ್ಣೆ, ಸಕ್ಕರೆ, ಕಾಫಿ/ಚಾ ಪುಡಿಯನ್ನು ಪಡಿತರ ವ್ಯವಸ್ಥೆಯ ಮೂಲಕ ವಿತರಣೆ. ಹಾಲು ಮತ್ತು ತರಕಾರಿಗಳನ್ನು ನಿಯಂತ್ರಿತ ಬೆಲೆಯಲ್ಲಿ ವಿತರಣೆ. ಪಡಿತರ ವ್ಯವಸ್ಥೆಯ ಮೂಲಕ ರಿಯಾಯಿತಿ ದರದಲ್ಲಿ ಸೀಮೆ ಎಣ್ಣೆ. ಒಂಟಿ ಮಹಿಳೆಯರಿಗೆ, ಅಸಂಘಟಿತ ಕಾರ್ಮಿಕರಿಗೆ, ವಿಕಲಚೇತನರಿಗೆ ಆದ್ಯತೆಯ ಆಧಾರದಲ್ಲಿ ಪಡಿತರ ಚೀಟಿ. ಅಪೌಷ್ಟಿಕತೆಗೆ ಒಳಗಾಗಿರುವ ಕುಟುಂಬಗಳಿಗೆ ಮತ್ತು ಹಿರಿಯ ನಾಗರೀಕರಿಗೆ ಆಹಾರ ಮತ್ತು ಆರೋಗ್ಯ ಇಲಾಖೆ ವಿಶೇಷ ಫುಡ್ ಪ್ಯಾಕೇಜ್‌ಗಳ ಘೋಷಣೆ. ವಾರ್ಡ್ ಮತ್ತು ಪಂಚಾಯತಿಗಳ ಮಟ್ಟದಲ್ಲಿ ಜನತಾ ಬಜಾರ್ ಗಳನ್ನು ಆರಂಭಿಸಬೇಕು. ಗುಣಾತ್ಮಕ ಮತ್ತು ರುಚಿಕರ ಸಿದ್ಧ ಆಹಾರವನ್ನು ಕಡಿಮೆ ದರದಲ್ಲಿ ಇಂದಿರಾ ಕ್ಯಾಂಟೀನ್ ಗಳ ಮೂಲಕ ಪೂರೈಕೆ.

ಎಲ್ಲ ಅಸಂಘಟಿತರಿಗೆ ಪಿಂಚಣಿ

ಎಲ್ಲಾ ಸರ್ಕಾರಿ ನೌಕರರಿಗೂ ಪಿಂಚಣಿ. ಖಾಸಗಿ ವಲಯದಲ್ಲಿ ದುಡಿಯುವ ಎಲ್ಲ ಅಸಂಘಟಿತರಿಗೆ ಪಿಂಚಣಿ. ಪಿಂಚಣಿ ಪಡೆಯುವುದು ಸರಳ ಮತ್ತು ಜನಸ್ನೇಹಿ ವ್ಯವಸ್ಥೆಯಾಗಿರಬೇಕು. 55 ವರ್ಷ ಮೇಲ್ಪಟ್ಟ ಮತ್ತು ವಯಸ್ಸಿನ ಮಿತಿ ಇಲ್ಲದೆ ಎಲ್ಲಾ ಮಹಿಳೆಯರಿಗೆ, ವಿಕಲ ಚೇತನರಿಗೆ ಮಾಸಿಕ 3000 ರೂಪಾಯಿ ಪಿಂಚಣಿ. ಪಿಂಚಣಿ ಪಡೆಯಲು ವಾರ್ಡ್/ಪಂಚಾಯತ್ ಮಟ್ಟದಲ್ಲಿ ಸುಲಭ ವ್ಯವಸ್ಥೆಗಳನ್ನು ಒದಗಿಸುವುದು. ಎಲ್ಲಾ ಪಿಂಚಣಿಯನ್ನು ಬ್ಯಾಂಕ್ ಖಾತೆಯ ಮೂಲಕ ನೀಡುವುದು.

ಆರೋಗ್ಯ ಭದ್ರತೆ

ಆರೋಗ್ಯ ಭದ್ರತೆ, ಉಚಿತ ಮತ್ತು ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯನ್ನು ಖಾತ್ರಿ ಮಾಡುವುದು. ಅದಕ್ಕೆ ಅಗತ್ಯ ಹಣಕಾಸನ್ನು ಒದಗಿಸುವುದು. ಎಲ್ಲ ಔಷಧಿಗಳನ್ನು ಕಡಿಮೆ ದರದಲ್ಲಿ ಒದಗಿಸುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತ ದರ್ಜೆಗೆ ಎತ್ತರಿಸಿ 24 ಗಂಟೆ ಸೇವೆಗಳು ಲಭ್ಯವಿರುವಂತೆ ಕ್ರಮ ಕೈಗೊಳ್ಳುವುದು. ಕುಟುಂಬಗಳಲ್ಲಿ ಹಾಸಿಗೆ ಹಿಡಿದ ರೋಗಿಗಳಿಗೆ ಆರೋಗ್ಯ ಸೇವೆಗಳನ್ನು ನೀಡಲು ಆರೋಗ್ಯ ಕಾರ್ಯಕರ್ತರ ಅಗತ್ಯವಿದ್ದಲ್ಲಿ ಕೇರಳ ಮಾದರಿಯಲ್ಲಿ ಸರ್ಕಾರಿ ವ್ಯವಸ್ಥೆಯ ಮೂಲಕ ಉಚಿತವಾಗಿ ಒದಗಿಸಬೇಕು. ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಯನ್ನು ಸರ್ಕಾರವೇ ನಿರ್ವಹಣೆ ಮಾಡುವ ಮೂಲಕ ಉಚಿತ ಸೇವೆಗಳನ್ನು ಒದಗಿಸುವುದು. ಕ್ಯಾನ್ಸರ್, ಕಿಡ್ನಿ, ಹೃದಯ ಸಂಬಂಧಿಯಂತಹ ಧೀರ್ಘ ಖಾಯಿಲೆಗಳಿಗೆ ಮಾಸಿಕ ಚಿಕಿತ್ಸಾ ಸಹಾಯ ಧನ ನೀಡವುದು. ಸರ್ಕಾರಿ ಆರೋಗ್ಯ ವಿಮಾ ವ್ಯವಸ್ಥೆಯನ್ನು ಬಲಪಡಿಸಬೇಕು. ಇಳಿ ವಯಸ್ಸಿನ ಹಿರಿಯ ನಾಗರೀಕರಿಗೆ ಸರ್ಕಾರದ ಅಧೀನದಲ್ಲಿ ಕಾಳಜಿ ಅಥವಾ ಆರೋಗ್ಯ ಕೇಂದ್ರಗಳನ್ನು ತೆರೆಯುವುದು. ಎಲ್ಲ ಅಸಂಘಟಿತ ಕಾರ್ಮಿಕರಿಗೆ ಜೀವವಿಮೆ ಮತ್ತು ಆರೋಗ್ಯ ವಿಮೆಯನ್ನು ಒದಗಿಸಬೇಕು. ಎಲ್ಲಾ ಮಹಿಳೆಯರಿಗೆ, ವಿಶೇಶವಾಗಿ 92% ಮಹಿಳೆಯರೇ ಇರುವ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಉಚಿತ ಸಾರಿಗೆ ವ್ಯವಸ್ಥೆ ಒದಗಿಸಬೇಕು.

ಮಹಿಳೆಯರ ಸುರಕ್ಷತೆ

ಮಹಿಳೆಯರ ಸುರಕ್ಷತೆ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಯಂತ್ರಿಸುವುದು ಮತ್ತು ದೌರ್ಜನ್ಯಮುಕ್ತ ಪರಿಸರ ನಿರ್ಮಾಣಕ್ಕೆ ಅಗತ್ಯವಾದ ಕ್ರಮಗಳಿಗೆ ಆಡಳಿತ ಗಮನ ನೀಡಬೇಕು. ನ್ಯಾಯಮೂರ್ತಿ ವರ್ಮಾ ಕಮಿಟಿಯ ಶಿಫಾರಸ್ಸುಗಳು, ಕರ್ನಾಟಕ ರಾಜ್ಯ ದೌರ್ಜನ್ಯ ತಡೆ ಸಮಿತಿಯ ಶಿಫಾರಸ್ಸುಗಳು, ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ರ ಸಮಿತಿ ಸೂಚಿಸಿದ ಬಾಲ್ಯ ವಿವಾಹ ತಡೆಯ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು ಮತ್ತು ಅದಕ್ಕೆ ಅಗತ್ಯವಾದ ಬಜೆಟ್ ಅನ್ನು ಒದಗಿಸಬೇಕು. ಗರ್ಭಾವಸ್ಥೆಯ ಶಿಶು ಲಿಂಗಪತ್ತೆ ನಿಷೇದಿಸುವ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಮಹಿಳೆಯರ ಸುರಕ್ಷಿತ ಗರ್ಭಪಾತದ ಹಕ್ಕನ್ನು ರಕ್ಷಿಸಬೇಕು. ಯುವಜನರ ಆಯ್ಕೆಯ ಹಕ್ಕುಗಳನ್ನು ರಕ್ಷಿಸಬೇಕು. ಮರ್ಯಾದಾ ಹೆಸರಿನಲ್ಲಿ ನಡೆಯುತ್ತಿರುವ ಹತ್ಯೆಗಳನ್ನು ನಿಷೇಧಿಸಲು ಪ್ರತ್ಯೇಕ ಕಾಯಿದೆಯನ್ನು ರೂಪಿಸಬೇಕು. ಮಹಿಳಾ ಪೋಲೀಸ್ ಠಾಣೆಗಳನ್ನು, ಫಾಸ್ಟ್ ಟ್ರಾಕ್ ಕೋರ್ಟ್ ಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಉಚಿತವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸಬೇಕು. ಅಬಕಾರಿ ಕಾನೂನನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಮದ್ಯ ತಯಾರಿ ಮತ್ತು ಮಾರಾಟದ ಮೇಲಿನ ನಿಯಂತ್ರಣ ಹೇರುವ ಅಧಿಕಾರವನ್ನು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಇರುವ ಮಹಿಳೆಯರಿಗೆ ವಹಿಸಿಕೊಡಬೇಕು. ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ದೌರ್ಜನ್ಯ ತಡೆ ಸಮಿತಿಗಳನ್ನು ರಚಿಸಬೇಕು. ಇದನ್ನು ಜಾರಿಗೊಳಿಸದ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಹಿಳೆಯರಿಗೆ ಹುಟ್ಟಿದ ಮತ್ತು ಮದುವೆಯಾದ ಎರಡು ಮನೆಗಳಲ್ಲಿ ಆಸ್ತಿಯ ಹಕ್ಕನ್ನು ನೀಡಬೇಕು. ಮಹಿಳೆ ಮತ್ತು ಮಕ್ಕಳ ಜೀವನಾಂಶ ಕಾಯಿದೆಯನ್ನು ಬಲಪಡಿಸಬೇಕು. ನಿಗಧಿತ ಅವಧಿಯೊಳಗೆ ಪರಿಹಾರ ಸಿಗುವಂತಾಗಬೇಕು. ಚುನಾಯಿತ ಪ್ರತಿನಿಧಿಗಳು, ಆಡಳಿತಗಾರರು ಹಾಗು ಮಾಧ್ಯಮಗಳು ಮಹಿಳೆಯರ ಕುರಿತು ಅವಹೇಳನಕಾರಿ ಮಾತುಗಳನ್ನು ಆಡದಂತೆ ನಿಯಮಗಳನ್ನು ರೂಪಿಸಬೇಕು. ಮತ್ತು ಗಂಭೀರವಾಗಿ ಜಾರಿಗೊಳಿಸಬೇಕು.

ರಾಜ್ಯ ಮಹಿಳಾ ಆಯೋಗವನ್ನು ಬಲಪಡಿಸಿ

ರಾಜ್ಯ ಮಹಿಳಾ ಆಯೋಗವನ್ನು ಅಗತ್ಯ ಹಣಕಾಸಿನ ಮೂಲಕ ಬಲಪಡಿಸಬೇಕು ಮತ್ತು ಅದು ಸ್ವತಂತ್ರವಾಗಿ ಕೆಲಸ ನಿರ್ವಹಿಸಬೇಕು. ಈ ಆಯೋಗಗಳಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡಲು ಸಮಿತಿಯನ್ನು ರಚಿಸಬೇಕು. ಈ ಸಮಿತಿಯಲ್ಲಿ ಮಹಿಳಾ ಪರ ಕಣ್ಣೋಟವಿರುವ ಚಿಂತಕರು, ಹೋರಾಟಗಾರರು ಇರಬೇಕು. ಆಯೋಗಕ್ಕೆ ರಾಜಕೀಯ ನೇಮಕಾತಿ ನಿಲ್ಲಬೇಕು. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ಆರಂಭಿಸಬೇಕು ಮತ್ತು ಅದಕ್ಕೆ ಅಗತ್ಯ ಹಣಕಾಸನ್ನು ಒದಗಿಸಬೇಕು.

ಎಲ್ಲ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ

ಸಾರ್ವಜನಿಕ ಮತ್ತು ಖಾಸಗಿ ಬಸ್‌ಗಳಲ್ಲಿ 50% ಸೀಟುಗಳನ್ನು ಮಹಿಳೆಯರಿಗಾಗಿ ಮೀಸಲಿಡಬೇಕು. ರೈಲ್ವೆಯ ಪ್ರತಿ ಕಂಪಾರ್ಟ್‌ಮೆಂಟ್ ಮತ್ತು ವಿಮಾನ ಪ್ರಯಾಣದಲ್ಲಿಯು ಮಹಿಳೆಯರಿಗೆ ಸೀಟುಗಳನ್ನು ಮೀಸಲಿರಿಸಬೇಕು. ಎಲ್ಲಾ ಜಿಲ್ಲೆಗಳಲ್ಲೂ ಉನ್ನತ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿನಿಯರಿಗೆ ಮತ್ತು ದುಡಿಯುವ ಮಹಿಳೆಯರಿಗೆ ಸರ್ಕಾರಿ ವಸತಿ ನಿಲಯಗಳನ್ನು ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ನಿರ್ಮಿಸಬೇಕು. ಎಲ್ಲ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳಿಗೆ ಸೀಟುಗಳನ್ನು ಮೀಸಲಿಡಬೇಕು. ಮೂಢನಂಬಿಕೆಗಳು ಮತ್ತು ಅವೈಚಾರಿಕ ಆಚರಣೆಗಳನ್ನು ನಿಷೇಧಿಸುವ ಕಾನೂನನ್ನು ರೂಪಿಸಬೇಕು. ಲಿಂಗ ಸಂವೇಧಿ ಬಜೆಟ್‌ನ್ನು ಜಾರಿಗೆ ತರಬೇಕು. ಲಿಂಗ ಸಂವೇಧಿ ಆಡಿಟಿಂಗ್‌ನ್ನು ಬಲಪಡಿಸಬೇಕು.

ಮಹಿಳೆ ಮತ್ತು ಉದ್ಯೋಗ

ಸಾರ್ವಜನಿಕ ಉದ್ದಿಮೆಗಳನ್ನು, ಬ್ಯಾಂಕುಗಳನ್ನು ರಕ್ಷಿಸಬೇಕು. ಪ್ರತಿವರ್ಷ ಉದ್ಯೋಗ ಸೃಷ್ಟಿಗೆ ಆದ್ಯ ಗಮನ ನೀಡಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ 100 ದಿನದ ಮಿತಿಯನ್ನು ತೆಗೆಯಬೇಕು ಮತ್ತು ಇದನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಕನಿಷ್ಟ ಕೂಲಿ ನೀಡಬೇಕು. ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರಬೇಕು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬೇಕು. ಮಹಿಳೆಯರ ಹಕ್ಕುಗಳನ್ನು ಮತ್ತು ಸುರಕ್ಷತೆಯನ್ನು ಖಾತ್ರಿಗೊಳಿಸಬೇಕು. ರಾತ್ರಿ ಪಾಳಿ ಕೆಲಸ ಮಹಿಳೆಯರ ಆಯ್ಕೆಗೆ ಬಿಡಬೇಕು. ಕೆಲಸದ ಸ್ಥಳದಲ್ಲಿ ಮತ್ತು ಕೆಲಸಕ್ಕೆ ಹೋಗಿ ಬರುವ ಪ್ರಯಾಣದಲ್ಲಿ ಸುರಕ್ಷತೆಯನ್ನು ಖಾತ್ರಿಗೊಳಿಸಬೇಕು. ಮಹಿಳೆಯರ ಸ್ವಸಹಾಯ ಗುಂಪುಗಳನ್ನು ಆರ್ಥಿಕ ನೆರವು ಅಗತ್ಯವಿರುವ ಆದ್ಯತಾ ಘಟಕಗಳೆಂದು ಪರಿಗಣಿಸಿ ಅವರಿಗೆ ಶೇ 4%ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡಬೇಕು. ಅವರಿಗೆ ಆದಾಯದಾಯಕ ಚಟುವಟಿಕೆಗಳ ತರಬೇತಿ ನೀಡಿ, ಅವರು ಮಾಡುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಬೇಕು. ಈ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ಕಾರ್ಯಾಚರಣೆಯ ಮೇಲೆ ರಾಜಕೀಯ ಹಿಡಿತವಿರಬಾರದು. ಅಂಗನವಾಡಿ, ಆಶಾ, ಬಿಸಿಯೂಟ ಮೊದಲಾದ ಸ್ಕೀಂಗಳಲ್ಲಿ ಕೆಲಸ ಮಾಡುತ್ತಿರುವವರ ಸೇವೆಯನ್ನು ಖಾಯಂಗೊಳಿಸಿ ಕನಿಷ್ಟ ವೇತನ, ಪಿಂಚಣಿ ನೀಡಬೇಕು. ಮನೆಕೆಲಸಗಾರರಿಗೆ ಪ್ರತ್ಯೇಕ ಮಂಡಳಿ ರಚಿಸಬೇಕು

ಅವರ ಉತ್ತರಗಳನ್ನು ಆಸಕ್ತಿಯಿಂದ ಓದಿದರು ಮತ್ತು ಆಲೋಚನೆಯ ಸ್ಪಷ್ಟತೆಯನ್ನು ಪಡೆದರು.

ಭಾರತದ ವಿಷಯಗಳು

"ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತ್ ಮತ್ತು ಸಿಂಧ್‌ನಿಂದ ಅಸ್ಸಾಂ ಮತ್ತು ಈಶಾನ್ಯ ಪ್ರದೇಶಗಳವರೆಗೆ ಜಾತಿ, ಧರ್ಮ, ಭಾಷೆ ಮತ್ತು ಪ್ರದೇಶವನ್ನು ಲೆಕ್ಕಿಸದೆ ಭಾರತವು ಕೋಟಿಗಟ್ಟಲೆ ಜನರನ್ನು ಒಳಗೊಂಡಿದೆ. ಈ ಜನರ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಏಕತೆಯ ಬಯಕೆ ಭಾರತವನ್ನು ರಾಷ್ಟ್ರವನ್ನಾಗಿ ಮಾಡಿತು. ಈ ದೃಷ್ಟಿಕೋನವನ್ನು ಮುಂದಿಟ್ಟುಕೊಂಡು, ಸ್ವಾತಂತ್ರ್ಯ ಹೋರಾಟದ ಅತ್ಯುನ್ನತ ನಾಯಕರು ಭಾರತೀಯ ಜನರ ರಾಷ್ಟ್ರೀಯ ಏಕತೆ, ಸ್ವಾತಂತ್ರ್ಯ, ಸಾರ್ವಭೌಮತ್ವ, ಧಾರ್ಮಿಕ ಸಾಮರಸ್ಯ, ಜಾತಿರಹಿತ ಮತ್ತು ಸಮಾನತೆಯ ಸಮಾಜ – ಇವೆಲ್ಲವೂ ಭಾರತೀಯ ರಾಷ್ಟ್ರದ ವಿಷಯ ಎಂದು ಜನರಿಗೆ ತಿಳಿಸಿದರು.

ಕಾಮ್ರೇಡ್ ಇ.ಎಂ.ಎಸ್. ತಮ್ಮ 'ಭಾರತೀಯ ರಾಷ್ಟ್ರೀಯತೆಯ ಆತ್ಮ'ಎಂಬ ಪ್ರಬಂಧದಲ್ಲಿ, ಮಾರ್ಕ್ಸ್ ನಿಧನರಾದಾಗ, ಅವರ ಜೀವನ ಸಂಗಾತಿ ಎಂಗೆಲ್ಸ್, "ಮಾರ್ಕ್ಸ್ ಈಗ ಯೋಚಿಸುವುದನ್ನು ನಿಲ್ಲಿಸಿದ್ದಾರೆ" ಎಂದು ಹೇಳುವ ಮೂಲಕ ಅವರನ್ನು ಸಮಾಧಾನಪಡಿಸಿದರು. ಹಾಗಾಗಿಯೇ ಹಳೆಯ ಮಾರ್ಕ್ಸ್ ವಾದಿ ವಿದ್ವಾಂಸರಾದ ಇ.ಎಂ.ಎಸ್ ಅವರು ತಮ್ಮ 89ನೇ ವಯಸ್ಸಿನಲ್ಲಿ 19.3.1998ರಂದು ಬೇರೆ ಪತ್ರಿಕೆಗಳಿಗೆ ಎರಡು ಲೇಖನಗಳನ್ನು ಬರೆದು ಮುಗಿಸಿ, ತಮ್ಮ ಸಹಾಯಕನಿಗೆ ದೇಶಾಭಿಮಾನಿ ಪತ್ರಿಕೆಗೆ ಮೂರನೇ ಲೇಖನಕ್ಕೆ ಪದಗಳನ್ನು ಹೇಳಿಕೊಡುತ್ತಿದ್ದಾಗ ಇದ್ದಕ್ಕಿದ್ದಂತೆ ಉಸಿರುಗಟ್ಟಿದಂತಾಯಿತು. ವೈದ್ಯರನ್ನು ಕರೆಸಿ ಆಸ್ಪತ್ರೆಗೆ ಕರೆದೊಯ್ದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು! ಇದು ಕಾಮ್ರೇಡ್ ಇಎಂಎಸ್ ಅವರ ಮಾತು: "ನಾನು ಗುರುಗಳಿಂದ ಸೂಚನೆಯನ್ನು ಸ್ವೀಕರಿಸಿಲ್ಲ. ಈ ದೇಶದಲ್ಲಿ ಆಗುತ್ತಿರುವ ವಿದ್ಯಮಾನಗಳನ್ನು ನೋಡಿ ಅರ್ಥ ಮಾಡಿಕೊಂಡ ನಂತರ ನಾನು ಕ್ಷೇತ್ರಕ್ಕೆ ಪ್ರವೇಶಿಸಿದೆ. ಬಾಲ್ಯದಿಂದಲೂ ನಾನು ರಾಜಕೀಯ ವಿಷಯಗಳನ್ನು ಕಲಿಯಲು ಮತ್ತು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಅದರ ಫಲವಾಗಿ ನಾನು ಈ ಮಟ್ಟಕ್ಕೆ ಏರಿದ್ದೇನೆ. ನನ್ನ ಆದರ್ಶವನ್ನು ನನ್ನ ಜೀವಿತಾವಧಿಯಲ್ಲಿ ಈಡೇರಿಸಬೇಕು ಎಂಬ ಹಠ ನನಗಿಲ್ಲ. ನನ್ನ ಕಾಲದ ನಂತರವಾದರೂ ಈಡೇರಿದರೆ ಸಾಕು..."

–ಟಿ. ವರದರಾಸನ್–(ತಮಿಳಿನಿಂದ)

ಮುಸ್ಲಿಮರ ಮೀಸಲಾತಿ ರದ್ದು:

ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ನಾಶಪಡಿಸುವುದೇ ಗುರಿ

ಸಿದ್ದಯ್ಯ ಸಿ.



ಮುಸ್ಲಿಮರಿಗೆ ಹಿಂದುಳಿದ ವರ್ಗಗಳ ಮೀಸಲಾತಿಯ ಭಾಗವಾಗಿ 2(ಬಿ) ಪ್ರವರ್ಗದಡಿ ನೀಡಿದ್ದ ಶೇ.4 ಮೀಸಲಾತಿಯನ್ನು ರದ್ದುಮಾಡಿ ಬೊಮ್ಮಾಯಿ ನೇತೃತ್ವದ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ಕೆಲವರಿಗೆ ಇದು ಮುಸ್ಲಿಮರ ಮೀಸಲಾತಿಯನ್ನು ಕಸಿದುಕೊಂಡಂತೆ ಕಂಡರೂ, ಇದು ಆರ್.ಎಸ್.ಎಸ್. ನ ಕಾರ್ಯಸೂಚಿಯ ಈಡೇರಿಕೆಯ ಮತ್ತೊಂದು ಹೆಜ್ಜೆ ಎಂಬುದೇ ಸತ್ಯ. ಬಿಜೆಪಿ ಸರ್ಕಾರದ ಮೀಸಲಾತಿ ಹಾದಿಯ ಈ ಪಯಣ ಎಲ್ಲರ ಮೀಸಲಾತಿಗಳನ್ನು ನಾಶಮಾಡುವುದರೊಂದಿಗೆ ಕೊನೆಗೊಳ್ಳುತ್ತದೆ. (ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಎಲ್ಲರಿಂದಲೂ ಕಸಿದುಕೊಳ್ಳಲು ಮೋದಿ ಸರ್ಕಾರ ಮಾಡಿದ ವಿವಿಧ ಬಗೆಯ ತಂತ್ರಗಾರಿಕೆಯನ್ನು ಒಮ್ಮೆ ನೆನಪಿಸಿಕೊಳ್ಳಿ).

ಹಿಂದೂ ರಾಷ್ಟ್ರೀಯತೆಯನ್ನು ಉತ್ತೇಜಿಸುವುದು ಆರ್‌ಎಸ್‌ಎಸ್ ನ ಗುರಿಯಾಗಿದೆ. ಹುಟ್ಟಿನ ಆಧಾರದಲ್ಲಿ ಜನರನ್ನು ಮೇಲು ಮತ್ತು ಕೀಳು ಎಂದು ಕಾಣುವ 2000 ವರ್ಷಗಳಷ್ಟು ಹಳೆಯ ಸನಾತನ ಧರ್ಮದ ಪದ್ಧತಿಯ ಸಮಾಜವನ್ನು ಮತ್ತೆ ನಿರ್ಮಿಸಲು ಅವರು ಬಯಸುತ್ತಾರೆ. ಸಾಮಾಜಿಕ ನ್ಯಾಯವು ಸನಾತನದ ಇಂತಹ ಪದ್ಧತಿಯನ್ನು ನಾಶಮಾಡುತ್ತದೆ. ಇದೆಲ್ಲವೂ ಅವರಿಗೆ ಪ್ರತಿಕೂಲವಾಗಿ ಕಾಣುತ್ತದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಬಿಜೆಪಿ ಆಡಳಿತ ಇರುವ ರಾಜ್ಯ ಸರ್ಕಾರಗಳ ಮೂಲಕ ಆರ್‌ಎಸ್‌ಎಸ್ ತನ್ನ ದೀರ್ಘಾವಧಿಯ ಅಜೆಂಡಾಗಳನ್ನು ಜಾರಿಗೆ ತರಲು ಹೊರಟಿದೆ.

2015ರ ಸೆಪ್ಟೆಂಬರ್ ನಲ್ಲಿ ಬಿಹಾರ ಚುನಾವಣೆಗೆ ವಾರಗಳ ಮೊದಲು, ಆರ್‌ಎಸ್‌ಎಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರು ಸಂಘದ ಮುಖವಾಣಿ ಆರ್ಗನೈಸರ್ ಮತ್ತು ಪಾಂಚಜನ್ಯಕ್ಕೆ ನೀಡಿದ ಸಂದರ್ಶನದಲ್ಲಿ, ಮೀಸಲಾತಿ ನೀತಿಯ "ಸಾಮಾಜಿಕ ವಿಮರ್ಶೆ" ಗಾಗಿ ಕರೆ ನೀಡಿದ್ದರು. ಈಗ ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗೆ ವಾರಗಳ ಮೊದಲು ಮುಸ್ಲಿಂ ಮೀಸಲಾತಿ ವಿಷಯದಲ್ಲಿ ಕೈಹಾಕಿದ್ದೇಕೆ ಎಂಬುದನ್ನು ಇದರಿಂದ ಅರ್ಥಮಾಡಿಕೊಳ್ಳಬೇಕು.

ಮೋಹನ್ ಭಾಗವತ್ ಅವರು ಹಲವಾರು ಬಾರಿ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. 2019ರ ಆಗಸ್ಟ್ 19 ರಲ್ಲಿ ನೀಡಿದ ಒಂದು ಹೇಳಿಕೆಯಲ್ಲಿ "ಎಸ್‌ಸಿ, ಎಸ್‌ಟಿ, ಒಬಿಸಿಗಳಿಗೆ ನೀಡಿರುವ ಮೀಸಲಾತಿಗೆ ಸಂಬಂಧಿಸಿದಂತೆ ಮುಕ್ತ ಹೃದಯದ ಚರ್ಚೆ ನಡೆಯಬೇಕು" ಎಂದು ಹೇಳಿದ್ದರು.

ಆರ್‌ಎಸ್‌ಎಸ್ ನ ಮುಸ್ಲಿಂ ದ್ವೇಷ

2025ಕ್ಕೆ ತನ್ನ ಶತಮಾನೋತ್ಸವವನ್ನು ಆಚರಿಸಿಕೊಳ್ಳಲಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವು, ಮುಸ್ಲಿಂ ದ್ವೇಷವನ್ನು ದೇಶದಾದ್ಯಂತ ವ್ಯಾಪಕವಾಗಿ ಬೆಳೆಸುವಲ್ಲಿ ಯಶಸ್ವಿಯಾಗಿದೆ. ಸಮಾನತೆಯನ್ನು ಸಾರುವ ಕಮ್ಯುನಿಸ್ಟರನ್ನು ಕಂಡರೂ ಅದಕ್ಕೆ ಆಗುವುದಿಲ್ಲ. ಹಾಗಾಗಿ 'ಕಮ್ಯುನಿಸ್ಟರೂ, ಮುಸಲ್ಮಾನರೂ ಸೇರಿ ಭಾರತವನ್ನು ಇಸ್ಲಾಮಿಕ್ ದೇಶ ಮಾಡುತ್ತಾರೆ ಎಂಬ ಕತೆಯನ್ನು ಅದು ಹೇಳುತ್ತಲೇ ಇದೆ. ಇದರಿಂದ ಪಾರಾಗಲು ನಾವ್ಯಾರೂ ಬದುಕಿರದ ಇತಿಹಾಸದ ಯಾವುದೋ ಒಂದು ಅಮೂರ್ತ ಕಾಲಘಟ್ಟಕ್ಕೆ ಭಾರತೀಯರು ಹೋಗಬೇಕೆಂದು ಅದು ಬಯಸುತ್ತದೆ. ಇತಿಹಾಸ ಮತ್ತು ಕಾಲಾತೀತ ಪುರಾಣಗಳ ಬಲೆಯಲ್ಲಿ ಸಿಲುಕಿಕೊಂಡ ಅದಕ್ಕೆ ಕಳೆದ ಸುಮಾರು 1500 ವರ್ಷಗಳಿಂದ ನಮ್ಮ ಜೊತೆಗೇ ಬದುಕುತ್ತಿರುವ ಮುಸಲ್ಮಾನರನ್ನು ಅರ್ಥಮಾಡಿಕೊಳ್ಳಲು ಅಸಾಧ್ಯವಾಗಿರುವುದು ಅದರ ಬೌದ್ಧಿಕ ಮಿತಿಗಳನ್ನು ಹೇಳುತ್ತದೆ. ಯಾರಾದರೂ ಗೊತ್ತಿದ್ದವರು ಇವುಗಳ ಬಗೆಗೆ ಮಾತಾಡಿದರೆ ಅದು ತನ್ನ ತೀವ್ರ ಅಸಹನೆಯನ್ನು ವ್ಯಕ್ತಪಡಿಸುತ್ತದೆ, ಮಾತ್ರವಲ್ಲ ಅಂತಹ ಧ್ವನಿಗಳನ್ನು ಮಟ್ಟ ಹಾಕಲೂ ಪ್ರಯತ್ನಿಸುತ್ತದೆ. ಸಾರ್ವಜನಿಕರ ಜೊತೆಗೆ ಅದಕ್ಕೆ ಸಂವಾದ ಇಲ್ಲದಿರುವುದರಿಂದ ಅದಕ್ಕೆ ತನ್ನ ಸದಸ್ಯರ ತಿಳಿವಳಿಕೆಗಳನ್ನು ಹೆಚ್ಚಿಸಲು ಸಾಧ್ಯವಾಗಲಿಲ್ಲ. ತನ್ನದೇ ಆದ ಕೆಲವು ನಿಗದಿತ ಕ್ರಿಯಾ ಯೋಜನೆಗಳೊಂದಿಗೆ ಕೆಲಸ ಮಾಡುವ ಸಂಘ ಪರಿವಾರವು ಅಂತಿಮವಾಗಿ ಬ್ರಾಹ್ಮಣ್ಯ ಕೇಂದ್ರಿತವಾದ ಒಂದು ಸಮಾಜವನ್ನು ಕಲ್ಪಿಸಿಕೊಂಡು ಕೆಲಸ ಮಾಡುತ್ತದೆ. ಕಳೆದ ನೂರು ವರ್ಷಗಳಲ್ಲಿ ಅದು ಬ್ರಾಹ್ಮಣ್ಯದ ಪರಮಾಧಿಕಾರವನ್ನು ಎಂದೂ ಪ್ರಶ್ನಿಸಿಲ್ಲ. ಪ್ರಾಚೀನ ಭಾರತದ ವೈದಿಕ ಕೇಂದ್ರಿತ ಮೌಲ್ಯಗಳನ್ನು ಆಧುನಿಕತೆಗೆ ಒಂದು ಪರಿಹಾರವೆಂದೂ ಅದು ಮುಗ್ಧವಾಗಿ ನಂಬಿಕೊಂಡು ಕೆಲಸ ಮಾಡುತ್ತಿದೆ.

ರಾಜ್ಯದಲ್ಲಿ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ

ಕರ್ನಾಟಕ ಸರ್ಕಾರ ಜಸ್ಟೀಸ್ ಚಿನ್ನಪ್ಪರೆಡ್ಡಿ ಆಯೋಗವನ್ನು ರಚನೆ ಮಾಡಿತ್ತು. ಈ ಆಯೋಗ ರಾಜ್ಯದ ಮುಸ್ಲಿಂ ಸಮುದಾಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, ಇದನ್ನು ಗಂಭೀರವಾಗಿ ಪರಿಗಣಿಸಿ, ಅವರಿಗೆ ಪ್ರತ್ಯೇಕವಾದ ಮೀಸಲಾತಿಯ ಅವಶ್ಯಕತೆ ಇದೆ ಎಂದು ಹೇಳಿತು ಮತ್ತು ಮುಸ್ಲಿಮರನ್ನು ಅತಿ ಹಿಂದುಳಿದ ವರ್ಗದಲ್ಲಿ ಸೇರಿಸಿದ್ದರು. ಇದನ್ನು ಸರ್ಕಾರವೂ ಒಪ್ಪಿದೆ. ಕರ್ನಾಟಕ ರಾಜ್ಯ ಸರ್ಕಾರ 2ಬಿ ಎಂಬ ಒಂದು ಪ್ರವರ್ಗವನ್ನು ಸೃಷ್ಟಿಸಿ, ಅವರಿಗೆ ಶೇ. 4ರಷ್ಟು ಮೀಸಲಾತಿ ನಿಗದಿ ಮಾಡಿತು. ಈ ನಾಲ್ಕು ಶೇಕಡಾ ಮೀಸಲಾತಿಯನ್ನು ಇಲ್ಲಿಯವರೆಗೆ ಮುಸ್ಲಿಂ ಅಲ್ಪಸಂಖ್ಯಾತರು ಅನುಭವಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನಾವು ಶೇ. 14 ರಷ್ಟಿದ್ದೇವೆ, ನಮಗೆ ಶೇ. 4 ಮೀಸಲಾತಿ ಸಾಕಾಗುವುದಿಲ್ಲ, ನಮಗೆ ಹೆಚ್ಚಿನ ಮೀಸಲಾತಿ ಕೊಡಿ ಎಂದು ಈಗ ಮುಸಲ್ಮಾನರು ಕೇಳುತ್ತಿದ್ದಾರೆ. ರಾಜ್ಯ ಸರ್ಕಾರ ಮೀಸಲಾತಿ ಪ್ರಮಾಣವನ್ನು ಹೆಚ್ಚು ಕೊಡಬಹುದೋ ಬೇಡವೋ ಎಂಬುದನ್ನು ಪರಿಶೀಲನೆ ಮಾಡಬಹುದಿತ್ತು. ಅದನ್ನು ಬಿಟ್ಟು 2ಬಿ ಪ್ರವರ್ಗದಿಂದ ಕಿತ್ತುಹಾಕಿ, ಶೇ. 4 ಮೀಸಲಾತಿಯನ್ನು ಕಿತ್ತುಕೊಂಡಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಮೂಡುತ್ತದೆ. ಇದು ನ್ಯಾಯಸಮ್ಮತವೂ ಅಲ್ಲ. ಸಂವಿಧಾನತ್ಮಕವಾಗಿಯೂ ಸರಿಯಾದ ನಿರ್ಧಾರವಲ್ಲ.

EWS ಜೊತೆ ಸೇರಿಸಿರುವುದು ಅವೈಜ್ಞಾನಿಕ

ಮುಸ್ಲಿಮರಿಗೆ 2(ಬಿ) ಪ್ರವರ್ಗದಡಿ ನೀಡಿದ್ದ ಶೇ.4 ಮೀಸಲಾತಿಯನ್ನು ರದ್ದು ಮಾಡಿ, ಇವರನ್ನು ಸಾಮಾನ್ಯ ವರ್ಗದಲ್ಲಿರುವ ಮೇಲ್ಜಾತಿಯವರ ಜೊತೆ

ಪುಟ 10 ಕ್ಕೆ

ಆಂಧ್ರದಲ್ಲಿ ಮುಸ್ಲಿಂ ಮೀಸಲಾತಿ ರದ್ದಾಗಿದೆಯೇ?

"ಆಂಧ್ರದಲ್ಲಿ ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಕೊಟ್ಟ ಮೀಸಲಾತಿಯನ್ನು ಆಂಧ್ರದ ಹೈಕೋರ್ಟ್ ರದ್ದು ಮಾಡಿದೆ . ಆದ್ದರಿಂದ ನಾವು ಕರ್ನಾಟಕದಲ್ಲಿ ಮುಸ್ಲಿಮರಿಗೆ ನೀಡುತ್ತಿದ್ದ ಮೀಸಲಾತಿಯನ್ನು ರದ್ದು ಮಾಡಿದ್ದೇವೆ" ಎಂದು ಬಿಜೆಪಿ ಸರ್ಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿದೆ. ಕರ್ನಾಟದಲ್ಲಿ ಮುಸ್ಲಿಮರಿಗೆ ಕೊಡುತ್ತಿದ್ದ ಮೀಸಲಾತಿ ಧರ್ಮದ ಆಧಾರದಲ್ಲಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಆಧರಿಸಿ ನೀಡಲಾಗುತ್ತಿದೆ.

ಆದರೆ ಆಂಧ್ರದಲ್ಲಿ ಮುಸ್ಲಿಮರ ಮೀಸಲಾತಿ ರದ್ದಾಗಿದೆಯೇ? ಆಂಧ್ರದಲ್ಲಿ ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲಾಗುತ್ತಿತ್ತೇ? ಈ ಎರಡೂ ವಿಷಯಗಳ ಬಗ್ಗೆಯೂ ಬೊಮ್ಮಾಯಿ ಸರ್ಕಾರ ಕರ್ನಾಟಕದ ಜನರಿಗೆ ಸುಳ್ಳು ಹೇಳುತ್ತಿದೆ. 2004ರಲ್ಲಿ ಆಂಧ್ರ ಸರ್ಕಾರ ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಶೇ.5 ರಷ್ಟು ಮೀಸಲಾತಿಯನ್ನು ಕಲ್ಪಿಸಿ ಆದೇಶ ಹೊರಡಿಸಿತ್ತು. ಅದನ್ನು (ಟಿ. ಮುರಳೀಧರ ರಾವ್ ವರ್ಸಸ್ ಆಂಧ್ರ ಸರ್ಕಾರ ಪ್ರಕರಣದಲ್ಲಿ) ಹೈಕೋರ್ಟ್ ರದ್ದು ಮಾಡಿತ್ತು.

ಆದರೆ ಅದಕ್ಕೆ ಕಾರಣ:

ಈ ಆದೇಶವನ್ನು ಮಾಡುವಾಗ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಅಭಿಪ್ರಾಯ ಪಡೆದಿಲ್ಲ ಮತ್ತು ಒಟ್ಟಾರೆ ಮೀಸಲಾತಿ ಪ್ರಮಾಣ ಶೇ. 50 ರ ಮಿತಿಯನ್ನು ಮೀರುತ್ತದೆ ಎಂಬುದು. ಧಾರ್ಮಿಕ ಆಧಾರದ ಮೀಸಲಾತಿ ಸಲ್ಲದು ಎಂಬ ಕಾರಣಕ್ಕಾಗಿ ಅಲ್ಲ.

ಆ ನಂತರ 2005 ರಲ್ಲಿ ಆಂಧ್ರ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಕರ್ನಾಟಕದಂತೆ ಇಡೀ ಮುಸ್ಲಿಮರನ್ನು ಹಿಂದುಳಿದ ವರ್ಗಗಳಾಗಿ ಪರಿಗಣಿಸಿ, ಒಬಿಸಿ ಮೀಸಲಾತಿಯ ಭಾಗವಾಗಿ ಮತ್ತು ಅದರೊಳಗೆ ಶೇ. 5 ರಷ್ಟು ಮೀಸಲಾತಿಯನ್ನು ಕಲ್ಪಿಸಿತು. ಆಂಧ್ರಪ್ರದೇಶ ಹೈಕೋರ್ಟ್ (ಅರ್ಚನಾ ರೆಡ್ಡಿ ವರ್ಸಸ್ ಆಂಧ್ರ ಪ್ರದೇಶ ಸರ್ಕಾರ ಪ್ರಕರಣದಲ್ಲಿ) ಇಡೀ ಮುಸ್ಲಿಂ ಸಮುದಾಯ ಹಿಂದುಳಿದ ವರ್ಗ ಎಂದು ಸರಿಯಾಗಿ ಸಾಬೀತಾಗಿಲ್ಲ ಎಂಬ ಕಾರಣಕ್ಕೆ ಇದನ್ನು ರದ್ದು ಮಾಡಿತು. ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ಕೊಟ್ಟಿದ್ದಾರೆ ಎಂಬ ಕಾರಣದಿಂದಲ್ಲ.

ನಂತರ ಆಂಧ್ರ ಸರ್ಕಾರ ಮುಸ್ಲಿಂರ ಶೈಕ್ಷಣಿಕ ಹಾಗೂ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಿ ಶಿಫಾರಸ್ಸು ಮಾಡಲು ಪಿ.ಎಸ್. ಕೃಷ್ಣನ್ ಅವರ ಸಮಿತಿಯನ್ನು ನೇಮಿಸಿತು. ಆ ಸಮಿತಿಯು ವಿಸ್ತೃತ ಮತ್ತು ವೈಜ್ಞಾನಿಕ ಅಧ್ಯಯನ ನಡೆಸಿ, ಮುಸ್ಲಿಮರಲ್ಲಿನ 14 ಪ್ರಮುಖ ಪ್ರವರ್ಗಗಳನ್ನು ಹಿಂದುಳಿದ ವರ್ಗಗಳಾನ್ನಾಗಿ ಪರಿಗಣಿಸಿ, ಒಬಿಸಿ ಮೀಸಲಾತಿ ಸಮುದಾಯದೊಳಗೆ ವಿಶೇಷ ಪ್ರವರ್ಗ 'ಇ" ಕಲ್ಪಿಸಿ ಶೇ. 4 ರಷ್ಟು ಮೀಸಲಾತಿ ನೀಡಲು ಶಿಫಾರಸ್ಸು ಮಾಡಿತು. ಅದನ್ನು ಹಿಂದುಳಿದ ವರ್ಗದ ಆಯೋಗವೂ ಅನುಮೋದಿಸಿತು. ಇದನ್ನು ಆಂಧ್ರದ ಶಾಸನ ಸಭೆ ಹೆಚ್ಚೂ ಕಡಿಮೆ ಸರ್ವಸಮ್ಮತಿಯಿಂದ ಅನುಮೋದಿಸಿ ಕಾಯಿದೆ ಮಾಡಿತು.

ಈ ಕಾಯಿದೆಯನ್ನು ಹಲವರು ಆಂಧ್ರ ಹೈಕೋರ್ಟಿನಲ್ಲಿ ಪ್ರಶ್ನಿಸಿದರು. 2010ರ ಫೆಬ್ರವರಿಯಲ್ಲಿ ಹೈದರಾಬಾದ್ ಹೈಕೋರ್ಟಿನ ಪೂರ್ಣ ಪೀಠ 5–2 ಬಹುಮತದ ಮೇಲೆ ಈ ಆದೇಶವನ್ನು ರದ್ದು ಮಾಡಿತ್ತು. **ಅದಕ್ಕೆ ಹೈಕೋರ್ಟ್ ನೀಡಿದ ಕಾರಣ:**



ಸರ್ಕಾರ ಕೆಲವು ಪ್ರಕ್ರಿಯೆಗಳನ್ನು ಅನುಸರಿಸಿಲ್ಲ ಮತ್ತು ಮುಸ್ಲಿಮರಿಗೆ ಕೊಡುವ ಮೀಸಲಾತಿಯಿಂದ ಮತಾಂತರ ಹೆಚ್ಚಬಹುದು ಎಂಬ ಆತಂಕ. ಆದರೆ ಹೈಕೋರ್ಟಿನ ಈ ಆದೇಶಕ್ಕೆ 2010 ರ ಮಾರ್ಚ್ 25 ರಂದೇ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠ ತಡೆಯಾಜ್ಞೆ ನೀಡಿತು. ಅಷ್ಟು ಮಾತ್ರವಲ್ಲ, ಆಂಧ್ರ ಸರ್ಕಾರವು 14 ಮುಸ್ಲಿಂ ಪ್ರವರ್ಗಗಳಿಗೆ ಸಮುದಾಯಗಳಿಗೆ ನೀಡಲಾಗುತ್ತಿದ್ದ ಮೀಸಲಾತಿಯನ್ನು ಮುಂದುವರೆಸಲು ಆದೇಶ ನೀಡಿತು. ಈ ವಿಷಯದಲ್ಲಿ ಹಲವಾರು ಸಾಂವಿಧಾನಿಕ ಅಂಶಗಳಿರುವುದರಿಂದ ಐವರು ಸದಸ್ಯರ ಸಾಂವಿಧಾನಿಕ ಪೀಠಕ್ಕೆ ಪ್ರಕರಣವನ್ನು ವರ್ಗಾಯಿಸಿತು.

EWS ಮೀಸಲಾತಿಯ ವಿಚಾರಣೆಯನ್ನು ಕೈಗೆತ್ತಿಕೊಂಡ ಸಾಂವಿಧಾನಿಕ ಪೀಠ ಕ್ಕೆ ಮುಸ್ಲಿಂ ಮೀಸಲಾತಿಯ ಪ್ರಕರಣವನ್ನು ವರ್ಗಾಯಿಸಲಾಯಿತು. ಈ ಸಾಂವಿಧಾನಿಕ ಪೀಠವು ಮುಸ್ಲಿಂ ಮೀಸಲಾತಿಯ ವಿಷಯದ ಬಗ್ಗೆ ಕೊಟ್ಟ ಕೊನೆಯ ಬಾರಿಗೆ ಅಹವಾಲನ್ನು ಆಲಿಸಿದ್ದು 2022ರ ಸೆಪ್ಟೆಂಬರ್ 6 ರಂದು. ಆಗಲೂ ಅದು ತ್ರಿಸದಸ್ಯ ಪೀಠದ ಆದೇಶವನ್ನು ಅರ್ಥಾತ್ ಮುಸ್ಲಿಮರಿಗೆ ಕೊಡುತ್ತಿದ್ದ ಮೀಸಲಾತಿಯನ್ನು ಮುಂದುವರೆಸುವ ಆದೇಶವನ್ನು ಚಾಲ್ತಿಯಲ್ಲಿಟ್ಟು ವಿಚಾರಣೆಯನ್ನು ಅನಿರ್ದಿಷ್ಟ ಕಾಲ ಮುಂದೂಡಿದೆ. (ಆಂಧ್ರದ ಈ ಮಾಹಿತಿ ಶಿವಸುಂದರ್ ಅವರ ಲೇಖನದಿಂದ ಪಡೆಯಲಾಗಿದೆ)





ಬಾಗೇಪಲ್ಲಿ: ಶಾಸನಸಭೆಯಲ್ಲಿ ಜನರ ಪರ ಧ್ವನಿ ಎತ್ತಲು ಸಿಪಿಐ(ಎಂ) ಅಭ್ಯರ್ಥಿಯನ್ನು ಬೆಂಬಲಿಸಿ: ನಾಯಕರ ಕರೆ

ರಾಜ್ಯದ ಹಾಗೂ ಕ್ಷೇತ್ರದ ಸಮಾಜದ ಸ್ವಾಸ್ಥ್ಯದ ಉಳಿವಿಗಾಗಿ ಹಾಗೂ ರೈತರು, ಕೃಷಿ ಕೂಲಿಕಾರ್ಮಿಕರ, ಎಲ್ಲಾ ವರ್ಗಗಳ ಜನರ ಸಮಸ್ಯೆಗಳ ಪರ ಸದಾ ಧ್ವನಿಯಾಗಿರಿಸಲು ಬಾಗೇಪಲ್ಲಿ ಕ್ಷೇತ್ರದ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿ ಪೊಲಿಟ್ ಬ್ಯೂರೊ ಸದಸ್ಯ ಎಂ.ಎ.ಬೇಬಿ ಕರೆ ನೀಡಿದರು.

ಪಟ್ಟಣದ ಡಾ.ಎಚ್.ಎನ್.ವೃತ್ತದ ಬಳಿ ಬುಧವಾರ ಸಿಪಿಎಂ ಪಕ್ಷದ ಪ್ರಮುಖ ಕಾರ್ಯಕರ್ತರ ರಾಜಕೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

'ಕ್ಷೇತ್ರದ ಸಮಗ್ರ ಬೆಳವಣಿಗೆ ಸಿಪಿಎಂ ನ ಶಾಸಕರಿಂದ ಮಾತ್ರ ಸಾಧ್ಯ ಆಗಿದೆ. ಕೊರೊನಾ ಅವಧಿಯಲ್ಲಿ ಜನಸಾಮಾನ್ಯರಿಗೆ ಉಚಿತ ಕೋವಿಡ್ ಸೋಂಕಿನ ತಡೆಗೆ ಜಾಗೃತಿ ಹಾಗೂ ತರಬೇತಿ, ಚಿಕಿತ್ಸೆ ನೀಡಿ ಅನೇಕ ಪ್ರಾಣಗಳನ್ನು ಉಳಿಸಿರುವ ಡಾ.ಅನಿಲ್ ಕುಮಾರ್ ರವರ ಜನಪರ ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ವೈದ್ಯಕೀಯ ಸೇವೆಯ ಜೊತೆಗೆ ಜನರೊಂದಿಗೆ ಶ್ರಮಿಸುತ್ತಿರುವ ಪಕ್ಷದ ಅಭ್ಯರ್ಥಿ ಡಾ.ಎ.ಅನಿಲ್‌ಕುಮಾರ್ ರವರನ್ನು ಗೆಲ್ಲಿಸಿ, ಶಾಸಕರಾಗಿ ಮಾಡಬೇಕು. ಸಿಪಿಐ(ಎಂ) ಶಾಸಕರು ಈ ಕ್ಷೇತ್ರದ ಅಭಿವೃದ್ಧಿ, ಜನರ ಪ್ರಶ್ನೆಗಳ ಪರಿಹಾರದ ಜೊತೆಗೆ ಕ್ಷೇತ್ರ ಅಲ್ಲದೇ, ಇಡೀ ರಾಜ್ಯದ ಸಮಸ್ಯೆಗಳ ಬಗ್ಗೆ ವಿಧಾನಸೌಧದಲ್ಲಿ ಮಾತನಾಡಲು ಅವಕಾಶವನ್ನು ಮಾಡಬೇಕು' ಎಂದು ತಿಳಿಸಿದರು.



"ದೇಶದಲ್ಲಿ ಜನತೆಯನ್ನು ವಿಭಜಿಸಲು ಸತತ ಪ್ರಯತ್ನಗಳು ನಡೆದಿವೆ. ಶರಣರು, ಸಂತರು, ಧಾರ್ಮಿಕ ಹಿರಿಯರು ಮಾನವರನ್ನೆಲ್ಲಾ ಒಂದು ಎಂದು ಹೇಳಿದರು. ಒಗ್ಗಟ್ಟಿನಿಂದ ಬಾಳಲು ತಿಳಿಸಿದರು.ಕರ್ನಾಟಕದ ಸೌಹಾರ್ದ ಪರಂಪರೆ ರಕ್ಷಿಸಬೇಕು. ಜನರನ್ನು ಒಡೆಯುವ ರಾಜಕೀಯವನ್ನು ಈ ಕೆಂಬಾವುಟ ಸಹಿಸದು. ಸೌಹಾರ್ದತೆಯನ್ನು ಕಾಪಾಡಲು ಸದಾ ಸಿದ್ಧ"ಎಂದರು. ಕೋಮುವಾದಿಗಳನ್ನು ಎದುರಿಸಲು ಕಾಂಗ್ರೆಸ್, ಜನತಾದಳಗಳು ವಿಫಲವಾಗಿವೆ. ಹಾಗಾಗಿ ಪಕ್ಷದ ಅಭ್ಯರ್ಥಿ ಅನಿಲ್ ಕುಮಾರ್ ರವರನ್ನು ಗೆಲ್ಲಿಸಿ" ಎಂದು ಮನವಿ ಮಾಡಿದರು.

ಸಿಪಿಎಂ ಪಕ್ಷದ ಬ್ಯೂಲಿಟ್ ಬ್ಯೂರೋ ಸದಸ್ಯ ಬಿ.ವಿ.ರಾಘವುಲು ಮಾತನಾಡಿ "ಕಳೆದ 10 ವರ್ಷಗಳಿಂದ ಕ್ಷೇತ್ರದ ಮತದಾರರು ಸಿಪಿಎಂ ಶಾಸಕರನ್ನು ಆಯ್ಕೆ ಮಾಡಿಲ್ಲ. ಇದರಿಂದ ಕ್ಷೇತ್ರದಲ್ಲಿ ಶಾಶ್ವತ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಕಳೆದ ಎರಡು ಬಾರಿಯ ಅವಧಿಯಲ್ಲಿ ಸಿಪಿಎಂ ಶಾಸಕರನ್ನು ಆಯ್ಕೆ ಮಾಡಿದಾಗ, ಕ್ಷೇತ್ರದಲ್ಲಿ ಶಾಶ್ವತ ಯೋಜನೆಗಳು ಆಗಿವೆ. ಈ ಬಾರಿ ಮತದಾರರು ಸೀರೆ, ಪಂಚೆ, ಹಣ, ಹೆಂಡ, ಆಸೆ, ಆಮಿಷಗಳಿಗೆ ಬಲಿಯಾದರೆ, ಮುಂದಿನ 5 ವರ್ಷಗಳು ಕಷ್ಟಗಳು ತಪ್ಪಿದ್ದಲ್ಲ. ಇದರಿಂದ ಮತದಾರರು ಯೋಚಿಸಿ ಮತ ಚಲಾಯಿಸಿ. ಜನಸಾಮಾನ್ಯರ, ರೈತ, ಕೂಲಿಕಾರ್ಮಿಕರ, ಮಹಿಳೆ, ವಿದ್ಯಾರ್ಥಿ-ಯುವಜನ, ದಲಿತ ದಮನಿತರ ಪರ ಇರುವ ಸಿಪಿಎಂ ಅಭ್ಯರ್ಥಿ ಡಾ.ಅನಿಲ್ ಕುಮಾರ್ ರವರನ್ನು ಆಯ್ಕೆ ಮಾಡಿದರೆ, ಸಿಪಿಎಂ ಪಕ್ಷವು ಕ್ಷೇತ್ರದ ಅಭಿವೃದ್ಧಿ ಮಾಡಲಿದೆ" ಎಂದು ತಿಳಿಸಿದರು.

"ಸಿಪಿಐಎಂ ವಿರುದ್ಧ ಕೆಲವರು ಹಣ ಆಮಿಷ ಒಡ್ಡುತ್ತಿದ್ದಾರೆ. ಕೆಲವರು ಪಕ್ಷದ ಹಿತ ಕಡೆಗಣಿಸಿ ಹೊರ ಹೋಗಿದ್ದಾರೆ. ಸಿಪಿಐಎಂ ಸರಿಯಿಲ್ಲ ಎನ್ನುತ್ತಿದ್ದಾರೆ. ಅಂದರೆ ರೈತರಿಗಾಗಿ, ಕೂಲಿಕಾರರಿಗೆ, ದಲಿತರು, ಅಲ್ಪಸಂಖ್ಯಾತರಿಗಾಗಿ ಈ ಪಕ್ಷ ಹೋರಾಡುತ್ತಿರುವುದು ಸರಿ ಅಲ್ಲ ಎಂದು ಹೇಳುತ್ತಾರೋ? ಅವರ ನಿಜ ಉದ್ದೇಶ ಏನು? ಎಲ್ಲಿ ಹೋಗಲಿದ್ದಾರೆ? ಏನು ಮಾಡಲಿದ್ದಾರೆ? ಕಾಂಗ್ರೆಸ್, ಬಿಜೆಪಿ ಬಾಗಿಲು ತಟ್ಟುವರೋ? ಅಂತಹ ಅವಕಾಶವಾದಿಗಳಿಗೆ, ದ್ರೋಹಿಗಳಿಗೆ ಅವಕಾಶ ನೀಡಕೂಡದು. ಸಿಪಿಐ(ಎಂ) ಪಕ್ಷವನ್ನು ಗೆಲ್ಲಿಸಲು ಶ್ರಮಿಸಿ" ಎಂದು ರಾಘವಲು ಕರೆ ನೀಡಿದರು.

ಸಿಪಿಎಂ ಪಕ್ಷದ ಅಭ್ಯರ್ಥಿ ಡಾ.ಎ.ಅನಿಲ್ ಕುಮಾರ್ ಮಾತನಾಡಿ, "ರಾಜ್ಯ ಚುನಾವಣಾ ಆಯೋಗದಿಂದ ಬುಧವಾರದಿಂದ ಚುನಾವಣಾ ದಿನಾಂಕ ಜಾರಿ ಮಾಡಿ ನೀತಿ ಸಂಹಿತೆ ಜಾರಿಗೆ ತಂದಿದೆ. ಕ್ಷೇತ್ರದ ಪ್ರಗತಿ, ಜನರ ಹಿತ ರಕ್ಷಣೆಗೆ ಸಿಪಿಎಂ ಪಕ್ಷ ಗೆಲ್ಲಬೇಕು. ಪಕ್ಷವನ್ನು ಉಳಿಸಿ ಬೆಳಿಸಲು ಕ್ಷೇತ್ರದ ಜನರು ಒಂದಾಗಿದ್ದಾರೆ. ನಾವೆಲ್ಲರೂ ಒಗ್ಗಟ್ಟಾಗಿ ಕ್ಷೇತ್ರದ ಸಮಗ್ರ ಬೆಳವಣಿಗೆಗೆ ಶ್ರಮಿಸೋಣ. ಈ ದೆಸೆಯಲ್ಲಿ ಸಿಪಿಎಂ ಪಕ್ಷವನ್ನು ಬಲಪಡಿಸಬೇಕು" ಎಂದು ಮನವಿ ಮಾಡಿದರು.

ಸಿಪಿಐ(ಎಂ)ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಪಿ.ಮುನಿವೆಂಕಟಪ್ಪ ಮಾತನಾಡಿ, ಚುನಾವಣಾ ದಿನಾಂಕ ಪ್ರಕಟಗೊಂಡ ಹಿನ್ನಲೆಯಲ್ಲಿ ಸಿಪಿಎಂ ಅಭ್ಯರ್ಥಿ ಡಾ.ಅನಿಲ್ ಕುಮಾರ್ ರವರು ನಾಮಪತ್ರ ಸಲ್ಲಿಸುವ ದಿನದಂದು ಪಕ್ಷದ ಕೇಂದ್ರ ಸಮಿತಿಯ ಪ್ರಧಾನಕಾರ್ಯದರ್ಶಿ ಸೀತಾರಾಂ ಯೆಚೂರಿರವರು ಆಗಮಿಸಲಿದ್ದಾರೆ. ಎಪ್ರಿಲ್ 15 ರಂದು ಭಾರಿ ಬಹಿರಂಗ ಸಭೆ ಆಯೋಜಿಸಲಾಗಿದೆ" ಎಂದು ಪ್ರಕಟಿಸಿದರು.

ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ನಲ್ಗೊಂಡದ ಪ್ರಜಾ ನಾಟ್ಯ ಕಲಾ ಮಂಡಲಿಯವರು ಕ್ರಾಂತಿ ಗೀತೆಗಳನ್ನು ಹಾಡಿದರು. ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು.ಬಸವರಾಜು, ಮುಖಂಡ ಕೆ.ಪ್ರಕಾಶ್, ಜಿಲ್ಲಾ ಸಮಿತಿ ಸದಸ್ಯರಾದ ಜಯರಾಮರೆಡ್ಡಿ, ಎಂ.ಎನ್.ರಘುರಾಮರೆಡ್ಡಿ, ಸಾವಿತ್ರಮ್ಮ, ಬಿಳ್ಳೂರು ನಾಗರಾಜ್, ಸಿದ್ದಗಂಗಪ್ಪ, ಬಿ.ಎನ್.ಮುನಿಕೃಷ್ಣಪ್ಪ, ನಗರ ಸಮಿತಿ ಕಾರ್ಯದರ್ಶಿ ಅಶ್ವಥ್ಥಪ್ಪ, ಜಿ.ಎನ್.ಶ್ರೀರಾಮಪ್ಪ, ದೇವಿಕುಂಟೆ ಶ್ರೀನಿವಾಸ್, ಸೋಮಶೇಖರರೆಡ್ಡಿ, ಬೈರೆಡ್ಡಿ, ಪರಗೋಡು ಶ್ರೀನಿವಾಸರೆಡ್ಡಿ, ಗೋಪಾಲಕೃಷ್ಣ, ಬಿ.ಎಚ್.ಆರೀಫ್ ಮತ್ತಿತರರು ಹಾಜರಿದ್ದರು.

ಕಾಮ್ರೇಡ್ ಪಿ.ಸುಂದರಯ್ಯ ಸ್ಮಾರಕ ಭವನದ ಮುಂಭಾಗದಿಂದ ಸಿಪಿಐ(ಎಂ)ನ ಮುಖಂಡರು, ಸಾವಿರಾರು ಕಾರ್ಯಕರ್ತರು ಸ್ಫೂರ್ತಿಯಿಂದ ಕೆಂಬಾವುಟಗಳನ್ನು ಹಿಡಿದು ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಿದರು. ಅತೀ ಅಲ್ಪ ಅವಧಿಯಲ್ಲೇ ಸಂಘಟಿಸಿದ ಈ ಸಭೆ ಅಭೂತಪೂರ್ವವಾಗಿ ಯಶಸ್ವಿಯಾಯಿತು.

ಬಾಗೇಪಲ್ಲಿ ತಾಲೂಕು ಸಮಿತಿಯ ಕಾರ್ಯದರ್ಶಿಯಾಗಿ ಎಂ.ಎನ್. ರಘುರಾಮರೆಡ್ಡಿ

ಸಿಪಿಐ(ಎಂ) ಬಾಗೇಪಲ್ಲಿ ತಾಲೂಕು ಸಮಿತಿಯ ಕಾರ್ಯದರ್ಶಿಯಾಗಿ ಎಂ.ಎನ್.ರಘುರಾಮರೆಡ್ಡಿ ಇವರನ್ನು ತಾಲೂಕ್ ಸಮಿತಿಯು ಆಯ್ಕೆ ಮಾಡಿದೆ.



ರೇಗಾದ ಕತ್ತು ಹಿಸುಕದಿರಿ

ಗ್ರಾಮೀಣ ಉದ್ಯೋಗಕ್ಕೆ ಮೋದಿ ಸರ್ಕಾರ ಕುತ್ತು

ಪ್ರಕಾಶ್ ಕಾರತ್

ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ಎಂಜಿಎನ್‌ಆರ್‌ಜಿಎಸ್; ಸಂಕ್ಷಿಪ್ತವಾಗಿ ರೇಗಾ) ಕತ್ತು ಹಿಸುಕಲು ಪ್ರಯತ್ನಿಸುತ್ತಲೇ ಇದೆ. ಖಾಸಗಿ ವಲಯದ ಕೈ ಮೇಲಾಗಲು ಮತ್ತು ಆರ್ಥಿಕತೆಯನ್ನು ಹೆಚ್ಚು 'ಪರಿಣಾಮಕಾರಿ' ಹಾಗೂ 'ಉತ್ಪಾದಕಗೊಳಿಸಲು' ಸಾರ್ವಜನಿಕ ವೆಚ್ಚವನ್ನು ಕಡಿತ ಮಾಡಬೇಕೆಂಬ ಕುಖ್ಯಾತವಾದ ನವಉದಾರವಾದಿ ತತ್ವಾಂಧತೆಯ ಬೆನ್ನು ಬಿದ್ದಿರುವ ಸರ್ಕಾರ, ರೇಗಾ ಸಹಿತ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಜೆಟ್ ಅನುದಾನಗಳನ್ನು ಕಾಲಕಾಲಕ್ಕೆ ಕಡಿತ ಮಾಡಿರುವುದು ಮಾತ್ರವೇ ಅಲ್ಲದೆ, ಯೋಜನೆಗಳ ಬಲ ಕುಂದಿಸಲು ಇನ್ನೂ ಇತರ ಅಡ್ಡ ಮಾರ್ಗಗಳನ್ನು ಹಿಡಿದಿದೆ.

ರೇಗಾ ವಿಚಾರಕ್ಕೆ ಬರುವುದಾದರೆ, 2022-23ನೇ ಸಾಲಿಗೆ 73,000 ಕೋಟಿ ರೂಪಾಯಿ ಬಜೆಟ್ ಅನುದಾನ ನಿಗದಿಪಡಿಸಲಾಗಿತ್ತು. ಆದರೆ 89,400 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ ಎಂದು ಅಂದಾಜಿಸಲಾಗಿದೆ. ಇದು ಹಿಂದಿನ ವರ್ಷ 2021-22ರಲ್ಲಿ ಮಾಡಲಾದ 98,467.85 ಕೋಟಿ ರೂಪಾಯಿಗಿಂತ ಶೇಕಡ 10ರಷ್ಟು ಕಡಿಮೆಯಾಗಿದೆ. ಆದರೆ, 89,400 ಕೋಟಿ ರೂಪಾಯಿ ಪರಿಷ್ಕೃತ ಅಂದಾಜಿನಲ್ಲಿ 2023-24ನೇ ಬಜೆಟ್ ಅನುದಾನದಲ್ಲಿ ಶೇಕಡ 33ರಷ್ಟು ಕಡಿತ ಮಾಡಲಾಗಿದೆ. ಸರ್ಕಾರ ಈ ಯೋಜನೆಗೆ ಮಾಡುತ್ತಿರುವ ಅನ್ಯಾಯ ಇದಷ್ಟೇ ಅಲ್ಲ. ರೇಗಾ ಕಾರ್ಮಿಕರು ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸರ್ವಿಸ್ (ಎನ್‌ಎಂಎಂಎಸ್) ಎಂಬ ಮೊಬೈಲ್ ಆ್ಯಪ್ ಮೂಲಕ ಕಡ್ಡಾಯವಾಗಿ ಹಾಜರಿ ಹಾಕಬೇಕೆಂಬ ನಿಯಮವನ್ನು ಈ ವರ್ಷ ಜನವರಿಯಲ್ಲಿ ಪರಿಚಯಿಸಿದೆ. ಇದರಿಂದಾಗಿ ದೇಶದಾದ್ಯಂತ ರೇಗಾ ಕೆಲಸದ ಸ್ಥಳಗಳಲ್ಲಿ ಅರಾಜಕತೆ ಉಂಟಾಗಿದೆ. ಸರಿಯಾದ ಇಂಟರ್‌ನೆಟ್ ಸಂಪರ್ಕ ಇಲ್ಲದಿರುವುದರಿಂದ ಕಾರ್ಮಿಕರು ತಮ್ಮ ಹಾಜರಿಯನ್ನು ದಾಖಲಿಸಲೇ ಗಂಟೆಗಟ್ಟಲೆ ಸಮಯ ಕಳೆಯಬೇಕಾಗಿದೆ. ಇದು ಅವರಿಗೆ ಸಾವು-ಬದುಕಿನ ಪ್ರಶ್ನೆಯಾಗಿದೆ. ಯಾಕೆಂದರೆ ಹಾಜರಾತಿ ನಮೂದಾಗದಿದ್ದರೆ ಆ ದಿನದ ಕೂಲಿ ನಷ್ಟವಾಗುತ್ತದೆ. ವಂಚನೆ ತಡೆಯಲು ಎಂದು ಹೇಳಿಕೊಂಡು, ಈ ರೀತಿಯ ಹೈ-ಟೆಕ್ ಕ್ರಮಗಳನ್ನು ಹೇರುವುದು ಈ ಸರಕಾರದ ಒಂದು ಹುನ್ನಾರವಾಗಿದೆ. ಪಡಿತರ (ಪಿಡಿಎಸ್) ವಿತರಣೆಗೆ, ಸರ್ಕಾರಿ ಶಾಲಾ ಶಿಕ್ಷಕ/ಶಿಕ್ಷಕಿಯರ ಹಾಜರಾತಿ ದಾಖಲಿಗೆ ಮುಂತಾದವಕ್ಕೆ ಸರ್ಕಾರ ಹಿಂದೆ ಇದೇ ರೀತಿ ಮಾಡಿತ್ತು. ಅವೆಲ್ಲವೂ ಈಗ ರೇಗಾದಲ್ಲಿ ಆಗಿರುವಂತೆ ಜನರಿಗೆ ಅರಾಜಕ ಹಾಗೂ ದುರಂತ ಪರಿಣಾಮಗಳನ್ನು ತಂದೊಡ್ಡಿತ್ತು. ಇಂಟರ್‌ನೆಟ್ ಸಂಪರ್ಕದ ಸಮಸ್ಯೆಯಲ್ಲದೆ, ಆಧಾರ್ ಮಿಸ್‌ಮ್ಯಾಚ್, ಬ್ಯಾಂಕ್ ಖಾತೆ ಮಿಸ್‌ಮ್ಯಾಚ್, ಬೆರಳಚ್ಚು ಗುರುತಿಗೆ ವಿಫಲ ಮುಂತಾದ ಇನ್ನೂ ಹಲವಾರು ದೋಷಗಳಿಂದಾಗಿ ಸಾವಿರಾರು ಜನರಿಗೆ ಪಡಿತರ ಸಿಗದೆ ಪರದಾಟ ನಡೆಸುವಂತಾಯಿತು. ಈಗ ರೇಗಾ ಕಾರ್ಮಿಕರೂ ಅದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೆಲಸಕ್ಕಾಗಿ ಎಂಜಿಎನ್‌ಆರ್‌ಇಜಿಎಸ್ ವ್ಯವಸ್ಥೆಯ ಹತ್ತಿರ ಕಾರ್ಮಿಕರು ಸುಳಿಯದಂತೆ ಮಾಡುವುದು ಇಂಥ



ಪುಟ 10 ಕ್ಕೆ

ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ನಾಶಪಡಿಸುವುದೇ..... ಪುಟ 8 ರಿಂದ

ಸೇರಿಸಿ, ಸಾಮಾನ್ಯ ವರ್ಗದಲ್ಲಿನ ಆರ್ಥಿಕವಾಗಿ ಹಿಂದುಳಿದ ವಿಭಾಗದ ಜನರಿಗೆ (EWS) ಶೇ. 10ರಷ್ಟು ಮೀಸಲಾತಿಯಲ್ಲಿ ಮುಸ್ಲಿಮರಿಗೂ ಕೊಡಲಾಗಿದೆ. ಆದರೆ, ಇದು ಕಾರ್ಯಸಾದುವಲ್ಲ. ಏಕೆಂದರೆ, ಯಾವ ಯಾವ ಜಾತಿಗಳು ಈಗಾಗಲೆ ಮೀಸಲಾತಿಯನ್ನು ಪಡೆಯುತ್ತಿವೆಯೋ, ಅವರು ಈ ಸಾಮಾನ್ಯ ವರ್ಗದಲ್ಲಿರುವ ಮೇಲ್ಜಾತಿಗಳ ಪಟ್ಟಿಗೆ ಸೇರುವುದಿಲ್ಲ. ಹಿಂದುಳಿದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಾಮಾನ್ಯ ವರ್ಗದಲ್ಲಿರುವಂತಹ ಮೇಲ್ಜಾತಿಗಳ ಪಟ್ಟಿಗೆ ಸೇರುವುದಿಲ್ಲ. ಕೇವಲ ಮೂರ್ನಾಲ್ಕು ಜಾತಿಗಳು ಆ ಪಟ್ಟಿಗೆ ಸೇರಬಹುದು. ಈಗ ಮುಸ್ಲಿಂ ಸಮುದಾಯವನ್ನು ಆ ಮೇಲ್ವರ್ಗದವರ ಜೊತೆ ಸೇರಿಸಿದ್ದಾರೆ. ಈ ರೀತಿ ಹಿಂದುಳಿದವರನ್ನು ಮೇಲ್ವರ್ಗದವರ ಜಾತಿಗೆ ಸೇರಿಸಲು ಯಾವುದೇ ವರದಿಯಿಲ್ಲ. ಯಾವುದೇ ದತ್ತಾಂಶಗಳೂ ಇಲ್ಲ. ಅಧ್ಯಯನ ನಡೆದಿಲ್ಲ. ಈ ಯಾವುದೂ ಇಲ್ಲದೆ, ಈ ರೀತಿ ಇಘಾಖ ಜೊತೆ ಸೇರಿಸಿರುವುದು ತಪ್ಪು ಮತ್ತು ಅವೈಜ್ಞಾನಿಕ.

ಜಸ್ಟಿಸ್ ರಾಜೇಂದ್ರ ಸಾಚಾರ್ ಆಯೋಗ

ಭಾರತದ ಮುಸ್ಲಿಂ ಸಮುದಾಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು, ಕೇಂದ್ರ ಸರ್ಕಾರ ನೇಮಿಸಿದ್ದ ಜಸ್ಟಿಸ್ ರಾಜೇಂದ್ರ ಸಾಚಾರ್ ಆಯೋಗ, 2012ರಲ್ಲಿ ಆಯೋಗ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಭಾರತದಲ್ಲಿ ಶೇ. 80ಕ್ಕಿಂತ ಹೆಚ್ಚು ಮುಸಲ್ಮಾನರು ಪರಿಶಿಷ್ಟ ಜಾತಿ ಜನರಿಗಿಂತ ಹೀನಾಯವಾದ ಸ್ಥಿತಿಗತಿಗಳನ್ನು ಅನುಭವಿಸುತ್ತಿದ್ದಾರೆ ಎಂದು ವರದಿ ಹೇಳಿದೆ. 2012ರ ವರದಿಯಲ್ಲಿ ಈ ರೀತಿ ಇದ್ದರೆ, ಅಲ್ಲಿಂದ ಇಲ್ಲಿಯವರೆಗೆ ಈ ಸಮುದಾಯ ಯಾವಾಗ ಏಕಾಏಕಿ ಮೇಲ್ಮಟ್ಟಕ್ಕೆ ಹೋದರು? ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಅಭಿವೃದ್ಧಿಯಾಗಿದ್ದಾರೆಯೇ? ಇದರ ಬಗ್ಗೆ ಯಾವ ಆಧಾರವೂ ಇಲ್ಲದೆ, ಅವರನ್ನು ಮೇಲ್ಜಾತಿಯವರ ಜೊತೆ ಸೇರಿಸಿರುವಂತದ್ದು ಸರಿಯಲ್ಲ. ಇದಲ್ಲದೆ, ಈ ಮೇಲ್ಜಾತಿಯವರ ಜೊತೆ ಬಡ ಮುಸಲ್ಮಾನರು ಸ್ಪರ್ಧೆ ಮಾಡಲಾಗುವುದಿಲ್ಲ. ಹೀಗಾಗಿ ಅವರು ಮೀಸಲಾತಿ ಸವಲತ್ತನ್ನು ಪಡೆಯಲು ಸಾಧ್ಯವೇ ಇಲ್ಲದಂತಾಗುತ್ತದೆ. ಜಸ್ಟಿಸ್ ನಾಗಮೋಹನ ದಾಸ್ ಅವರ ಹೇಳಿಕೆಯೊಂದು ಹೀಗಿದೆ "ಇದೊಂದು ರೀತಿ ಪರೋಕ್ಷವಾಗಿ ಮುಸ್ಲಿಂ ಅಲ್ಪಸಂಖ್ಯಾತರಿಗೆ ಮೀಸಲಾತಿಯ ಸಂಪೂರ್ಣ ನಿರಾಕರಣೆ. ಇದು ಸಂವಿಧಾನ ವಿರೋಧಿ, ಸಾಮಾಜಿಕ ನ್ಯಾಯ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಮತ್ತು ಬಡಜನರ ವಿರೋಧಿ. ನ್ಯಾಯಾಲಯದ ಮುಂದೆ ಕೂಡ ಇದನ್ನು ಪ್ರಶ್ನೆ ಮಾಡಿದರೆ ಇದನ್ನು ನ್ಯಾಯಾಲಯ ಸರ್ಕಾರದ ಈ ತೀರ್ಮಾನವನ್ನು ತಳ್ಳಿಹಾಕುತ್ತದೆ ಎಂಬ ವಿಶ್ವಾಸ ನನಗಿದೆ."

> **ಬಿಜೆಪಿಯ**
> **ಕನಸಿಗೆ ತಣ್ಣೀರೆರಚಿದ**
> **ಪ್ರಭುದ್ಧ ಜನತೆ**
>
> ಮುಸ್ಲಿಮರನ್ನು ಒಬಿಸಿ ಮೀಸಲಾತಿಯಿಂದ ಹೊರತೆಗೆದರೆ ಮುಸ್ಲೀಮರು ಪ್ರತಿಭಟನೆಗೆ ಇಳಿಯುತ್ತಾರೆ. ಸರ್ಕಾರದ ಈ ಮೀಸಲಾತಿ ಹಂಚಿಕೆಯಿಂದ ಲಾಭ ಪಡೆದ ಒಕ್ಕಲಿಗರು ಮತ್ತು ಲಿಂಗಾತರು ಮುಸಲ್ಮಾನರ ವಿರುದ್ಧ ತಿರುಗಿ ಬೀಳುತ್ತಾರೆ. ಇದು ಹಿಂದೂ ಮುಸಲ್ಮಾನರ ನಡುವಿನ ಕೋಮುಗಲಭೆಗೆ ತಿರುಗಿ, ಈಗ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಬಹುಸಂಖ್ಯಾತ ಹಿಂದೂಗಳು ಬಿಜೆಪಿಯನ್ನು ಬೆಂಬಲಿಸುತ್ತಾರೆ. ಬಾರೀ ಬಹುಮತದಿಂದ ಮತ್ತೆ ಅಧಿಕಾರಕ್ಕೆ ಬರಬಹುದು ಎಂದು ನಿರೀಕ್ಷಿಸಿದ್ದ ಸಂಘಪರಿವಾರದ ಕನಸಿಗೆ ರಾಜ್ಯದ ಪ್ರಭುದ್ಧ ಜನರು ತಣ್ಣೀರು ಎರಚಿದ್ದಾರೆ. ಇದು ಬಿಜೆಪಿಗೆ ನಿರಾಶೆ ಹುಟ್ಟಿಸಿದೆ.

ಪ್ರತಿಭಟನೆಯ ದ್ವನಿ ಎತ್ತಬೇಕು

ಜಸ್ಟೀಸ್ ನಾಗಮೋಹನ ದಾಸ್ ಅವರು ಮುಂದುವರಿದು ಹೀಗೆ ಹೇಳುತ್ತಾರೆ "ಇದನ್ನು ನಾವು ಸ್ವಾಗತಿಸಲು ಸಾಧ್ಯವಿಲ್ಲ. ಮುಸ್ಲಿಮರು ಇದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬೇಕು. ಮತ್ತೊಂದು ಇಡೀ ಮುಸ್ಲಿಂ ಸಮುದಾಯ ಒಟ್ಟಾಗಿ, ಸಂವಿಧಾನದ ಚೌಕಟ್ಟಿನಲ್ಲಿ ಪ್ರತಿಭಟನೆಯ ದ್ವನಿ ಎತ್ತಬೇಕು. ಜನರ ಸಮಸ್ಯೆಗಳಿಗೆ ಜನಪರ ಚಳುವಳಿಯೇ ಮದ್ದು ಎಂದು ನಂಬಿದವನು ನಾನು. ಕೇಂದ್ರ ಸರ್ಕಾರ ರೈತರಿಗೆ ಸಂಬಂಧಪಟ್ಟ ನಾಲ್ಕು ಕೃಷಿ ಕಾಯ್ದೆಗಳನ್ನು ತಂದಿತು. ದೆಹಲಿಯ ಗಡಿಗಳಲ್ಲಿ ರೈತರು ಒಂದು ವರ್ಷ ಚಳುವಳಿ ನಡೆಸಿದರು. ಸುಮಾರು ಒಂದು ಸಾವಿರ ರೈತರು ಸತ್ತರು. ಅನೇಕ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದರು. ಅಂತಿಮವಾಗಿ ಕೇಂದ್ರ ಸರ್ಕಾರ ತಾನು ತಂದಿದ್ದ ನಾಲ್ಕು ಕೃಷಿ ಕಾಯ್ದೆಗಳನ್ನು ಹಿಂಪಡೆಯಿತು. ಇದು ನಮ್ಮ ಮುಂದೆ ಇರುವಂತಹ ಒಂದು ದೊಡ್ಡ ಚಳುವಳಿಯ ಗೆಲುವು. ಹಾಗಾಗಿ, ನನಗೆ ವಿಶ್ವಾಸವಿದೆ, ಈ ರಾಜ್ಯದ ಮುಸ್ಲಿಂ ಸಮುದಾಯದ ಜೊತೆಗೆ ಎಲ್ಲಾ ಪ್ರಜ್ಞಾವಂತರು, ಪ್ರಗತಿಪರ ಚಿಂತಕರು, ಸಾಮಾಜಿಕ ನ್ಯಾಯದ ಬಗ್ಗೆ ನಂಬಿಕೆ ಇರುವಂಥ ಮತ್ತು ಬಹುತ್ವದ ಬಗ್ಗೆ ನಂಬಿಕೆ ಇರುವಂಥ ಎಲ್ಲ ಜನರೂ ಈ ಮುಸ್ಲಿಂ ಸಮುದಾಯದ ಜೊತೆ ಕೈಜೋಡಿಸಬೇಕು. ಇವರ ದ್ವನಿಗೆ ದ್ವನಿಗೂಡಿಸಬೇಕು. ಅವರ ಪರ ನಿಲ್ಲಬೇಕು.

ಮೀಸಲಾತಿ ವಾಪಾಸು ಮುಸ್ಲಿಂ ದ್ವೇಷದ ಭಾಗ–ಸಿಪಿಐ(ಎಂ)

ಕರ್ನಾಟಕ ರಾಜ್ಯ ಸರ್ಕಾರ ಹಿಂದುಳಿದ ವರ್ಗ 2ಬಿ ಅಡಿಯಲ್ಲಿ ಶೇ. 4 ರಷ್ಟು ಮೀಸಲಾತಿ ಹೊಂದಿದ್ದ ಮುಸ್ಲಿಂ ಸಮುದಾಯದ ಸೌಲಭ್ಯವನ್ನು ವಾಪಾಸು ಪಡೆದಿರುವುದು ಮುಸ್ಲಿಂ ದ್ವೇಷದ ಭಾಗವಾಗಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಇದು ಧಾರ್ಮಿಕ ತಾರತಮ್ಯವನ್ನು ಮುನ್ನಡೆಸುವ ಜಾತ್ಯಾತೀತ ಭಾರತದ ಸಂವಿಧಾನದ ವಿರೋಧಿ ದುಷ್ಕೃತ್ಯವಾಗಿದೆ ಎಂದು ಅದು ಆಕ್ರೋಶ ವ್ಯಕ್ತಪಡಿಸಿದೆ.

ಮುಸ್ಲಿಂ ಅಲ್ಪ ಸಂಖ್ಯಾತರ ಸಾಮಾಜಿಕ, ಆರ್ಥಿಕ ಹಿಂದುಳಿದಿರುವಿಕೆಯನ್ನು ಸಮಗ್ರವಾಗಿ ಗುರುತಿಸಿ, ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಅಭಿವೃದ್ದಿಗಾಗಿ ಒಕ್ಕೂಟ ಸರ್ಕಾರಗಳೇ ಈ ಹಿಂದೆ ರಚಿಸಿದ್ದ ನ್ಯಾಯ ಮೂರ್ತಿ ರಾಜೇಂದ್ರ ಸಾಚಾರ್ ಸಮಿತಿ ವರದಿ ಹಾಗೂ ಮುಸ್ಲಿಂ ಸಮುದಾಯದ ಜನ ಸಂಖ್ಯೆಯ ಆಧಾರದಲ್ಲಿ ಮೀಸಲಾತಿ ಸೌಲಭ್ಯ ನೀಡಬೇಕೆಂದು ಡಾ. ರಂಗನಾಥ ಮಿಶ್ರಾ ಸಮಿತಿ ವರದಿಗಳು ಸ್ಪಷ್ಟವಾಗಿ ಹೇಳಿವೆ. ಹೀಗಿರುವಾಗ ಅವರ ಸೌಲಭ್ಯ ವಾಪಾಸು ಪಡೆದಿರುವುದು ಅಕ್ಷಮ್ಯವಾಗಿದೆ. ಈ ಕೂಡಲೇ ಮುಸ್ಲಿಂ ಸಮುದಾಯದ ಮೀಸಲಾತಿ ರದ್ದು ಪಡಿಸಿರುವುದನ್ನು ವಾಪಾಸು ಪಡೆದು ಅವರ ಮೀಸಲಾತಿಯನ್ನು ಮುಂದುವರೆಸುವಂತೆ ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಆರ್ಥಿಕವಾಗಿ ಹಿಂದುಳಿದ ವಿಭಾಗಗಳ ಜೊತೆ ಸೇರಿಸಿದಲ್ಲಿ ಮುಸ್ಲಿಂ ಸಮುದಾಯದ ಬಲಹೀನರು ಮೇಲ್ಜಾತಿಗಳ ಸಮುದಾಯಗಳೊಂದಿಗೆ ಸ್ಪರ್ಧಿಸಲಾಗದು. ಇದರಿಂದ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿಯೆಂಬುದು ಮರೀಚಿಕೆಯಾಗಲಿದೆ. ಮುಸ್ಲಿಂ ಸಮುದಾಯದ ಮೀಸಲು ಸೌಲಭ್ಯವನ್ನು ವಾಪಾಸು ಪಡೆದು ಆ ಜಾಗದಲ್ಲಿ ಒಕ್ಕಲಿಗ ಹಾಗೂ ಪಂಚಮಸಾಲಿ ಸಮುದಾಯಗಳಿಗೆ ನೀಡಿರುವುದು, ಈ ಎರಡು ಸಮುದಾಯಗಳನ್ನು ಮುಸ್ಲಿಂ ಸಮುದಾಯದ ವಿರುದ್ಧ ಎತ್ತಿಕಟ್ಟುವ, ಅಸಹಿಷ್ಣುತೆಯನ್ನು ಬೆಳೆಸುವ ಕೆಟ್ಟ ಕುತಂತ್ರವಾಗಿದೆ. ಇದು ಸಮಾಜದಲ್ಲಿ ಪರಸ್ಪರರ ನಡುವೆ ಅಶಾಂತಿಯನ್ನು ಉಂಟು ಮಾಡಿ, ವಿಭಜಿಸಿ ಆಳುವ ಮತ್ತು ಕಾರ್ಪೋರೇಟ್ ಲೂಟಿಯಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಲೂಟಿಕೋರ ತಂತ್ರವಾಗಿದೆ.

ಬಿಜೆಪಿ ಮತ್ತು ಹಿಂದುತ್ವವಾದಿ ದುಷ್ಟಕೂಟವು ತಾನು ಮೀಸಲಾತಿ ಪರವಾಗಿದ್ದೇನೆಂದು ತೋರಿಕೆಯ ಕ್ರಮ ವಹಿಸುತ್ತಿದೆ. ಮತ್ತೊಂದೆಡೆ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣದ ಮೂಲಕ ದುರ್ಬಲ ಸಮುದಾಯಗಳಿಗೆ ಮತ್ತು ಬಾಲಕಿಯರಿಗೆ ಶಿಕ್ಷಣವನ್ನು ನಿರಾಕರಿಸುತ್ತಿದೆ. ಹಾಗೂ ಲಕ್ಷಾಂತರ ಸರ್ಕಾರಿ ಹುದ್ದೆಗಳನ್ನು ತುಂಬದೇ ರದ್ದುಪಡಿಸಲು ಕ್ರಮ ವಹಿಸುವುದು ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಿಸುವುದು, ಇಲ್ಲವೇ ಹೊರಗುತ್ತಿಗೆ ಆಧಾರದಲ್ಲಿ ಅತ್ಯಂತ ನಿಕೃಷ್ಠ ವೇತನಕ್ಕೆ ನಿರುದ್ಯೋಗಿಗಳನ್ನು ಶೋಷಿಸುವ ಮೂಲಕ, ಖಾಸಗೀ ರಂಗದ ಉದ್ದಿಮೆಗಳು ಹಾಗೂ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನಿರಾಕರಿಸುವ ಮೂಲಕ, ಶಿಕ್ಷಣ ಹಾಗೂ ಉದ್ಯೋಗ ರಂಗದಲ್ಲಿ ಮೀಸಲಾತಿ ಇಲ್ಲದಂತೆ ಮಾಡಲಾಗಿದೆ ಎಂದು ಆರೋಪಿಸಿದೆ.

ರಾಜ್ಯದ ಜನತೆ, ಈ ಸರ್ಕಾರದ ಮತ್ತು ಬಿಜೆಪಿ ಹಾಗೂ ಆರ್.ಎಸ್.ಎಸ್. ಹಿಂದುತ್ವ ಮತಾಂಧ ಕೂಟಗಳು ರಾಜ್ಯದ ಸಾಮರಸ್ಯ ಹಾಳು ಗೆಡಹುವ ಕುತಂತ್ರವನ್ನು ಸೋಲಿಸಲು ಒಗ್ಗೂಡಿ ಹೋರಾಡಬೇಕು ಮತ್ತು ಸಾರ್ವಜನಿಕ ಶಿಕ್ಷಣದ ಉಳಿವಿಗಾಗಿ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಿಸದಂತೆ, ಸರಕಾರಿ ಉದ್ಯೋಗಗಳನ್ನು ತುಂಬುವಂತೆ ಮತ್ತು ಖಾಸಗೀ ರಂಗದಲ್ಲೂ ಮೀಸಲಾತಿ ವಿಸ್ಥರಿಸುವಂತೆ, ಹಾಗೂ ಮುಸ್ಲಿಂ ಸಮುದಾಯಕ್ಕಾದ ಅನ್ಯಾಯವನ್ನು ತಡೆಯುವಂತೆ ಒಗ್ಗೂಡಿ ಒತ್ತಾಯಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ರೇಗಾದ ಕತ್ತು ಹಿಸುಕದಿರಿ..... ಪುಟ 9 ರಿಂದ

ನಿಯಮಗಳ ಅಂತಿಮ ಪರಿಣಾಮವಾಗುತ್ತದೆ.

ಕೂಲಿ ವಿತರಿಸಲು ಕಾನೂನಿನಲ್ಲಿ ಅವಕಾಶ ನೀಡಲಾದ 15 ದಿನಗಳಿಗಿಂತ ಹೆಚ್ಚಿನ ಸಮಯ ತೆಗೆದುಕೊಂಡು ವಿಳಂಬ ಮಾಡುವುದು ಇದೇ ರೀತಿಯ ಇನ್ನೊಂದು ನಿರುತ್ತೇಜಕ ಕ್ರಮವಾಗಿದೆ. ಸರಕಾರದ ಅಂಕಿಅಂಶಗಳೇ ಹೇಳುವ ಪ್ರಕಾರ ಈ ವರ್ಷ 3,630 ಕೋಟಿ ರೂಪಾಯಿಯಷ್ಟು ಕೂಲಿಯನ್ನು 15ಕ್ಕಿಂತ ಹೆಚ್ಚು ದಿನ ವಿಳಂಬ ಮಾಡಿ ವಿತರಿಸಲಾಗಿದೆ, ಅಲ್ಲದೆ 1,010 ಕೋಟಿ ರೂಪಾಯಿ ಕೂಲಿ ಇನ್ನೂ ಬಾಕಿಯಿದೆ. ಮೈಕೈ ನೋವು ಮಾಡಿಕೊಂಡು ಮಾಡುವ ಕೆಲಸಕ್ಕೆ ಸಿಗುವುದೇ ಅಲ್ಲಿ ಕಡಿಮೆ ಕೂಲಿ. ಅದನ್ನೂ ಸಮಯಕ್ಕೆ ಸರಿಯಾಗಿ ಕೊಡದೆ ಸತಾಯಿಸಿದರೆ ಕಾರ್ಮಿಕರು ಇದರ ಸಹವಾಸ ಸಾಕಪ್ಪಾ ಎಂದು ರೇಗಾದಿಂದ ದೂರ ಸರಿಯುವುದು ಸಹಜವಾಗಿದೆ. ಸಮಯಕ್ಕೆ ಸರಿಯಾಗಿ ತಕ್ಷಣವೇ ನಗದು ಸಿಗುವ ಇತರ ಬೇರೆ ಕೆಲಸಗಳಿಗೆ ಅವರು ಹೋಗುತ್ತಾರೆ. ರೇಗಾಕ್ಕಿಂತ ಕಡಿಮೆ ಕೂಲಿಯಾದರೂ ಪರವಾಗಿಲ್ಲ ಎಂದು ಅಲ್ಲಿಗೇ ಹೋಗುತ್ತಾರೆ.

ಸರ್ಕಾರ ಎಂದಿನಂತೆ ಅಬ್ಬರದ ಪ್ರಚಾರ ಮಾಡಿಕೊಂಡು ರೇಗಾ ಕೂಲಿಯಲ್ಲಿ ಶೇಕಡ 2ರಿಂದ ಶೇಕಡ 10ರಷ್ಟು ಏರಿಕೆ ಮಾಡಿತು. ವಾಸ್ತವವಾಗಿ ಅದರಿಂದ ದೈನಿಕ 7ರಿಂದ 26 ರೂಪಾಯಿ ಮಾತ್ರವೇ ಕೂಲಿ ಹೆಚ್ಚಳ ಆಗುತ್ತದೆ. ಕಳೆದ ಕೆಲವು ತಿಂಗಳಿಂದ ಹಣದುಬ್ಬರ ಪ್ರಮಾಣ ಶೇಕಡ 6ರಿಂದ 8ರಷ್ಟಿದೆ. ಆಹಾರ ಹಣದುಬ್ಬರ ಶೇಕಡ 8ರಿಂದ 10ರಷ್ಟಿದೆ. ಯಾವ ಮುಂದಿನ ಹಣಕಾಸು ವರ್ಷಕ್ಕೆ ಈ ಕೂಲಿ ಏರಿಕೆಯನ್ನು ಘೋಷಣೆ ಮಾಡಲಾಗಿದೆಯೋ ಆ ವರ್ಷ ಕೂಡ ಈ ಅತ್ಯಧಿಕ ಹಣದುಬ್ಬರ ದರ ಇಳಿಯುವ ಸಾಧ್ಯತೆಯಿಲ್ಲ. ವಾಸ್ತವವಾಗಿ, ರೇಗಾ ಕೂಲಿಗಳು ಕೃಷಿ ಕಾರ್ಮಿಕರು ಮತ್ತು ಕೃಷಿಕಾರ್ಮಿಕೇತರರಿಗೆ ಇರುವ ಕೂಲಿ ದರಕ್ಕಿಂತಲೂ ಕಡಿಮೆ ಇರುತ್ತದೆ. ರೇಗಾದ ಈ ಸರಾಸರಿ ದಿನಗೂಲಿ 2022–23ರ ಹಣಕಾಸು ವರ್ಷದಲ್ಲಿ 217.87 ರೂಪಾಯಿ ಆಗಿತ್ತು. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂಕಿಅಂಶದ ಪ್ರಕಾರ, ಸಾಮಾನ್ಯ ಪುರುಷ ಕೃಷಿ ಕೂಲಿಕಾರನ ದಿನಗೂಲಿ 349.77 ರೂಪಾಯಿ ಆಗಿದೆ.

ರೇಗಾ ಯೋಜನೆಯಲ್ಲಿ ಕಾರ್ಮಿಕರಿಗೆ ನೀಡಲಾಗುವ ಸರಾಸರಿ ಕೆಲಸದ ದಿನಗಳ ಸಂಖ್ಯೆ ಒಂದು ವರ್ಷದಲ್ಲಿ ಕೇವಲ 47 ದಿನ ಆಗಿದೆ. ಆದರೆ ವರ್ಷದಲ್ಲಿ ಕನಿಷ್ಠ 100 ದಿನ ಕೆಲಸ ನೀಡಬೇಕೆನ್ನುತ್ತದೆ ರೇಗಾ ಕಾನೂನು. ಈ ಅಪಾಯಕಾರಿ ನಿರ್ಬಂಧಗಳ ಸಂಯೋಜನೆಯಿಂದಾಗಿ (ಕಡಿಮೆ ಹಾಗೂ ಅನಿಯಮಿತ ಕೂಲಿ, ಡಿಜಿಟಲ್ ಅಡೆತಡೆಗಳು, ಕೆಲಸದ ದಿನಗಳ ಕೊರತೆ) ಈ ಯೋಜನೆಯಡಿ ಕೆಲಸ ಪಡೆಯುವ ಕುಟುಂಬಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಕಳೆದ ವರ್ಷದ 10.6 ಕೋಟಿಗೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಯೋಜನೆಯಡಿ ಸುಮಾರು 8.6 ಕೋಟಿ ಜನರಿಗೆ ಮಾತ್ರ ಉದ್ಯೋಗ ದೊರಕಿದೆ. ಅಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ 2 ಕೋಟಿ ಅಥವಾ ಸುಮಾರು ಶೇಕಡ 20ರಷ್ಟು ಕುಸಿತವಾಗಿದೆ. ರೇಗಾದಡಿ ಕೆಲಸಕ್ಕೆ ಅರ್ಜಿ ಹಾಕಿದ 1.6 ಕೋಟಿ ಜನರಿಗೆ ಉದ್ಯೋಗ ಒದಗಿಸದೆ ವಾಪಸ್ ಕಳಿಸಿರುವ ಅಂಶವನ್ನು ಪರಿಗಣಿಸಿದರೆ ಈ ಪ್ರಮಾಣ ಇನ್ನೂ ಜಾಸ್ತಿಯಾಗುತ್ತದೆ.

ಕಡಿಮೆ ಕೂಲಿ ಮತ್ತು ಕೆಲಸದ ದಿನಗಳಲ್ಲಿ ಕಡಿಮೆ ಇದ್ದರೂ ರೇಗಾ ಭಾರತದ ಕೋಟ್ಯಂತರ ಕುಟುಂಬಗಳಿಗೆ ಜೀವನರೇಖೆಯಾಗಿದೆ. ತೀರಾ ಕಡಿಮೆ ಆದಾಯವೂ ಅಮೂಲ್ಯವಾದುದು. ಯಾಕೆಂದರೆ ದೇಶದಲ್ಲಿ ಯಾವುದೇ ಉದ್ಯೋಗಾವಕಾಶಗಳು ಇಲ್ಲ, ಬೆಲೆಗಳು ಕುಟುಂಬಗಳ ಬಜೆಟ್‌ಗಳನ್ನು ನಾಶ ಮಾಡುತ್ತಿವೆ ಹಾಗೂ ಅದರ ಫಲಿತಾಂಶವಾದ ಆರ್ಥಿಕ ಯಾತನೆಯು ವರ್ಣಿಸಲಸದಳವಾಗಿದೆ. ಆದ್ದರಿಂದ ಈ ಉದ್ಯೋಗ ಖಾತರಿ ಯೋಜನೆಯನ್ನು ಪುನಶ್ಚೇತನಗೊಳಿಸುವುದು, ಕೂಲಿ ಮತ್ತು ಕೆಲಸದ ದಿನಗಳನ್ನು ಹೆಚ್ಚಿಸುವುದು, ಅದನ್ನು ನಗರ ಪ್ರದೇಶಗಳಿಗೆ ಕೂಡ ವಿಸ್ತರಿಸುವುದು ಅಗತ್ಯವಾಗಿದೆ. ಈ ಯೋಜನೆಯೊಂದಿಗೆ ನಡೆಸಲಾಗುತ್ತಿರುವ ಬೆಕ್ಕು–ಇಲಿ ಆಟವನ್ನು ಅಂತ್ಯಗೊಳಿಸಬೇಕಿದೆ.

ಅನು: ವಿಶ್ವ



ಕ್ರಿಮಿನಲ್ ಮಾನನಷ್ಟದ ದಾರಿಗಿಳಿದ ಬಿಜೆಪಿಯ ನಿರ್ಲಜ್ಜ ಪ್ರದರ್ಶನ

ಅದಾನಿಯನ್ನು ಕಟೆಕಟೆಯಲ್ಲಿ ನಿಲ್ಲಿಸಲು ನಿರಾಕರಿಸುವ ಲಜ್ಜೆಗೇಡಿತನ

ಪ್ರತಿಪಕ್ಷಗಳ ನಾಯಕರ ಮೇಲೆ ಗುರಿಯಿಡಲು ಮತ್ತು ಅವರನ್ನು ಸಂಸದರಾಗಿ ಅನರ್ಹಗೊಳಿಸಲು ಬಿಜೆಪಿ ಈಗ ಕ್ರಿಮಿನಲ್ ಮಾನನಷ್ಟ ಮಾರ್ಗವನ್ನು ಬಳಸಲು ಹೊರಟಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ರಾಹುಲ್ ಗಾಂಧಿಯವರಿಗೆ ಶಿಕ್ಷೆ ವಿಧಿಸಿರುವುದು ಮತ್ತು ಅವರನ್ನು ಅನರ್ಹಗೊಳಿಸುವಲ್ಲಿ ತೋರಿಸಿರುವ ಆತುರವು ಬಿಜೆಪಿಯ ಅಸಹ್ಯಕರ ನಿರಂಕುಶ ಚಾರಿತ್ರ್ಯವನ್ನು ಇದು ಬಿಂಬಿಸುತ್ತದೆ ಎಂದು ಅದು ವರ್ಣಿಸಿದೆ. ಮಾರ್ಚ್25-26ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್ ಬ್ಯುರೊ ಪ್ರತಿಪಕ್ಷಗಳ ನಾಯಕರಿಗೆ ಕಿರುಕುಳ ಕೊಡಲಾಗುತ್ತಿದೆ ಎಂದು ಹೇಳುತ್ತ, ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಲು ಕೇಂದ್ರೀಯ ಸಂಸ್ಥೆಗಳನ್ನು ಈಗಾಗಲೇ ದುರುಪಯೋಗ ಪಡಿಸಿಕೊಳ್ಳುವುದಲ್ಲದೆ, ಈಗ ಇದನ್ನೂ ಬಳಸುತ್ತಿದೆ ಎಂದು ಅಭಿಪ್ರಾಯ ಪಟ್ಟಿದೆ.

ಹಿಂಡೆನ್ ಬರ್ಗ್ ವರದಿಯು 2014ರಿಂದ ಭಾರತವನ್ನು ಆಳಲು ಬಂದಿರುವ ಕಾರ್ಪೊರೇಟ್-ಕೋಮುವಾದಿ ನಂಟು ಕಾರ್ಯನಿರ್ವಹಿಸುತ್ತಿರುವ ನೀಚ ವಿಧಾನವನ್ನು ಬಹಿರಂಗಪಡಿಸಿದೆ ಎಂದು ಪೊಲಿಟ್ ಬ್ಯುರೊ ವಿಶ್ಲೇಷಿಸಿದೆ. ಅದಾನಿ ಸಮೂಹದ ದುಷ್ಕೃತ್ಯಗಳ ಕುರಿತು ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಸಬೇಕೆಂಬ ಆಗ್ರಹವನ್ನು ಪುನರುಚ್ಚರಿಸುತ್ತ ಪೊಲಿಟ್ ಬ್ಯೂರೋ ಅದಾನಿ ಗುಂಪಿನ ವಿರುದ್ಧ ಕಾನೂನಿನ ನಿಬಂಧನೆಗಳ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಪೊಲಿಟ್ ಬ್ಯೂರೋ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಪ್ರತಿಪಕ್ಷಗಳ ನಾಯಕರಿಗೆ ಕಿರುಕುಳ

ಪ್ರತಿಪಕ್ಷಗಳ ನಾಯಕರ ಮೇಲೆ ಗುರಿಯಿಡಲು ಮತ್ತು ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲು ಬಿಜೆಪಿಯು ಕ್ರಿಮಿನಲ್ ಮಾನನಷ್ಟ ಮಾರ್ಗವನ್ನು ಬಳಸುವುದನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ರಾಹುಲ್ ಗಾಂಧಿಯವರಿಗೆ ಶಿಕ್ಷೆ ವಿಧಿಸಿರುವುದು ಮತ್ತು ಅವರನ್ನು ಅನರ್ಹಗೊಳಿಸುವಲ್ಲಿ ತೋರಿಸಿರುವ ಆತುರವು ಟೀಕೆಗಳಿಗೆ ಬಿಜೆಪಿಯ ಅಸಹಿಷ್ಣುತೆಯ ಮಟ್ಟದ ಒಂದು ನಿರ್ಲಜ್ಜ ಪ್ರದರ್ಶನವಾಗಿದೆ ಮತ್ತು ಬಿಜೆಪಿಯ ಅಸಹ್ಯಕರ ನಿರಂಕುಶ ಚಾರಿತ್ರ್ಯವನ್ನು ಇದು ಬಿಂಬಿಸುತ್ತದೆ.

ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಲು ಕೇಂದ್ರೀಯ ಸಂಸ್ಥೆಗಳನ್ನು ಈಗಾಗಲೇ ದುರುಪಯೋಗಪಡಿಸಿಕೊಳ್ಳುವುದಲ್ಲದೆ, ಈಗ ಇದೂ ಬಂದಿದೆ. ಆರೆಸ್ಸೆಸ್/ಬಿಜೆಪಿ ಕೂಡ ಹಲವಾರು ರಾಜ್ಯಗಳಲ್ಲಿ ರಾಜಕೀಯ ವಿರೋಧಿಗಳ ವಿರುದ್ಧ ಅತ್ಯಂತ ಕ್ಷುದ್ರ ಕಾರಣಗಳಿಗೆ ಎಫ್‌ಐಆರ್‌ಗಳನ್ನು ಸಲ್ಲಿಸಿವೆ ಮತ್ತು ಪ್ರಕರಣಗಳನ್ನು ದಾಖಲಿಸಿದೆ. ಎಎಪಿ ನಾಯಕ ಮತ್ತು ದಿಲ್ಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಬಂಧಿಸಲಾಗಿದ್ದು, ಜೈಲಿನಲ್ಲಿದ್ದಾರೆ. ತೀರಾ ಇತ್ತೀಚೆಗೆ ಇ.ಡಿ./ಸಿಬಿಐ ಗುರಿಯಾಗಿಸಿದ ಮತ್ತು ಕಿರುಕುಳಕ್ಕೊಳಗಾದ ಇತರರಲ್ಲಿ ಲಾಲು ಪ್ರಸಾದ್ ಯಾದವ್, ತೇಜಸ್ವಿ ಯಾದವ್ ಮತ್ತು ಕುಟುಂಬ (ಆರ್‌ಜೆಡಿ), ಶ್ರೀಮತಿ ಕವಿತಾ(ಬಿಆರ್‌ಎಸ್) ಮತ್ತು ಇತರ ಅನೇಕರು ಇದ್ದಾರೆ.

ಅದಾನಿಯನ್ನು ಕಟೆಕಟೆಯಲ್ಲಿ ನಿಲ್ಲಿಸಿ

ಹಿಂಡೆನ್ ಬರ್ಗ್ ವರದಿಯು 2014 ರಿಂದ ಭಾರತವನ್ನು ಆಳಲು ಬಂದಿರುವ ಕಾರ್ಪೊರೇಟ್-ಕೋಮುವಾದಿ ನಂಟು ಕಾರ್ಯನಿರ್ವಹಿಸುತ್ತಿರುವ ನೀಚ ವಿಧಾನವನ್ನು ಬಹಿರಂಗಪಡಿಸಿದೆ. 2014 ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ, ಅದಾಣಿ ಸಮೂಹವು ಫೋರ್ಬ್ಸ್ ಪ್ರಕಾರ 7.1 ಬಿಲಿಯನ್(ಶತಕೋಟಿ) ಡಾಲರ್ ಮಾರುಕಟ್ಟೆ ಬಂಡವಾಳವನ್ನು ಹೊಂದಿತ್ತು. ಇದು 2022ರ ಹೊತ್ತಿಗೆ 200 ಶತಕೋಟಿಗೆ ನಾಗಾಲೋಟ ಹೂಡಿದೆ. ಅಂತರಾಷ್ಟ್ರೀಯ ಶ್ರೇಯಾಂಕದಲ್ಲಿ, 2014ರಲ್ಲಿ 609ನೇ ಸ್ಥಾನದಲ್ಲಿದ್ದ ಅದಾನಿ ದಾಪುಗಾಲಿನ ನಡೆ 2022ರಲ್ಲಿ ವಿಶ್ವದ ಎರಡನೇ ಶ್ರೀಮಂತ ವ್ಯಕ್ತಿಯಾಗುವ ಮಟ್ಟಕ್ಕೆ ಬೆಳೆಸಿದೆ.

ಬಿಜೆಪಿ ಸರ್ಕಾರವು ಅದಾನಿ ಗುಂಪಿನ ನಿರ್ಲಜ್ಜ ದುಷ್ಕೃತ್ಯಗಳನ್ನು, ಲೋಪಗಳನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತಿದೆ. ಬಂಟ ಬಂಡವಾಳಶಾಹಿಗಳೊಂದಿಗೆ ಅದರ ಈ ನಂಟು ಜನರು ಕಷ್ಟಪಟ್ಟು ಸಂಪಾದಿಸಿದ ಸಾವಿರಾರು ಕೋಟಿ ರೂಪಾಯಿಗಳನ್ನು ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಎಲ್‌ಐಸಿಗಳಿಂದ ಲೂಟಿ ಮಾಡಲು ಅನುಕೂಲ ಕಲ್ಪಿಸಿ ಕೊಟ್ಟಿದೆ. ಅದಾನಿ ಗಾಥೆಯ ಬಗ್ಗೆ ಯಾವುದೇ ರೀತಿಯ ವಿಚಾರಣೆ ನಡೆಸಲು ಅದರ ಲಜ್ಜೆಗೇಡಿ ನಿರಾಕರಣೆಯು ಅದನ್ನು ಸಂಪೂರ್ಣವಾಗಿ ಬಯಲಿಗೆಳೆದಿದೆ.

ಅದಾಣಿ ಸಮೂಹದ ದುಷ್ಕೃತ್ಯಗಳ ಕುರಿತು ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಸಬೇಕೆಂಬ ಆಗ್ರಹವನ್ನು ಪೊಲಿಟ್ ಬ್ಯೂರೋ ಪುನರುಚ್ಚರಿಸಿದೆ. ಅದಾನಿ ಗುಂಪಿನ ವಿರುದ್ಧ ಕಾನೂನಿನ ನಿಬಂಧನೆಗಳ ಪ್ರಕಾರ ಕ್ರಮ ಕೈಗೊಳ್ಳಬೇಕು.

ಸಂಸತ್ತನ್ನು ಅಸ್ತವ್ಯಸ್ತಗೊಳಿಸಿದ ಬಿಜೆಪಿ

ತನ್ನ ಅಧಿಕಾರಾವಧಿಯಲ್ಲಿ ಮಿಂಚಿನ ವೇಗದ ಏರಿಕೆಯನ್ನು ಕಂಡಿರುವ ವ್ಯಾಪಾರಿ ಸಮೂಹದೊಂದಿಗಿನ ತನ್ನ ಸಂಬಂಧದ ಬಗ್ಗೆ ಪ್ರಶ್ನೆಗಳನ್ನು ಎದುರಿಸಲು ಸಾಧ್ಯವಾಗದ ಬಿಜೆಪಿಯು ಸಂಸತ್ತಿನಲ್ಲಿ ಚರ್ಚೆ ನಡೆಸಲು ಅಥವಾ ಜೆಪಿಸಿಯ ಬೇಡಿಕೆಯನ್ನು ಒಪ್ಪಿಕೊಳ್ಳಲು ಹಟಮಾರಿತನದಿಂದ ನಿರಾಕರಿಸುತ್ತಿದೆ.

ಭಾರತದ ಪ್ರಜಾಪ್ರಭುತ್ವದ ಸ್ಥಿತಿಗತಿ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಹೇಳಿಕೆಯನ್ನು ನೆಪವಾಗಿಟ್ಟುಕೊಂಡು ಆಳುವ ಪಕ್ಷದ ಸದಸ್ಯರು ದಿನಗಟ್ಟಲೆ ಲೋಕಸಭೆಯನ್ನು ಸ್ತಬ್ಧಗೊಳಿಸಿದ್ದು ಅಭೂತಪೂರ್ವ. ಇದರಿಂದ ಯಾವುದೇ ಚರ್ಚೆಯಿಲ್ಲದೆ ಕೇಂದ್ರ ಬಜೆಟ್ ಅಂಗೀಕಾರವಾಗುವಂತಾಯಿತು.

ದುರ್ಬಲಗೊಳಿಸಲ್ಪಟ್ಟ ಸಾಂವಿಧಾನಿಕ ಪ್ರಾಧಿಕಾರಗಳು

ಸಂಸತ್ತನ್ನು ಅಸ್ತವ್ಯಸ್ತಗೊಳಿಸಿರುವುದಲ್ಲದೆ, ಕೇಂದ್ರ ಕಾನೂನು ಸಚಿವರು ಮತ್ತು ಉಪರಾಷ್ಟ್ರಪತಿಯಂತಹ ಸಾಂವಿಧಾನಿಕ ಅಧಿಕಾರಿಗಳು ನ್ಯಾಯಾಂಗದ ಮೇಲೆ ದಾಳಿ ನಡೆಸುವ ಹೇಳಿಕೆಗಳನ್ನು ಮತ್ತೆ-ಮತ್ತೆ ನೀಡುತ್ತಲೇ ಇದ್ದಾರೆ. ನ್ಯಾಯಾಂಗದ ಮೇಲೆ ಕಾರ್ಯಾಂಗದ ನಿಯಂತ್ರಣವನ್ನು ಹೇರುವ ಪ್ರಯತ್ನಗಳನ್ನು ಸೋಲಿಸಬೇಕು.

ಬಿಜೆಪಿಯೇತರ ಆಳ್ವಿಕೆಯಿರುವ ರಾಜ್ಯಗಳಲ್ಲಿ ರಾಜ್ಯಪಾಲರುಗಳು ಬಿಜೆಪಿಯ ರಾಜಕೀಯ ಉದ್ದೇಶಗಳಿಗೆ ನೆರವಾಗುವ ಪಾತ್ರವಹಿಸುವುದನ್ನು ಮತ್ತಷ್ಟು ಹೆಚ್ಚಿಸುತ್ತಿದ್ದಾರೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು

ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರ ವಿರುದ್ಧ ಸಂಘಟಿತ ದಾಳಿಗಳ ಹೆಚ್ಚುತ್ತಿರುವ ಘಟನೆಗಳನ್ನು ಪೊಲಿಟ್ ಬ್ಯೂರೋ ತೀವ್ರ ಕಳವಳದಿಂದ ಗಮನಿಸಿತು. ಗೋರಕ್ಷಕರಿಂದ ಮುಸ್ಲಿಂ ಯುವಕರ ಹತ್ಯೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಚರ್ಚ್‌ಗಳು ಮತ್ತು ಕ್ರಿಶ್ಚಿಯನ್ ಸಮುದಾಯದ ಸದಸ್ಯರು, ವಿಶೇಷವಾಗಿ ಕ್ರಿಶ್ಚಿಯನ್ ಬುಡಕಟ್ಟು ಜನಾಂಗದವರ ಮೇಲೆ ದಾಳಿಗಳು ಹಲವಾರು ರಾಜ್ಯಗಳಿಂದ ವರದಿಯಾಗಿವೆ. ಕೋಮು ಧ್ರುವೀಕರಣವನ್ನು ಹೆಚ್ಚಿಸಲು, ಹೊಸ ಹೊಸ ಹುಸಿ ಕಥನಗಳು ಮತ್ತು ಇತಿಹಾಸಗಳನ್ನು, ವಿಶೇಷವಾಗಿ ಚುನಾವಣೆಗಳು ನಡೆಯಲಿರುವ ರಾಜ್ಯಗಳಲ್ಲಿ ಸೃಷ್ಟಿಸಲಾಗುತ್ತಿದೆ.

ಕರ್ನಾಟಕದ ಬಿಜೆಪಿ ಸರ್ಕಾರವು ಒಬಿಸಿ ಕೋಟಾದಡಿಯಲ್ಲಿ ಮುಸ್ಲಿಮರಿಗೆ ಮೀಸಲಾತಿಯನ್ನು ರದ್ದುಗೊಳಿಸಲು ನಿರ್ಧರಿಸಿದೆ. ರಾಜ್ಯ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿರುವಾಗಲೇ ಇದು ನಡೆದಿದೆ. ರಾಜ್ಯದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ವ್ಯಾಪಕ ಹಲ್ಲೆಗಳು ಮತ್ತು ಕಿರುಕುಳಗಳು ತೀವ್ರಗೊಳ್ಳುತ್ತಿವೆ.

ಬೆಳೆಯುತ್ತಿರುವ ಆರ್ಥಿಕ ಹೊರೆಗಳು

2023-24ರ ಕೇಂದ್ರ ಬಜೆಟನ್ನು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಿರುವುದನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ಆರ್ಥಿಕ ನಿಧಾನಗತಿ, ಉದ್ಯೋಗ ಸೃಷ್ಟಿ ಅಥವಾ ಸಾಮಾನ್ಯಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಪ್ರಶ್ನೆಗಳನ್ನು ನಿಭಾಯಿಸುವಲ್ಲಿ ಬಜೆಟ್ ದಯನೀಯವಾಗಿ ವಿಫಲವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಇದು ವಿತ್ತೀಯ ಕೊರತೆಯನ್ನು ಕಡಿಮೆ ಮಾಡಲು ಸರ್ಕಾರದ ವೆಚ್ಚಗಳನ್ನು ಹಿಂಡುತ್ತದೆ ಮತ್ತು ಶ್ರೀಮಂತರಿಗೆ ಮತ್ತಷ್ಟು ತೆರಿಗೆ ರಿಯಾಯಿತಿಗಳನ್ನು ನೀಡುತ್ತದೆ. ಆಕ್ಸ್ ಫ್ಯಾಮ್ ವರದಿಯು ಭಾರತದಲ್ಲಿ ಶೇಕಡಾ 1 ರಷ್ಟು ಶ್ರೀಮಂತರು ಕಳೆದ 2 ವರ್ಷಗಳಲ್ಲಿ ಉತ್ಪತ್ತಿಯಾದ ಸಂಪತ್ತಿನ ಶೇಕಡಾ 40.5 ರಷ್ಟನ್ನು ದೋಚಿಕೊಂಡಿದ್ದಾರೆ ಎಂದು ತೋರಿಸಿರುವ ಸಮಯದಲ್ಲಿಯೂ ಇಂತಹ ರಿಯಾಯಿತಿಗಳನ್ನು ಕೊಡಲಾಗಿದೆ. ಹೀಗಾಗಿ, ಇದು ಅರ್ಥವ್ಯವಸ್ಥೆಯನ್ನು ಸಂಕುಚನಗೊಳಿಸುವ ಬಜೆಟ್ ಆಗಿದ್ದು ಆರ್ಥಿಕ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತದಷ್ಟೆ.

ಅಡುಗೆ ಅನಿಲದ ಬೆಲೆಯಲ್ಲಿ ಮತ್ತೊಮ್ಮೆ ಏರಿಕೆಯ ಮೂಲಕ ಜನರ ಮೇಲೆ ಮತ್ತಷ್ಟು ಹೊರೆಗಳನ್ನು ಹೇರಲಾಗುತ್ತಿದೆ. ಅಸಮಾನತೆಗಳು ಅಶ್ಲೀಲ ಮಟ್ಟಕ್ಕೆ ವಿಸ್ತರಿಸುತ್ತಿರುವಾಗ ನಿರುದ್ಯೋಗ ಮತ್ತು ಹಸಿವು ಹೆಚ್ಚಾಗುತ್ತಲೇ ಇದೆ.

ಮನರೇಗದ ನಿರ್ನಾಮ

ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗಖಾತ್ರಿ(ಮನರೇಗ) ಯೋಜನೆಯಲ್ಲಿ ಸರ್ಕಾರವು'ರಾಷ್ಟ್ರೀಯ ಮೊಬೈಲ್ ಉಸ್ತುವಾರಿ ವ್ಯವಸ್ಥೆ'ಯೆಂಬ ತಂತ್ರಾಂಶವನ್ನು ಕಡ್ಡಾಯಗೊಳಿಸಿರುವುದನ್ನು ತಕ್ಷಣವೇ ರದ್ದುಗೊಳಿಸಬೇಕೆಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ಇದರಲ್ಲಿನ ತಾಂತ್ರಿಕ ದೋಷಗಳಿಂದಾಗಿ ಕಾರ್ಮಿಕರು ತಮ್ಮ ವೇತನದ ಕನಿಷ್ಟ ಅರ್ಧದಷ್ಟು ಕಳೆದುಕೊಂಡಿದ್ದಾರೆ ಎಂದು ವರದಿಗಳು ಸೂಚಿಸುತ್ತವೆ. ಮನರೇಗ ಯೋಜನೆಯಲ್ಲಿ ದುಡಿಯುವವರಲ್ಲಿ ಬಹುಸಂಖ್ಯೆಯಲ್ಲಿರುವ ಮಹಿಳಾ ಕಾರ್ಮಿಕರು ಇದನ್ನು ಬಳಸಲು ಸ್ಮಾರ್ಟ್ ಫೋನ್ ಗಳನ್ನು ಖರೀದಿಸಲು ಸಾಲವನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಲಾಗುತ್ತಿದೆ. ಬಜೆಟ್ ಹಂಚಿಕೆಯ ಕಡಿತ ಮತ್ತು ವೇತನ ಪಾವತಿಗಳ ದೀರ್ಘ ಬಾಕಿಯ ಜೊತೆಗೆ ಇಂತಹ ಆಪ್ ಕಡ್ಡಾಯಗೊಳಿಸಿರುವುದು ಈ ಯೋಜನೆಯನ್ನು ನಿಷ್ಪರಿಣಾಮಕಾರಿಯಾಗಿಸುತ್ತಿದೆ.

ಇತ್ತೀಚಿನ ವಿಧಾನಸಭೆ ಚುನಾವಣೆಗಳು

ಒಟ್ಟು ಮಾಧ್ಯಮ ವ್ಯವಸ್ಥೆಯ ಮೇಲೆ ಹಿಡಿತ ಹೊಂದಿರುವ ಮೋದಿ ಸರಕಾರ ತನ್ನನ್ನು ಚುನಾವಣಾ ಅಜೇಯ ಎಂದು ಬಿಂಬಿಸಿಕೊಳ್ಳುತ್ತಿದೆ. ಇದು ಸಂಪೂರ್ಣವಾಗಿ ದಾರಿತಪ್ಪಿಸುವ ಸಂಗತಿ. ಹಿಂದಿನ ಸುತ್ತಿನಅಸೆಂಬ್ಲಿ ಚುನಾವಣೆಗಳಲ್ಲಿ ಬಿಜೆಪಿ ಗುಜರಾತನ್ನು ಉಳಿಸಿಕೊಂಡಿದೆ, ಅದು ಹಿಮಾಚಲ ಪ್ರದೇಶದಲ್ಲಿ ತನ್ನ ಹಾಲಿ ಸರ್ಕಾರವನ್ನು ಕಳೆದುಕೊಂಡಿತು ಮತ್ತು ಕಳೆದ 15 ವರ್ಷಗಳಿಂದ ಅದು ನಿಯಂತ್ರಿಸುತ್ತಿದ್ದ ದಿಲ್ಲಿ ಮುನ್ಸಿಪಲ್ ಕಾರ್ಪೊರೇಶನನ್ನು ಸಹ ಕಳೆದುಕೊಂಡಿತು.

ತ್ರಿಪುರಾ, ನಾಗಾಲ್ಯಾಂಡ್ ಮತ್ತು ಮೇಘಾಲಯದ 3 ಈಶಾನ್ಯ ರಾಜ್ಯಗಳ ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿ 180 ರಲ್ಲಿ 46 ಸ್ಥಾನಗಳನ್ನು ಮಾತ್ರ ಗೆದ್ದಿದೆ.

ತ್ರಿಪುರಾದಲ್ಲಿ ಅದರ ಶಾಸಕರು 46 ರಿಂದ 32 ಕ್ಕೆ ಇಳಿದಿದ್ದಾರೆ.

ನಾಗಾಲ್ಯಾಂಡ್‌ನಲ್ಲಿ ಅದು 12 ಸ್ಥಾನಗಳನ್ನು ಗೆಲ್ಲುವ ಮೂಲಕ ಬಹಳ ದೂರದಲ್ಲಿ 2ನೇ ಸ್ಥಾನದಲ್ಲಿದೆ.

ಮೇಘಾಲಯದಲ್ಲಿ ಕೇವಲ 2 ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಗಿ, ಉಳಿದ 58 ಸ್ಥಾನಗಳಲ್ಲಿ ಠೇವಣಿ ಕಳೆದುಕೊಂಡಿತು. ಚಲಾವಣೆಗೊಂಡ ಮತಗಳಲ್ಲಿ ತ್ರಿಪುರಾದಲ್ಲಿ ಬಿಜೆಪಿ ಶೇಕಡಾ 38.97 ಗಳಿಸಿತು. ನಾಗಾಲ್ಯಾಂಡ್‌ನಲ್ಲಿ ಶೇ. 18.81 ಮತ್ತು ಮೇಘಾಲಯದಲ್ಲಿ ಶೇ.9.33.

ಆದಾಗ್ಯೂ, ಸ್ಥಳೀಯ ಪ್ರಾದೇಶಿಕ ಪಕ್ಷಗಳೊಂದಿಗೆ ಅದು ಎಲ್ಲಾ ಮೂರು ರಾಜ್ಯಗಳಲ್ಲಿ ಸರ್ಕಾರದಲ್ಲಿದೆ.

ಪುಣೆ ಜಿಲ್ಲೆಯ ಕಸ್ಬಾ ಪೇಟ್ ವಿಧಾನಸಭಾ ಉಪಚುನಾವಣೆಯಲ್ಲಿ, ಎರಡು ದಶಕಗಳಿಂದ ನಿರಂತರವಾಗಿ ಗೆದ್ದಿದ್ದ ಬಿಜೆಪಿಯ ಹಾಲಿ ಸ್ಥಾನವನ್ನು ಎಂವಿಎ ಯ ಕಾಂಗ್ರೆಸ್ ಅಭ್ಯರ್ಥಿ ವಶಪಡಿಸಿಕೊಂಡರು.

ಪಶ್ಚಿಮ ಬಂಗಾಳದ ಸಾಗರ್ದಿಘಿ ವಿಧಾನಸಭಾ ಉಪಚುನಾವಣೆಯಲ್ಲಿ, ಟಿಎಂಸಿ 2011 ರಿಂದ ಗೆದ್ದುಕೊಂಡು ಬಂದಿದ್ದ ಸ್ಥಾನವನ್ನು ಈ ಬಾರಿ ಕಾಂಗ್ರೆಸ್‌ಗೆ ಸೋತಿದೆ. 2021ರಲ್ಲಿ ಟಿಎಂಸಿ ಈ ಸ್ಥಾನವನ್ನು ಬಿಜೆಪಿಗಿಂತ 50,000 ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿತ್ತು. ಈ ಬಾರಿ ಕಾಂಗ್ರೆಸ್-ಎಡ ಅಭ್ಯರ್ಥಿ ಸುಮಾರು 23,000 ಮತಗಳಿಂದ ಗೆದ್ದು ಪುಟ 14 ಕ್ಕೆ

ಭಾರತೀಯರ ಒಡೆತನದ ಕಡಲಾಚೆಯ 'ಚಿಪ್ಪು' ಕಂಪನಿಗಳ ಬಗ್ಗೆ ಮೋದಿ ಸರ್ಕಾರದ ಬಳಿ ಮಾಹಿತಿಯಿಲ್ಲ?!

ಮಾರ್ಚ್ 21 ರಂದು ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಅವರು ಕೇಳಿದ ಪ್ರಶ್ನೆಗೆ ಉತ್ತರವಾಗಿ "ಭಾರತೀಯ ನಾಗರಿಕರ ಒಡೆತನದ ಕಡಲಾಚೆಯ ಶೆಲ್ ಕಂಪನಿಗಳ ದತ್ತಾಂಶ/ವಿವರಗಳು ಲಭ್ಯವಿಲ್ಲ" ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತವಾಗಿ ತಿಳಿಸಿದ್ದಾರೆ.

ಬ್ರಿಟಾಸ್ ಕೇಳಿರುವ ಪ್ರಶ್ನೆಗಳು ಹೀಗಿದ್ದವು:

ಎ) 'ಅಂತಿಮ ಫಲದಾಯಕ ಮಾಲೀಕತ್ವ'(ಯುಬಿಒ) ವನ್ನು ಭಾರತೀಯ ನಾಗರಿಕರು ಹೊಂದಿರುವ ಕಡಲಾಚೆಯ ಶೆಲ್ ಕಂಪನಿಗಳ ವಿವರಗಳು

ಬಿ) ತೆರಿಗೆ–ಧಾಮ ದೇಶಗಳಲ್ಲಿ ನೋಂದಾವಣೆಗೊಂಡಿರುವ ಕಡಲಾಚೆಯ ಕಂಪನಿಗಳಲ್ಲಿ ಭಾರತೀಯ ನಾಗರಿಕರ ಯುಬಿಒ ವಿವರಗಳನ್ನು ಸಂಗ್ರಹಿಸಲು ಸರ್ಕಾರವು ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳ ವಿವರಗಳು

ಸಿ) ಪನಾಮ ಪೇಪರ್‌ಗಳು, ಪಂಡೋರಾ ಪೇಪರ್‌ಗಳು, ಪ್ಯಾರಡೈಸ್ ಪೇಪರ್‌ಗಳು ಮತ್ತು ಇತರ ಸೋರಿಕೆಗಳ ಮೂಲಕ ಹೆಸರುಗಳು ಪ್ರಕಟಗೊಂಡ ಭಾರತೀಯ ನಾಗರಿಕರ ವಿರುದ್ಧ ತೆಗೆದುಕೊಂಡ ಕ್ರಮಗಳ ಸ್ಥಿತಿ–ಗತಿ

ಡಿ) ಭಾರತೀಯ ನಾಗರಿಕರ ಕಡಲಾಚೆಯ ವ್ಯವಹಾರಗಳನ್ನು ಹಂಚಿಕೊಳ್ಳಲು ವಿದೇಶಿ ಸರ್ಕಾರಗಳ ಕೇಂದ್ರ ಸರ್ಕಾರಕ್ಕೆ ನೀಡಿದ ವಿವರಗಳು ಮತ್ತು

ಇ) ಅದರ ವಿವರಗಳು ಮತ್ತು ಅದರ ಮೇಲೆ ತೆಗೆದುಕೊಂಡ ಕ್ರಮಗಳು."

ಇದಕ್ಕೆ ಸರಕಾರದಿಂದ ದೊರೆತಿರುವ ಉತ್ತರ: "ಹಣಕಾಸು ಸಚಿವಾಲಯವು ನಿರ್ವಹಿಸುವ ಕಾಯಿದೆಗಳಲ್ಲಿ ಕಡಲಾಚೆಯ ಶೆಲ್ ಕಂಪನಿಯ ವ್ಯಾಖ್ಯಾನ ನೀಡಲಾಗಿಲ್ಲ. ಭಾರತೀಯ ನಾಗರಿಕರ ಒಡೆತನದ ಕಡಲಾಚೆಯ ಶೆಲ್ ಕಂಪನಿಗಳಿಗೆ ಸಂಬಂಧಿಸಿದ ದತ್ತಾಂಶಗಳು/ ವಿವರಗಳು ಲಭ್ಯವಿಲ್ಲ."ಇದರಿಂದಾಗಿ ಬ್ರಿಟಾಸ್ ರವರು ತಮ್ಮ ಪ್ರಶ್ನೆಗಳಲ್ಲಿ ಕೇಳಿರುವ 'ನಿರ್ದಿಷ್ಟ ಕ್ರಮಗಳ ವಿವರಗಳನ್ನು ಕೊಡುವ ಪ್ರಶ್ನೆ "ಉದ್ಭವಿಸುವುದಿಲ್ಲ" ಎಂದು ಸರಕಾರದ ಉತ್ತರ ಹೇಳಿದೆ. ಪನಾಮ ಪೇಪರ್ಸ್, ಪ್ಯಾರಡೈಸ್ ಪೇಪರ್ಸ್, ಪಂಡೋರಾ ಪೇಪರ್ಸ್ ಮತ್ತು ಇತರ ಸೋರಿಕೆಯಾದ ದಾಖಲೆಗಳಲ್ಲಿ ಹೆಸರು ಹೊಂದಿರುವ ಭಾರತೀಯರ ಸಂಖ್ಯೆ ಮತ್ತು ವಿವರಗಳನ್ನು ಕೂಡ ಮಂತ್ರಿಗಳ ಉತ್ತರ ತಿಳಿಸಲಿಲ್ಲ.

'ಕಾರ್ಯಪಡೆ' ಸಾಧನೆ ಎಲ್ಲಿ ಹೋಯಿತು?

ಈ ಮೊದಲು ಜೂನ್ 8, 2018ರಲ್ಲಿ ಹಣಕಾಸು ಸಚಿವಾಲಯ ನೀಡಿದ್ದ ಪ್ರಕಟಣೆಯಲ್ಲಿ, ಫೆಬ್ರುವರಿ 2017ರಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ನೇಮಿಸಿದ್ದ ಶೆಲ್ ಕಂಪನಿಗಳನ್ನು ಕುರಿತ ಕಾರ್ಯಪಡೆ ಈ 'ಚಿಪ್ಪು' ಕಂಪನಿಗಳ 'ಪಿಡುಗನ್ನು ತಡೆಯಲು ತಾನೇ ಮುಂದಾಗಿ ಕ್ರಮಗಳನ್ನು ಕೈಗೊಂಡಿದೆ, ಶೆಲ್ ಕಂಪನಿಗಳ ಒಂದು ದತ್ತಾಂಶ ನೆಲೆಯನ್ನು ಕಲೆ ಹಾಕಿರುವುದು ಈ ಕಾರ್ಯಪಡೆಯ ಸಾಧನೆಗಳಲ್ಲಿ ಒಂದು" ಎಂದಿತ್ತು ಎಂಬುದು ಗಮನಾರ್ಹ.

ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೊ(ಪಿಐಬಿ)ದ ಈ ಹೇಳಿಕೆ , ಈ ಕುರಿತಂತೆ ಮೂರು ಪಟ್ಟಿಗಳನ್ನು ತಯಾರಿಸಲಾಗಿದೆ–ದೃಢೀಕರಿಸಿದ ಪಟ್ಟಿ, ವ್ಯುತ್ಪನ್ನ ಪಟ್ಟಿ ಮತ್ತು ಸಂದೇಹಿತ ಪಟ್ಟಿ ಎಂದಿತ್ತು. ಇವುಗಳಲ್ಲಿ ಅನುಕ್ರಮವಾಗಿ 16537, 16,739 ಮತ್ತು 80,670 ಶೆಲ್ ಕಂಪನಿಗಳಿವೆ ಎಂದೂ ಹೇಳಿತ್ತು. ಅಂದರೆ ಒಟ್ಟು 113946 ಶೆಲ್ ಕಂಪನಿಗಳ ದತ್ತಾಂಶ ನೆಲೆಯನ್ನು 2018ರ ವೇಳೆಗೇ ಗುರುತಿಸಿರಲಿಲ್ಲವೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

"ಕೃಪಾಪೋಷಣೆಯನ್ನು ಅಡಗಿಸಿಡಲು"

"ಅದಾನಿಗೆ ತನ್ನ ಕೃಪಾಪೋಷಣೆಯನ್ನು ಅಡಗಿಸಿಡಲು ಮೋದಿ ಸರಕಾರ ಎಂತಹ ಅದ್ಭುತ ಮಟ್ಟಕ್ಕೂ ಹೋಗಬಲ್ಲದು 2018ರಲ್ಲಿ ಶೆಲ್ ಕಂಪನಿಗಳ 'ಪಿಡುಗ'ನ್ನು ನಿಭಾಯಿಸಲು ಒಂದು ಕಾರ್ಯಪಡೆಯನ್ನು ಪ್ರಕಟಿಸಲಾಗುತ್ತದೆ. ಸಂಸತ್ತಿನಲ್ಲಿ ಇಂದು ಸರಕಾರ ತನ್ನ ಬಳಿ ಶೆಲ್ ಕಂಪನಿಯನ್ನು ಗುರುತಿಸುವ ವ್ಯಾಖ್ಯಾನ ಇಲ್ಲ, ಅದರಿಂದಾಗಿ ಮಾಹಿತಿ ಇಲ್ಲ ಎನ್ನುತ್ತದೆ."ಎಂದು ಕುರಿತು ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಇದಲ್ಲದೆ ಎರಡು ವರ್ಷಗಳ ಹಿಂದೆ, ಜುಲೈ 27, 2021ರಂದು ಇದೇ ಸರಕಾರದ ಕಾರ್ಪೊರೇಟ್ ವ್ಯವಹಾರಗಳ ರಾಜ್ಯಮಂತ್ರಿ ರಾಜ್ಯಸಭೆಗೆ ನೀಡಿದ್ದ ಲಿಖಿತ ಉತ್ತರದಲ್ಲಿ 2018–2021 ರ ನಡುವೆ ಅಂತಹ 2,38,223 ಕಂಪನಿಗಳಿವೆ ಎಂದು ಒಪ್ಪಿಕೊಂಡಿತ್ತು ಎಂದೂ ವರದಿಯಾಗಿದೆ.

ಅಂದರೆ ಕಾನೂನಿನಲ್ಲಿ ಚಿಪ್ಪು ಕಂಪನಿ ಬಗ್ಗೆ ನಿರ್ದಿಷ್ಟ ವ್ಯಾಖ್ಯಾನ ಇಲ್ಲದೆಯೇ ಸರಕಾರ ಇವನ್ನು 'ಚಿಪ್ಪು' ಕಂಪನಿಗಳೆಂದು ಗುರುತಿಸಿತೇ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ.

ಲಂಡನ್ನಿನ 'ಫೈನಾನ್ಶಿಯಲ್ ಟೈಮ್ಸ್' ಪತ್ರಿಕೆಯಲ್ಲಿ ಈ ತಿಂಗಳು ಪ್ರಕಟವಾಗಿರುವ ವರದಿಯ ಪ್ರಕಾರ, ಅದಾನಿಯವರ 5.7 ಬಿಲಿಯ ಡಾಲರುಗಳು (ಸುಮಾರು ರೂ 20,000 ಕೋಟಿ) ಎಫ್‌ಡಿಐ ಒಳಹರಿವಿನಲ್ಲಿ 50% ದಷ್ಟು ಈ ಸಮೂಹದೊಂದಿಗೆ "ಸಂಪರ್ಕ ಹೊಂದಿರುವ ಅಪಾರದರ್ಶಕ ಸಾಗರೋತ್ತರ ಘಟಕಗಳಿಂದ" ಬಂದಿದೆ (ದಿ ವೈರ್, ಮಾರ್ಚ್ 26).

ಈ ಹಿನ್ನೆಲೆಯಲ್ಲಿ ಮಾರ್ಚ್ 25 ರಂದು ಈಗ ಲೋಕಸಭೆಯಿಂದ ಅನರ್ಹಗೊಳಿಸಲಾಗಿರುವ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಪತ್ರಿಕಾಗೋಷ್ಠಿಯಲ್ಲಿ "ಅದಾನಿ ಸಮೂಹದಲ್ಲಿ ಯಾರೋ ಶೆಲ್ ಕಂಪನಿಗಳ ಮೂಲಕ 20,000 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದಾರೆ" ಎಂದು ಹೇಳಿರುವುದು ಅದಾನಿ ಪ್ರಶ್ನೆಗೆ ಮತ್ತೊಂದು ಆಯಾಮ ಸೇರಿಸಿದೆ.

ಇದು ಅಮೃತ ಕಾಲ



ಭ್ರಷ್ಟಾಚಾರದಲ್ಲಿ ತೊಡಗಿರುವ ಎಲ್ಲ ಮುಖಗಳೂ ಒಟ್ಟುಗೂಡಿವೆ- ಪ್ರಧಾನಿ
ಇಲ್ಲಾ ಸಾರ್! ನಾವು ಇನ್ನೂ ನಿಮ್ಮ ಜೊತೆಗಿದ್ದೇವೆ !
-ಕರ್ನಾಟಕ ಬಿಜೆಪಿ
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕಾನೂನು ಮಂತ್ರಿಗಳು ತನ್ನ ಹುದ್ದೆಯ ಘನತೆಯನ್ನು ಕಾಯ್ದುಕೊಳ್ಳಬೇಕು –323 ಹಿರಿಯ ನ್ಯಾಯವಾದಿಗಳ ಜಂಟಿ ಹೇಳಿಕೆ

ಸರ್ಕಾರವನ್ನು ಟೀಕಿಸಿದ್ದಾರೆ ಎಂದ ಮಾತ್ರಕ್ಕೇ ಯಾವುದೇ ವ್ಯಕ್ತಿಯ ದೇಶಪ್ರೇಮಕ್ಕೆ ಮಸಿ ಬಳೆಯುವ ಅಧಿಕಾರವನ್ನು ಸರಕಾರದ ಉನ್ನತ ಕಾರ್ಯನಿರ್ವಾಹಕರಿಗೆ ನೀಡಲಾಗಿಲ್ಲ, ಕೆಲವು ನಿವೃತ್ತ ಹಿರಿಯ ನ್ಯಾಯಾಧೀಶರ ಬಗ್ಗೆ ಕೇಂದ್ರ ಕಾನೂನು ಮಂತ್ರಿಗಳ ಟೀಕೆಯನ್ನು ಸಾರ್ವಜನಿಕವಾಗಿ ಹಿಂತೆಗೆದುಕೊಳ್ಳಬೇಕು ಎಂದು ದೇಶದ ಹಿರಿಯ ನ್ಯಾಯವಾದಿಗಳು ಆಗ್ರಹಿಸಿದ್ದಾರೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಸರಕಾರವನ್ನು ಟೀಕಿಸುವ ಕೆಲವು ನಿವೃತ್ತ ನ್ಯಾಯಮೂರ್ತಿಗಳು ಭಾರತ ವಿರೋಧಿಗಳು ಎಂದು ಹೇಳಿರುವುದನ್ನು, ದೇಶದ 300ಕ್ಕೂ ಹೆಚ್ಚು ಹಿರಿಯ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ವಕೀಲರು ಖಂಡಿಸಿದ್ದಾರೆ. **"ಸರಕಾರದ ಬಗ್ಗೆ ಟೀಕೆ ರಾಷ್ಟ್ರದ ವಿರುದ್ಧವೂ ಅಲ್ಲ, ದೇಶಪ್ರೇಮವಿಲ್ಲದ್ದೂ ಅಲ್ಲ, 'ಭಾರತ ವಿರೋಧಿ'ಯೂ ಅಲ್ಲ"**ಎಂದು ಅವರು ಒಂದು ಜಂಟಿ ಹೇಳಿಕೆಯಲ್ಲಿ ಕಾನೂನು ಸಚಿವರಿಗೆ ನೆನಪಿಸಿದ್ದಾರೆ.

ಇತ್ತೀಚೆಗೆ ಒಂದು ಮಾಧ್ಯಮ ಸಮಾವೇಶದಲ್ಲಿ ಸಚಿವರು ಕೆಲವು ನಿವೃತ್ತ 'ಸಕ್ರಿಯ' ನ್ಯಾಯಾಧೀಶರು "ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸಲು ಪ್ರಯತ್ನಿಸುತ್ತಿದ್ದಾರೆ" ಎಂದು ಹೇಳಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಈ ಹಿರಿಯ ನ್ಯಾಯವಾದಿಗಳು "ವಿಮರ್ಶೆ ಮಾಡುವವರನ್ನು, ಅವರ ಹೆಸರು ನಮೂದಿಸದೆ, ಎಲ್ಲರೂ ನ್ಯಾಯಾಂಗ ಪ್ರತಿಪಕ್ಷಗಳ ಪಾತ್ರ ವಹಿಸಬೇಕು ಎನ್ನುವ ಭಾರತ–ವಿರೋಧಿ ಗ್ಯಾಂಗ್" ಎನ್ನುವ ಮೂಲಕ ಮತ್ತು "ದೇಶದ ವಿರುದ್ಧ ಕೆಲಸ ಮಾಡುವವರು ಬೆಲೆ ತೆರುತ್ತಾರೆ" ಎಂದು ಈ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಗೆ ತೀವ್ರ ಬೆದರಿಕೆಯನ್ನೂ ಹಾಕುವ ಮೂಲಕ **ಸಚಿವರು ಸಂವಿಧಾನಾತ್ಮಕ ಔಚಿತ್ಯದ ಎಲ್ಲ ಮಿತಿಗಳನ್ನು ಉಲ್ಲಂಘಿಸಿದ್ದಾರೆ** ಎಂದು ಖೇದ ವ್ಯಕ್ತಪಡಿಸಿದ್ದಾರೆ.

ಸಚಿವರ ಹೇಳಿಕೆಯನ್ನು ಖಂಡಿಸುತ್ತ "ಪ್ರಸಕ್ತ ಸರ್ಕಾರವು ರಾಷ್ಟ್ರವಲ್ಲ ಮತ್ತು ರಾಷ್ಟ್ರವು ಸರ್ಕಾರವಲ್ಲ" ಎಂದು ನ್ಯಾಯವಾದಿಗಳ ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ ಎಂದು 'ಲೈವ್ ಲಾ' ವರದಿ ಹೇಳಿದೆ. **"ನಮ್ಮ ಸಾಂವಿಧಾನಿಕ ವ್ಯವಸ್ಥೆಯಲ್ಲಿ, ಸರ್ಕಾರವನ್ನು ಟೀಕಿಸುವ ಜಾಗವನ್ನು ಸಂಸತ್ತು ಅಥವಾ ಶಾಸಕಾಂಗಗಳಿಗೇ ಮೀಸಲಿಟ್ಟಿಲ್ಲ, ಅಥವಾ ಯಾವುದೇ ನಿರ್ದಿಷ್ಟ ವರ್ಗದ ವ್ಯಕ್ತಿಗಳಿಗೆ ಸೀಮಿತಗೊಳಿಸಿಲ್ಲ ಅಥವಾ ಬೇರೆ ಯಾರನ್ನೂ ಆಗಲಿ ವಿಮರ್ಶಿಸದಂತೆ ನಿರ್ಬಂಧಿಸಲಾಗಿಲ್ಲ.** ಆದ್ದರಿಂದ, ಸರ್ಕಾರವನ್ನು ಟೀಕಿಸಿದ್ದಾರೆ ಎಂದ ಮಾತ್ರಕ್ಕೇ ಯಾವುದೇ ವ್ಯಕ್ತಿಯ ದೇಶಪ್ರೇಮಕ್ಕೆ ಮಸಿ ಬಳೆಯುವ ಅಧಿಕಾರವನ್ನು ಸರಕಾರದ ಉನ್ನತ ಕಾರ್ಯನಿರ್ವಾಹಕರಿಗೆ ನೀಡಲಾಗಿಲ್ಲ" ಎಂದು ಸಚಿವರಿಗೆ ನೆನಪಿಸಿರುವ ಈ ಹೇಳಿಕೆ, ಕಾನೂನು ಸಚಿವರು ತಮ್ಮ ಹೇಳಿಕೆಗಳನ್ನು ಸಾರ್ವಜನಿಕವಾಗಿ ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿದೆ.

ಸರಕಾರದ ಕಾನೂನು ಸಚಿವರು "ಪ್ರಭುತ್ವದ ಕಾರ್ಯಾಂಗ ಮತ್ತು ನ್ಯಾಯಾಂಗ ವಿಭಾಗಗಳ ನಡುವಿನ ಸೇತುವೆ"ಯಾಗಿರಬೇಕು, ಆದ್ದರಿಂದ ಅವರು ಸಾರ್ವಜನಿಕ ಸಂವಾದದಲ್ಲಿ ಒಂದು ಘನತೆಯನ್ನು ಕಾಯ್ದುಕೊಳ್ಳಬೇಕು ಎಂದು ಹಿರಿಯ ನ್ಯಾಯವಾದಿಗಳಾದ ಇಕ್ಬಾಲ್ ಚಾಗ್ಲೆ, ರಾಜು ರಾಮಚಂದ್ರನ್, ಕಪಿಲ್ ಸಿಬಲ್, ದುಷ್ಯಂತ್ ದವೆ, ಚಂದರ್ ಉದಯ್ ಸಿಂಗ್, ಇಂದಿರಾ ಜೈಸಿಂಗ್, ರೆಬೆಕಾ ಜಾನ್, ನಿತ್ಯಾ ರಾಮಕೃಷ್ಣನ್ ಸೇರಿದಂತೆ 323 ಮಂದಿ ಸಹಿ ಹಾಕಿರುವ ಈ ಹೇಳಿಕೆ ರಿಜಿಜು ಅವರಿಗೆ ಸಲಹೆ ಮಾಡಿದೆ.



ದಿಲ್ಲಿ-ಕರ್ನಾಟಕ ವಿಮಾನ ಹಾರಾಟಗಳ ನಡುವೆ ಭಾಷಣದ ಬಲೂನಿಗೆ ಜಾಗ ಸಿಗಬಹುದೇ?
ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ದ್ವೇಷ ಭಾಷಣಗಳ ಬಗ್ಗೆ 'ಪ್ರಭುತ್ವದ ಮೌನ'–ಸುಪ್ರಿಂ ಕೋರ್ಟ್ ತರಾಟೆ

ಅಲ್ಪ ಸಂಖ್ಯಾತರ ವಿರುದ್ಧ ದ್ವೇಷ ಭಾಷಣಗಳನ್ನು ಕುರಿತಂತೆ 'ಪ್ರಭುತ್ವವು ಮೌನವಾಗಿರುವುದಾದರೆ ನಮಗೆ ಪ್ರಭುತ್ವವಾದರೂ ಏಕೆ ಬೇಕು?' ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಿರುವ ಪೀಠ ಸರ್ಕಾರಗಳನ್ನು ತರಾಟೆಗೆ ತಗೊಂಡಿದೆ.

ಘನತೆ ಎಂಬುದು ಬಹಳ ಮಹತ್ವದ್ದು, ಅದನ್ನು ಸತತವಾಗಿ ನೆಲಸಮ ಮಾಡಲಾಗುತ್ತಿದೆ...ಪಾಕಿಸ್ತಾನಕ್ಕೆ ಹೋಗಿ ಎಂಬಂತಹ ಹೇಳಿಕೆಗಳನ್ನು ನೋಡಿ... ನಾವು ಮಹಾಶಕ್ತಿಯಾಗಬೇಕಾದರೆ ಮೊದಲಿಗೆ ನಮಗೆ ಕಾನೂನಿನ ಆಳ್ವಿಕೆ ಇರಬೇಕು. ನಾವೆಂದೂ ದ್ವೇಷದ ಮಟ್ಟಕ್ಕೆ ಇಳಿಯಬಾರದು. ಬೌದ್ಧಿಕ ಕೊರತೆ ಇದ್ದರೆ ನಾವೆಂದೂ ಜಗತ್ತಿನಲ್ಲಿ ಮೊದಲ ಸ್ಥಾನಕ್ಕೆ ಏರಲಾರೆವು. ಬೌದ್ಧಿಕ ಕೊರತೆ ಬರುವುದು ಅಸಹಿಷ್ಣುತೆ, ಜ್ಞಾನದ ಕೊರತೆ ಮತ್ತು ಶಿಕ್ಷಣದ ಕೊರತೆ ಇದ್ದಾಗ ಎಂದು ನ್ಯಾಯಮೂರ್ತಿಗಳು ಕೇಂದ್ರ ಸರಕಾರ ಮತ್ತು ಮಹಾರಾಷ್ಟ್ರ ಸರಕಾರದ ವಕೀಲರುಗಳ ವಾದಗಳಿಗೆ ಪ್ರತಿಯಾಗಿ ಹೇಳಿದರು.



ಹೇಳಲು ಏನೂ ಇಲ್ಲದ ಮಂದಿ ಇಂತಹ ಭಾಷಣಗಳನ್ನು ಮಾಡುತ್ತಿದ್ದಾರೆ. ನಾವೆತ್ತ ಸಾಗಿದ್ದೇವೆ ಎಂದು ನ್ಯಾ.ಬಿ.ವಿ. ನಾಗರತ್ನ ಖೇದದಿಂದ ಕೇಳಿದರೆ, ನ್ಯಾ. ಕೆ.ಎಂ. ಜೋಸೆಫ್, ರಾಜಕಾರಣಿಗಳು ಧರ್ಮವನ್ನು ಬಳಸಿಕೊಳ್ಳುವದರಿಂದಲೇ ಹೀಗಾಗುತ್ತಿರುವುದು, ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಿದ ಕೂಡಲೇ ಇದು ನಿಲ್ಲುತ್ತದೆ ಎಂದು ಹೇಳಿದರು.

ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಯ ಪ್ರಚಾರ ಆರಂಭವಾಗುವ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ಮಾತುಗಳಿಗೆ ಗೌರವ ಸಿಗುತ್ತದೆಯೇ ಕಾದು ನೋಡಬೇಕಾಗಿದೆ.



ಅಮೆರಿಕದ ಬ್ಯಾಂಕುಗಳು ಮುಳುಗಿರುವುದರ ಹಿಂದೆ ಏನಿದೆ?

ಎರಡು ಅಮೆರಿಕದ ಬ್ಯಾಂಕುಗಳ ಕುಸಿತ ಇಡೀ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಒಂದು ವೈರುಧ್ಯವನ್ನು ಬಿಂಬಿಸುತ್ತದೆ. ಬಂಡವಾಳಶಾಹಿಯ ಅಡಿಯಲ್ಲಿ ಹಣದುಬ್ಬರದ ವಿರುದ್ಧ ಹೋರಾಡುವ ಏಕೈಕ ಮಾರ್ಗವೆಂದರೆ ನಿರುದ್ಯೋಗವನ್ನು ಸೃಷ್ಟಿಸುವುದೇ ಆಗಿದೆ ಮತ್ತು ಹಣಕಾಸು ಬಂಡವಾಳದ ಪ್ರಾಬಲ್ಯದ ಇಂದಿನ ದಿನಗಳಲ್ಲಿ ಸಾಮಾನ್ಯವಾಗಿ ಈ ಕಾರ್ಯವನ್ನು ಬಡ್ಡಿ ದರಗಳ ಏರಿಕೆಯ ಮೂಲಕವೇ ಸಾಧಿಸಲಾಗುತ್ತದೆ, ಎಲ್ಲ ಸರಕಾರಗಳು ಇದನ್ನೇ ಒಂದು ಅಧಿಕೃತ ನೀತಿಯಾಗಿ ಅಳವಡಿಸಿಕೊಂಡಿವೆ. ಆದರೆ ಹಣಕಾಸು ನೀತಿಯಲ್ಲಿನ ಈ ತರ್ಕಹೀನ ನಿಲುವಿನಿಂದಾಗಿ ಅಮೆರಿಕದ ಬ್ಯಾಂಕಿಂಗ್ ವ್ಯವಸ್ಥೆಯಷ್ಟೇ ಅಲ್ಲ, ಇಡೀ ಬಂಡವಾಳಶಾಹಿ ಜಗತ್ತಿನ ಬ್ಯಾಂಕಿಂಗ್ ವ್ಯವಸ್ಥೆಯು ಅಪಾಯಕ್ಕೊಳಗಾಗಿದೆ. ಇತ್ತ ಯುರೋಪಿನಾದ್ಯಂತ ನಡೆಯುತ್ತಿರುವ ಕಾರ್ಮಿಕರ ಪ್ರತಿಭಟನೆಗಳು ಬಂಡವಾಳಶಾಹಿಯು ಅದರ ನವ ಉದಾರವಾದಿ ಹಂತದಲ್ಲಿ ಬಿಕ್ಕಟ್ಟಿಗೆ ಸಿಲುಕಿ ದಾರಿಗಾಣದ ಸ್ಥಿತಿ ತಲುಪಿರುವುದನ್ನು ಎತ್ತಿ ತೋರಿಸುತ್ತಿವೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಸಿಲಿಕಾನ್ ವ್ಯಾಲಿ ಬ್ಯಾಂಕ್ (ಎಸ್‌ವಿಬಿ) ಮತ್ತು ಸಿಗ್ನೇಚರ್ ಬ್ಯಾಂಕ್ ಎಂಬ ಎರಡು ಅಮೆರಿಕದ ಬ್ಯಾಂಕುಗಳು ಇತ್ತೀಚೆಗೆ ಮುಳುಗಿವೆ. ಅವು ಏಕೆ ಮುಳುಗಿದವು ಎಂಬುದು ಈಗ ನಿಗೂಢವಾಗಿ ಉಳಿದಿಲ್ಲ. ಮಾತ್ರವಲ್ಲ, ಬಂಡವಾಳಶಾಹಿ ಜಗತ್ತಿನ ಇಡೀ ಬ್ಯಾಂಕಿಂಗ್ ವ್ಯವಸ್ಥೆಯೇ ತೊಂದರೆಯಲ್ಲಿ ಸಿಲುಕಿದೆ ಎಂಬುದೂ ಸಹ ಈಗ ನಿಗೂಢವಾಗಿ ಉಳಿದಿಲ್ಲ. ಬ್ಯಾಂಕಿಂಗ್ ವ್ಯವಸ್ಥೆಯು ಕೆಲವು ತೊಂದರೆಗಳಿಗೆ ಸಿಲುಕಿಕೊಂಡ ನಂತರ, ಅದರ ಆಸ್ತಿಗಳು "ನಂಜು" ಆಸ್ತಿಗಳಾಗುತ್ತವೆ. ಒಂದು ಸಾಂಕ್ರಾಮಿಕವು ಹರಡುವ ರೀತಿಯಲ್ಲಿ "ಸರಣಿ ಪರಿಣಾಮ"ಕ್ಕೆ ಒಳಗಾಗುತ್ತವೆ. ಅಸಲಿ ಪ್ರಶ್ನೆಯೆಂದರೆ: ಅಮೆರಿಕದ ಬಂಡವಾಳಶಾಹಿ ಬ್ಯಾಂಕಿಂಗ್ ವ್ಯವಸ್ಥೆಯು ಒಂದು ತೀವ್ರ ಒತ್ತಡದ ಪರಿಸ್ಥಿತಿಗೆ ಒಳಗಾಗಿದೆ, ಹೇಗೆ ಎಂಬುದು. ಈ ಎರಡು ಬ್ಯಾಂಕುಗಳ ಕುಸಿತವು, ಅದರಲ್ಲೂ ವಿಶೇಷವಾಗಿ ಎಸ್‌ವಿಬಿಯ ಕುಸಿತವು ಕೇವಲ ಆ ಬ್ಯಾಂಕಿನ ಆಂತರಿಕ ಸಮಸ್ಯೆಯಾಗಿ ಉಳಿದಿಲ್ಲ. ಅದೊಂದು ವಿದ್ಯಮಾನವೇ ಹೌದು. ಈ ವಿದ್ಯಮಾನವು ಇಡೀ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಒಂದು ವೈರುಧ್ಯವನ್ನು ಪ್ರತಿಬಿಂಬಿಸುತ್ತದೆ. ಹಾಗಾದರೆ, ಈ ವೈರುಧ್ಯದ ಸ್ವರೂಪವೇನು?

ಈ ಎರಡೂ ಬ್ಯಾಂಕುಗಳ ಕುಸಿತದ ಹಿಂದಿರುವ ಒಂದು ಅಂಶವನ್ನು ಗುರುತಿಸುವುದಾದರೆ, ಅದು ಬಡ್ಡಿ ದರಗಳ ಏರಿಕೆಯೇ. ಇಲ್ಲಿ ನಾವು ಎಸ್‌ವಿಬಿಯ ಪ್ರಕರಣವನ್ನು ಮಾತ್ರ ತೆಗೆದುಕೊಳ್ಳೋಣ. ಏಕೆಂದರೆ, ಇದು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ವೈರುಧ್ಯವನ್ನು ಹೆಚ್ಚು ಸ್ಪಷ್ಟವಾಗಿ ತೋರಿಸುತ್ತದೆ. ಸಿಗ್ನೇಚರ್ ಬ್ಯಾಂಕ್‌ನ ಕುಸಿತದ ಪ್ರಕರಣವು ಮುಖ್ಯವಾಗಿ ಕುಖ್ಯಾತ ಮತ್ತು ಅಸ್ಥಿರ ಕ್ರಿಪ್ಟೋ–ಕರೆನ್ಸಿಗಳೊಂದಿಗೆ ಸಂಬಂಧಿಸಿದೆ.

ಬಡ್ಡಿ ದರಗಳ ಏರಿಕೆಯು ಬಾಂಡ್(ಸಾಲಪತ್ರ)ಗಳ ಬೆಲೆಗಳನ್ನು ಇಳಿಕೆ ಮಾಡುವ ಪರಿಣಾಮ ಹೊಂದಿರುತ್ತದೆ. (ಹಣದುಬ್ಬರದ ಪರಿಸ್ಥಿತಿಗನುಗುಣವಾಗಿ ಕೇಂದ್ರ ಬ್ಯಾಂಕ್‌ಗಳು ಬಡ್ಡಿ ದರಗಳನ್ನು ಆಗಾಗ ಏರಿಕೆ–ಇಳಿಕೆ ಮಾಡುತ್ತವೆ. ಸರ್ಕಾರಗಳು ಸಾಲ ಎತ್ತಲು ಒಂದು ವಾರದಿಂದ ಹಿಡಿದು ಮೂವತ್ತು ನಲವತ್ತು ವರ್ಷಗಳ ಅವಧಿಯ, ನಿರ್ದಿಷ್ಟ ಬಡ್ಡಿ ದರ ಹೊಂದಿದ, ಸಾಲಪತ್ರಗಳನ್ನು ಅಥವ ಬಾಂಡ್‌ಗಳನ್ನು ಬಿಡುಗಡೆ ಮಾಡುತ್ತವೆ. ನಂತರ, ಈ ಬಾಂಡ್‌ಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತವೆ–ಅನು). ಬಾಂಡ್ ಬೆಲೆಗಳ ಬಗ್ಗೆ ಹೇಳುವುದಾದರೆ, ಒಂದು ನಿರ್ದಿಷ್ಟ ಅವಧಿಯ ಬಾಂಡ್ ತನ್ನ ಜೀವಿತಾವಧಿಯಲ್ಲಿ ಒಂದು ನಿರ್ದಿಷ್ಟ ಮೊತ್ತದ ಬಡ್ಡಿಯನ್ನು ಗಳಿಸುತ್ತದೆ. ಆದರೆ, ಕಾರಣಾಂತರಗಳಿಂದ ಅದನ್ನು ಇಂದು ಮಾರಲಾಗಿದೆ ಎಂದು ಭಾವಿಸೋಣ. ಅದರ ಮಾರಾಟದ ಬೆಲೆಯನ್ನು ನಿರ್ಧರಿಸುವ ವಿಧಾನವೆಂದರೆ, ಅದರ ಪ್ರಸ್ತುತ ಗಳಿಕೆಯಲ್ಲಿ ಒಂದಿಷ್ಟು ಡಿಸ್ಕೌಂಟ್ ತೆಗೆದ ನಂತರದ ಉಳಿಯುವ ಮೊತ್ತವೇ ಅದರ ಇಂದಿನ ಬೆಲೆಯಾಗುತ್ತದೆ. ಬಡ್ಡಿ ದರಗಳು ಒಂದು ವೇಳೆ ಏರಿಕೆಯಾದರೆ, ಆಗ ಬಾಂಡ್ ಗಳಿಕೆಯು ಇಳಿಕೆಯಾಗುತ್ತದೆ ಮತ್ತು ಅದರ ಮಾರಾಟದ ಬೆಲೆಯೂ ಇಳಿಕೆಯಾಗುತ್ತದೆ. ಎಲ್ಲ ಬ್ಯಾಂಕುಗಳೂ ನಿರ್ದಿಷ್ಟ ಉದ್ದೇಶಕ್ಕಾಗಿ ಬಾಂಡ್‌ಗಳ ಮೇಲೆ ಹೂಡಿಕೆ ಮಾಡುತ್ತವೆ ಮತ್ತು ಅದೊಂದು ಬ್ಯಾಂಕಿಂಗ್ ಅವಶ್ಯಕತೆಯೂ ಹೌದು. ಆದರೆ, ಬಡ್ಡಿ ದರಗಳು ಏರಿಕೆಯಾದಾಗ, ಮಾರುಕಟ್ಟೆಯಲ್ಲಿ ಬಾಂಡ್ ಬೆಲೆಗಳು ಇಳಿಯುತ್ತವೆ. ಪರಿಣಾಮವಾಗಿ, ಬ್ಯಾಂಕಿನ ಆಸ್ತಿಗಳ (ಸಾಲಗಳ) ಮೌಲ್ಯವು ಅದರ ಬಾಧ್ಯತೆಗಳಿಗೆ (ಠೇವಣಿಗಳಿಗೆ) ಹೋಲಿಸಿದರೆ ಇಳಿಕೆಯಾಗಿರುತ್ತದೆ. ಈ ವಿದ್ಯಮಾನವು ಬ್ಯಾಂಕ್‌ಅನ್ನು ಒಂದು ರೀತಿಯ ಒತ್ತಡಕ್ಕೆ ಸಿಲುಕಿಸುತ್ತದೆ.



ಈ ರೀತಿಯ ಒತ್ತಡಕ್ಕೆ ಸಿಲುಕಿದ ಬ್ಯಾಂಕ್ ಆ ಒತ್ತಡವನ್ನು ನಿವಾರಿಸಿಕೊಳ್ಳಲು ಮಾಡುವ ಯಾವುದೇ ಪ್ರಯತ್ನವು ತಾನು ಒತ್ತಡದಲ್ಲಿ ಸಿಲುಕಿಕೊಂಡಿದ್ದೇನೆ ಎಂಬುದನ್ನು ಪ್ರಪಂಚದ ಮುಂದೆ ಮುಕ್ತವಾಗಿ ಒಪ್ಪಿಕೊಂಡಂತೆ ಬಿಂಬಿತವಾಗುತ್ತದೆ ಮತ್ತು ಆ ಬ್ಯಾಂಕಿನೊಂದಿಗಿನ ತಮ್ಮ ಲೆಕ್ಕವನ್ನು ಚುಕ್ತಾ ಮಾಡಿಕೊಳ್ಳುವಂತೆ ಕೊಟ್ಟ ಸೂಚನೆಯೂ ಆಗುತ್ತದೆ. ಆಗ ಷೇರು ಮಾರುಕಟ್ಟೆಯಲ್ಲಿ ಆ ಬ್ಯಾಂಕಿನ ಷೇರುಗಳ ಮೌಲ್ಯವು ಇಳಿಯುತ್ತದೆ. ಈ ಇಳಿಕೆಯು ಠೇವಣಿದಾರರಲ್ಲಿ ಆತಂಕ ಹುಟ್ಟಿಸುತ್ತದೆ. ನಂತರ ತಮ್ಮ ಠೇವಣಿಯ ಹಣವನ್ನು ಹಿಂತೆಗೆದುಕೊಳ್ಳಲು ಎಲ್ಲ ಠೇವಣಿದಾರರೂ ಬ್ಯಾಂಕಿನತ್ತ ಧಾವಿಸುತ್ತಾರೆ. ಈ ವಿದ್ಯಮಾನವು ಬ್ಯಾಂಕಿನ ಕುಸಿತಕ್ಕೆ ಕಾರಣವಾಗುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಒಂದು ಬ್ಯಾಂಕ್ ಈ ರೀತಿಯ ಒತ್ತಡಕ್ಕೆ ಒಳಗಾದಾಗ, ಅದು ಏನೇ ಕ್ರಮ ಕೈಗೊಂಡರೂ ಸಹ, ಅದರ ಭವಿಷ್ಯವು ಮುಗಿದಂತೆಯೇ ಸರಿ. ಒಂದು ವೇಳೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡದಿದ್ದರೆ, ಕುಸಿತದ ಆಯ್ಕೆಯನ್ನು ತಾನೇ ಮಾಡಿಕೊಂಡಂತಾಗುತ್ತದೆ. ಕುಸಿತವನ್ನು ತಪ್ಪಿಸುವ ಕ್ರಮಗಳನ್ನು ಕೈಗೊಳ್ಳಲು ಪ್ರಯತ್ನಿಸಿದರೂ ಸಹ, ಕುಸಿತದ ಸಾಧ್ಯತೆಗಳು ಇದ್ದೇ ಇರುತ್ತವೆ. ಆದ್ದರಿಂದ, ಅಂತಹ ಸಂದರ್ಭಗಳಲ್ಲಿ ಕುಸಿತದ ಹೊಣೆಗಾರಿಕೆಯನ್ನು ಬ್ಯಾಂಕಿನ ಮೇಲೆ ಹೊರಿಸುವುದು ಉಚಿತವಾಗಲಾರದು. ಆದ್ದರಿಂದ, ಈ ಕುಸಿತವನ್ನು ಬ್ಯಾಂಕಿನಿಂದ ಆಚೆ ಇರುವ ಸ್ಥೂಲ ಆರ್ಥಿಕ ಅಂಶಗಳ ಮೂಲಕ ವಿವರಿಸಬೇಕಾಗುತ್ತದೆ.

ಬಡ್ಡಿ ದರಗಳ ಹೆಚ್ಚಳವು ಬ್ಯಾಂಕ್ ಕುಸಿತವನ್ನು ಪ್ರಚೋದಿಸುತ್ತದೆ ಎಂಬುದನ್ನು ಈ ಮೊದಲು ಸೂಚಿಸಲಾಗಿತ್ತು. ಆದರೆ ಇದು ನಿಜವಲ್ಲ. ಕೇಂದ್ರ ಬ್ಯಾಂಕ್ ನಿರ್ಧರಿಸುವ ಬಡ್ಡಿ ದರ ಏರಿಳಿಕೆಗಳು ಸಾಮಾನ್ಯವಾಗಿ ಸಣ್ಣ ಬದಲಾವಣೆಗಳಾಗಿ ಸಂಭವಿಸುತ್ತವೆ. ಬಡ್ಡಿ ದರದ ಏರಿಕೆಯು ಸಣ್ಣ ಪ್ರಮಾಣದಲ್ಲಿದ್ದರೆ ಬ್ಯಾಂಕುಗಳು ಅದನ್ನು ಸಾಮಾನ್ಯವಾಗಿ ನಿಭಾಯಿಸುತ್ತವೆ ಮತ್ತು ಈ ಏರಿಕೆಯಿಂದಾದ ಒತ್ತಡವು "ಮಾರುಕಟ್ಟೆ"ಯಲ್ಲಿ ಯಾವುದೇ ಊಹಾಪೋಹಗಳಿಗೆ ಅವಕಾಶವಾಗದಂತೆ ಪರಿಸ್ಥಿತಿಯನ್ನು ನಿಭಾಯಿಸುತ್ತವೆ ಕೂಡ. ಆದರೆ, ಕೇಂದ್ರ ಬ್ಯಾಂಕ್ ಬಡ್ಡಿ ದರವನ್ನು ಇದ್ದಕ್ಕಿದ್ದಂತೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದಾಗ, ಬ್ಯಾಂಕುಗಳು ತಮ್ಮ ಆಸ್ತಿಗಳು(ಸಾಲಗಳು) ಮತ್ತು ಬಾಧ್ಯತೆಗಳ(ಠೇವಣಿಗಳ) ನಡುವೆ ಒಂದು ಸಮತೋಲವನ್ನು ಸಾಧಿಸುವುದು ಸಾಧ್ಯವಾಗುವುದಿಲ್ಲ.

ಇತ್ತೀಚೆಗೆ ಅಮೆರಿಕಾದಲ್ಲಿ ಬಡ್ಡಿ ದರವನ್ನು ಗಣನೀಯ ಮಟ್ಟದಲ್ಲಿ ಹೆಚ್ಚಿಸಲಾಗಿದೆ. ಫೆಬ್ರವರಿ 2022ರಲ್ಲಿ ಶೇ. 0.25ರ ಮಟ್ಟದಲ್ಲಿದ್ದ ಬಡ್ಡಿ ದರವನ್ನು ಫೆಬ್ರವರಿ 2023ರ ವೇಳೆಗೆ ಶೇ. 4.75ಕ್ಕೆ ಏರಿಸಲಾಗಿದೆ. ಇಷ್ಟು ಸಣ್ಣ ಅವಧಿಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಹೆಚ್ಚಳ ಮಾಡಿದಾಗ, ತಮ್ಮ ಆಸ್ತಿಗಳು(ಸಾಲಗಳು) ಮತ್ತು ಬಾಧ್ಯತೆಗಳನ್ನು (ಠೇವಣಿಗಳನ್ನು) ಸುಗಮವಾಗಿ ನಿರ್ವಹಿಸುವುದು ಬ್ಯಾಂಕುಗಳಿಗೆ ಅಸಾಧ್ಯವಾಗುತ್ತದೆ. ಆದ್ದರಿಂದ, ನಿಜ ಪ್ರಶ್ನೆಯೆಂದರೆ: ಫೆಡರಲ್ ರಿಸರ್ವ್ ಬೋರ್ಡ್ (ಅಮೆರಿಕದ ಕೇಂದ್ರ ಬ್ಯಾಂಕ್) ಬಡ್ಡಿ ದರಗಳನ್ನು ಈ ರೀತಿಯಲ್ಲಿ ಹೆಚ್ಚಿಸುತ್ತಿದೆ, ಏಕೆ?



ಈ ಪ್ರಶ್ನೆಗೆ ಹೇಳಬಹುದಾದ ಸರಳ ಉತ್ತರವೆಂದರೆ, ನವ ಉದಾರವಾದದ ಅಡಿಯಲ್ಲಿ, ಅರ್ಥವ್ಯವಸ್ಥೆಯಲ್ಲಿ ಸರ್ಕಾರದ ಮಧ್ಯಪ್ರವೇಶಕ್ಕಾಗಿ ಲಭ್ಯವಿರುವ ಏಕೈಕ ಅಸ್ತ್ರವೆಂದರೆ ಹಣಕಾಸು ನೀತಿಯೇ. ಎರಡನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಬಹಳ ವರ್ಷಗಳ ಕಾಲ ಸರ್ಕಾರಗಳಿಗೆ ಮಧ್ಯಪ್ರವೇಶಕ್ಕಾಗಿ ಪ್ರಾಥಮಿಕ ಸಾಧನವಾಗಿದ್ದ ವಿತ್ತೀಯ ನೀತಿಯು ನವ ಉದಾರವಾದದಡಿಯಲ್ಲಿ ಹಿನ್ನೆಲೆಗೆ ಸರಿದಿದೆ. ಜಿಡಿಪಿಯ ಅನುಪಾತದಲ್ಲಿ ತಮ್ಮ ವಿತ್ತೀಯ ಕೊರತೆಗಳ ಮೇಲೆ ಒಂದು ಗರಿಷ್ಠ ಮಿತಿಯನ್ನು ವಿಧಿಸಿಕೊಳ್ಳುವಂತೆ ಜಾಗತಿಕವಾಗಿ ಚಲಿಸುವ ಹಣಕಾಸು ಬಂಡವಾಳವು ಎಲ್ಲ ಸರ್ಕಾರಗಳ ಮೇಲೂ ಒತ್ತಾಯ ಹೇರಿದೆ. ಅದೇ ರೀತಿಯಲ್ಲಿ ಬಂಡವಾಳಗಾರರ ಮೇಲೆ ಮತ್ತು ಶ್ರೀಮಂತರ ಮೇಲೆ ಯಾವುದೇ ತೆರಿಗೆ ವಿಧಿಸುವುದನ್ನೂ ಅದು ಬಯಸುವುದಿಲ್ಲ. ಹಾಗಾಗಿ, ಅರ್ಥವ್ಯವಸ್ಥೆಯಲ್ಲಿ ಚಟುವಟಿಕೆಗಳನ್ನು ಉತ್ತೇಜಿಸಲು ಇರುವ ಏಕೈಕ ಮಾರ್ಗವೆಂದರೆ, ಬಡ್ಡಿ ದರಗಳ ಇಳಿಕೆಯ ಕ್ರಮವೇ.

ಹಾಗೆ ನೋಡಿದರೆ ಅಮೆರಿಕವು ಯಾವುದೇ "ವಿತ್ತೀಯ ಜವಾಬ್ದಾರಿ" ಶಾಸನವನ್ನೂ ಹೊಂದಿಲ್ಲ ಮತ್ತು ಹಣಕಾಸು ಬಂಡವಾಳವು ಕಂಬಿಕೀಳುವ ಭಯದಿಂದಲ್ಲೂ ಅದು ನಿರ್ಬಂಧಿತವಾಗಿಲ್ಲ. ಅಮೆರಿಕದಂತಹ ಒಂದು ಸುರಕ್ಷಿತ ನೆಲೆಯಿಂದ ಹಣಕಾಸು ಬಂಡವಾಳವು ಹಾರಿಹೋಗುವ ಸಾಧ್ಯತೆ ವಿರಳವೇ. ಹಾಗಾಗಿ, ತನ್ನ ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿಡುವ ಒತ್ತಾಯವೇ ಅಮೆರಿಕಾಗೆ ಇಲ್ಲ. ಆದರೆ, ಅಮೆರಿಕದ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು ಅದರ ವಿತ್ತೀಯ ಕೊರತೆಯ ಮಟ್ಟವು ಹೆಚ್ಚಿದಾಗ ಅದು ವಿದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಏಕೆಂದರೆ ಅಮೆರಿಕದ ಆಂತರಿಕ ವೆಚ್ಚಗಳ ಒಂದು ಬಹು ದೊಡ್ಡ ಭಾಗವು ವಿದೇಶದಲ್ಲಿ ಉತ್ಪಾದಿಸುವ ಸರಕುಗಳು ಮತ್ತು ಸೇವೆಗಳಿಗಾಗಿ ಬೇಡಿಕೆಯ ರೂಪದಲ್ಲಿ ಸೋರಿಕೆಯಾಗುತ್ತದೆ ಮತ್ತು ಅಮೆರಿಕದ ವಿದೇಶಿ ಸಾಲವನ್ನು ಹೆಚ್ಚಿಸುತ್ತದೆ. ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ಅಮೆರಿಕ ತನ್ನ ವಿತ್ತೀಯ ಕೊರತೆಯನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿಕೊಂಡಿತ್ತು. ಈ ಅಂಶವೇ ಅಮೆರಿಕದ ಪ್ರಸ್ತುತ ಹಣದುಬ್ಬರದ ಹಿಂದಿರುವ ಕಾರಣವೆಂದು ಕೆಲವರು ಹೇಳುತ್ತಾರೆ. ಕೊರೊನಾ ಸಾಂಕ್ರಾಮಿಕವು ಒಂದು ವಿಶೇಷ ಸಂದರ್ಭವಾಗಿತ್ತು, ನಿಜ. ಆದರೆ, ವಸತಿ ಗುಳ್ಳೆಯ ಕುಸಿತದ ನಂತರದ ಅವಧಿಯಿಂದ ಹಿಡಿದು ಇತ್ತೀಚಿನವರೆಗೂ, ಸುಮಾರು ಹದಿನೈದು ವರ್ಷಗಳ ಕಾಲಾವಧಿಯಲ್ಲಿ, ಅರ್ಥವ್ಯವಸ್ಥೆಯನ್ನು ಉತ್ತೇಜಿಸಲು ಬಳಸಲಾದ ಏಕೈಕ ಸಾಧನವೆಂದರೆ ಬಡ್ಡಿ ದರವೇ. ಅದನ್ನು ಅತ್ಯಂತ ಕೆಳ ಮಟ್ಟಕ್ಕೆ, ಅಂದರೆ, ವಾಸ್ತವವಾಗಿ ಶೂನ್ಯದ ಹತ್ತಿರದ ಮಟ್ಟಕ್ಕೆ ಇಳಿಸಲಾಗಿತ್ತು.

ಅಮೆರಿಕದ ವಸತಿ ಗುಳ್ಳೆಗಳು 2008ರಲ್ಲಿ ಸಿಡಿದವು. 2009ರ ಅಂತ್ಯದಿಂದ ಹಿಡಿದು 2022ರವರೆಗೆ–2016 ಮತ್ತು 2020ರ ನಡುವಿನ ಒಂದು ಸಣ್ಣ ಅವಧಿಯಲ್ಲಿ ಹಂತ ಹಂತವಾಗಿ ಬಡ್ಡಿ ದರವನ್ನು ಗರಿಷ್ಠ ಶೇ.2ರ ವರೆಗೆ ಏರಿಸಿದ ಅವಧಿಯನ್ನು ಹೊರತುಪಡಿಸಿದರೆ– ಫೆಡರಲ್ ಫಂಡ್ಸ್ ದರವು ಹೆಚ್ಚು ಕಡಿಮೆ ಶೇ. 0.25ಕ್ಕೇ ಅಂಟಿಕೊಂಡಿತ್ತು. ಅಸಾಧಾರಣ ಅಗ್ಗದ ಹಣ ಲಭ್ಯತೆಯ ಈ ಅಸಾಧಾರಣ ದೀರ್ಘ ಅವಧಿಯು, ತಮ್ಮ ಲಾಭದ ಅಂತರವನ್ನು ಮತ್ತು ಆ ಮೂಲಕ ಬೆಲೆಗಳನ್ನು ಹೆಚ್ಚಿಸುವ ಅವಕಾಶವನ್ನು ಅಮೆರಿಕದ ಶ್ರೀಮಂತ ಕುಳಗಳಿಗೆ **(oligopolists)** ಕಲ್ಪಿಸಿಕೊಟ್ಟಿತು ಮತ್ತು ಅದು

ಪುಟ 14 ಕ್ಕೆ

ಬೆಲೆ ಏರಿಕೆ ಪ್ರತಿಭಟಿಸಿ ಉಡುಪಿಯಲ್ಲಿ ಸಿಪಿಐ(ಎಂ) ಪ್ರತಿಭಟನೆ

ವರದಿ: ವಾ.ಉ.

ಅಡುಗೆ ಅನಿಲ, ಇಂಧನ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಕಡಿಮೆ ಮಾಡಲು ಒತ್ತಾಯಿಸಿ ಹಾಗೂ ಕಾರ್ಮಿಕ ಕಾನೂನು ತಿದ್ದುಪಡಿಗಳನ್ನು ವಿರೋಧಿಸಿ ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿಯ ನೇತೃತ್ವದಲ್ಲಿ ಮಾರ್ಚ್ 25 ರಂದು ಉಡುಪಿಯಲ್ಲಿ ಅಣಕು ಪ್ರದರ್ಶನ ಮೂಲಕ ಪ್ರತಿಭಟನೆ ನಡೆಸಲಾಯಿತು.

ಉಡುಪಿ ಜಿಲ್ಲೆಗೆ ಸರಕಾರಿ ಮೆಡಿಕಲ್ ಕಾಲೇಜೊಂದನ್ನು ಮಂಜೂರು ಮಾಡಬೇಕು. ಬಸ್ ಪ್ರಯಾಣ ದರವನ್ನು ಕಡಿಮೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು. ಸುರತ್ಕಲ್ ಟೋಲ್ ಗೇಟ್ ನಿಲುಗಡೆ ಆಗಿ ಮೂರು ತಿಂಗಳಾದರೂ ಈ ರಸ್ತೆಯಲ್ಲಿ ಹಾದುಹೋಗುವ ಬಸ್ ಪ್ರಯಾಣ ದರವನ್ನು ಕಡಿತ ಮಾಡದಿರುವುದನ್ನು ಖಂಡಿಸಲಾಯಿತು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಪಕ್ಷದ ಹಿರಿಯ ಮುಖಂಡರಾದ ಕೆ. ಶಂಕರ್, ಉಡುಪಿ ವಲಯ ಸಮಿತಿ ಕಾರ್ಯದರ್ಶಿ ಶಶಿಧರ ಗೊಲ್ಲ, ಸದಸ್ಯರಾದ ಕವಿರಾಜ್, ಸಿಐಟಿಯು ಜಿಲ್ಲಾ ಮುಖಂಡರಾದ ಉಮೇಶ್, ವಿದ್ಯಾರಾಜ್, ಕಟ್ಟಡ ಕಾರ್ಮಿಕ ಸಂಘಟನೆಯ ಜಿಲ್ಲಾ ಮುಖಂಡರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

* * *

ಬೀದಿ ಬದಿ ವ್ಯಾಪಾರಿಗಳ ಮೇಲಿನ ದೌರ್ಜನ್ಯ ಖಂಡಿಸಿ ಮೆರವಣಿಗೆ

ಮಂಗಳೂರು ನಗರದ ಮೈದಾನ್ ರಸ್ತೆಯಲ್ಲಿ ಇಬ್ಬರು ಬೀದಿ ಬದಿ ವ್ಯಾಪಾರಿಗಳ ತಳ್ಳುಗಾಡಿಯನ್ನು ತೆರವುಗೊಳಿಸಬೇಕೆಂದು ಸೂಚಿಸಿ ಮಾರ್ಚ್ 25 ರಂದು ಬಂದರು ಠಾಣೆಯ ಪೊಲೀಸರು ದೌರ್ಜನ್ಯ ನಡೆಸಿದರಲ್ಲದೆ ತಳ್ಳುಗಾಡಿ ಸಮೇತ ಅವರನ್ನು ವಶಕ್ಕೆ ತೆಗೆದುಕೊಂಡರು.

ಮಹಾನಗರ ಪಾಲಿಕೆಯ ಪಟ್ಟಣ ವ್ಯಾಪಾರ ಸಮಿತಿಯಿಂದ ಅನುಮೋದಿಸಲ್ಪಟ್ಟ ಬೀದಿ ವ್ಯಾಪಾರಿಗಳು ಇವರಾಗಿದ್ದು, ಈ ಬಗ್ಗೆ ಮಾಹಿತಿ ಪಡೆದ ಬೀದಿ ಬದಿ ವ್ಯಾಪಾರಿಗಳ ಸಂಘದ ಗೌರವಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮತ್ತಿತರ ಮುಖಂಡರು ಠಾಣೆಗೆ ತೆರಳಿ ದೌರ್ಜನ್ಯವನ್ನು ಖಂಡಿಸಿದರಲ್ಲದೆ, ಪ್ರತಿಭಟನೆಯ ಎಚ್ಚರಿಕೆ ನೀಡಿದರು. ಪರಿಣಾಮ ಈ ಇಬ್ಬರು ಬೀದಿ ಬದಿ ವ್ಯಾಪಾರಿಗಳನ್ನು ಬಿಡುಗಡೆಗೊಳಿಸಿದರು. ಬಳಿಕ ಬೀದಿ ಬದಿ ವ್ಯಾಪಾರಿಗಳ ಜೊತೆ ಮೈದಾನ್ ರಸ್ತೆವರೆಗೆ ಮೆರವಣಿಗೆ ನಡೆಸಲಾಯಿತು. ಮತ್ತೆ ಅಲ್ಲೇ ವ್ಯಾಪಾರ ನಡೆಸಿದರು.

ಬೀದಿ ಬದಿ ವ್ಯಾಪಾರಿಗಳನ್ನು ಬಂಧಿಸುವ ಪೊಲೀಸರು, ಶ್ರೀಮಂತ ವ್ಯಾಪಾರಿಗಳು ಅಂಗಡಿ ಸಾಮಾಗ್ರಿಗಳನ್ನು ರಸ್ತೆಯಲ್ಲೇ ಪೇರಿಸಿಟ್ಟರೂ ಮೌನ ತಾಳುತ್ತಾರೆ ಎಂದು ಅವರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಈ ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಮಹಮ್ಮದ್ ಮುಸ್ತಾಫ, ಪ್ರಧಾನ ಕಾರ್ಯದರ್ಶಿ ಹರೀಶ್ ಪೂಜಾರಿ, ಮುಖಂಡರಾದ ಸಂತೋಷ್ ಆರ್.ಎಸ್. ಭಾಗವಹಿಸಿದರು.

* * *

ಉಡುಪಿಯಲ್ಲಿ ಬೀಡಿ ಕಾರ್ಮಿಕರ ಧರಣಿ:

ಅಖಿಲ ಭಾರತ ಬೀಡಿ ಫೆಡರೇಶನ್ (ಸಿಐಟಿಯು) ಕರೆಯಂತೆ ಬೀಡಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಾರ್ಚ್ 28ರಂದು ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಲಾಯಿತು.

ಬಳಿಕ ಬೀಡಿ ಕಾರ್ಮಿಕರ ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಲಾಯಿತು. ರಾಷ್ಟ್ರೀಯ ಸಮಾನ ಕನಿಷ್ಟ ಕೂಲಿ 395 ರೂ. ತುಟ್ಟಿಭತ್ತೆ ಅಂಕಿ ಒಂದಕ್ಕೆ 5 ಪೈಸೆಯಂತೆ ನೀಡಬೇಕು, ಬೀಡಿ ಉದ್ಯಮವನ್ನು ನಿಲ್ಲಿಸಲು ಸರಕಾರ ಯೋಚಿಸುತ್ತಿರುವುದರಿಂದ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ರೂಪಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಧರಣಿಯಲ್ಲಿ ಉಡುಪಿ ಜಿಲ್ಲಾ ಬೀಡಿ ಫೆಡರೇಶನ್ ಅಧ್ಯಕ್ಷರಾದ ಮಹಾಬಲ ವಡೇರಹೋಬಳಿ, ಕಾರ್ಯದರ್ಶಿ ಉಮೇಶ್ ಕುಂದರ್, ಕೋಶಾಧಿಕಾರಿ ಕವಿರಾಜ್, ಮುಖಂಡರಾದ ಬಲ್ಕೀಸ್ ಬಾನು, ಸುನೀತಾ ಶೆಟ್ಟಿ, ನಳಿನಿ ಮೊದಲಾದವರು ಉಪಸ್ಥಿತರಿದ್ದರು.

ಕ್ರಿಮಿನಲ್ ಮಾನನಷ್ಟದ ದಾರಿಗಿಳಿದ ಬಿಜೆಪಿಯ ನಿರ್ಲಜ್ಜ ಪ್ರದರ್ಶನ

ಪುಟ 11 ರಿಂದ

ಬಿಜೆಪಿಯನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದಾರೆ.

ತ್ರಿಪುರ ವಿಧಾನಸಭೆ ಚುನಾವಣೆ

ತ್ರಿಪುರಾ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶಗಳ ಪ್ರಾಥಮಿಕ ವಿಶ್ಲೇಷಣೆಯನ್ನು ಪೊಲಿಟ್ ಬ್ಯೂರೋ ಮಾಡಿದೆ. ವಿರೋಧ ಪಕ್ಷಗಳು ಕಾರ್ಯನಿರ್ವಹಿಸಲು ಅವಕಾಶವಿಲ್ಲದ ಅಸಾಧಾರಣ ಪರಿಸ್ಥಿತಿಯಲ್ಲಿ ಚುನಾವಣೆಗಳನ್ನು ನಡೆಸಲಾಯಿತು ಮತ್ತು ಅವು ಕಳೆದ ಐದು ವರ್ಷಗಳ ಅವಧಿಯಲ್ಲಿ ನಿರಂತರ ದಾಳಿ ಮತ್ತು ಭಯೋತ್ಪಾದನೆಗೆ ಒಳಗಾಗಿದ್ದವು ಎಂಬುದನ್ನು ಗಮನಿಸಿದ ಪೊಲಿಟ್ ಬ್ಯೂರೋ ಭಯೋತ್ಪಾದನೆ ಮತ್ತು ದೈಹಿಕ ದಾಳಿಗಳನ್ನು ಎದುರಿಸಿ ವಿರೋಧ ಪಕ್ಷಗಳ ಪರವಾಗಿ ಮತ ಚಲಾಯಿಸಲು ಬಂದ ಎಲ್ಲಾ ಮತದಾರರಿಗೆ ಧನ್ಯವಾದಗಳನ್ನು ಅರ್ಪಿಸಿದೆ.

ತಾನು ನಿರೀಕ್ಷಿಸಿದ್ದ ಪ್ರದರ್ಶನ ನೀಡಲು ವಿಫಲವಾಗಿರುವ ಬಿಜೆಪಿ ಫಲಿತಾಂಶ ಪ್ರಕಟವಾದ ಬಳಿಕ ಪ್ರತಿಪಕ್ಷಗಳನ್ನು ಗುರಿಯಾಗಿಸಿಕೊಂಡು ಭೀಕರ ದಾಳಿ ನಡೆಸಿದೆ. ಸಿಪಿಐ(ಎಂ) ಪ್ರಮುಖ ಗುರಿಯಾಗಿರುವ ನಿರಂತರ ದಾಳಿಗಳನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ಸಾವಿರಕ್ಕೂ ಹೆಚ್ಚು ಭಯೋತ್ಪಾದನೆ, ಬೆದರಿಕೆ, ಲೂಟಿ ಮತ್ತು ಕಚೇರಿಗಳು ಮತ್ತು ಮನೆಗಳಿಗೆ ಬೆಂಕಿ ಹಚ್ಚುವುದು, ಆಸ್ತಿ ಮತ್ತು ಜೀವನೋಪಾಯದ ಸಾಧನಗಳಾದ ರಿಕ್ಷಾಗಳು ಮತ್ತು ತ್ರಿಚಕ್ರ ವಾಹನಗಳು ಇತ್ಯಾದಿಗಳನ್ನು ನಾಶಪಡಿಸುವುದು, ಬೆಳೆಗಳನ್ನು ನಾಶಪಡಿಸುವುದು, ವಿಶೇಷವಾಗಿ ರಬ್ಬರ್ ತೋಟಗಳು, ವಿಷಪೂರಿತ ಮೀನು ಕೊಳಗಳು ಇತ್ಯಾದಿಗಳು ಸಂಭವಿಸಿವೆ.

ಪರಿಸ್ಥಿತಿ ಅವಲೋಕಿಸಲು ತ್ರಿಪುರಾಕ್ಕೆ ಭೇಟಿ ನೀಡಿದ್ದ ಸಿಪಿಐ(ಎಂ), ಸಿಪಿಐ ಮತ್ತು ಕಾಂಗ್ರೆಸ್‌ನ ಏಳು ಸದಸ್ಯರ ಸಂಸದರ ತಂಡದ ಮೇಲೂ ಪೊಲೀಸರ ಸಮ್ಮುಖದಲ್ಲಿ ಬಿಜೆಪಿ–ಆರ್‌ಎಸ್‌ಎಸ್ ದಾಳಿ ನಡೆಸಿರುವುದು ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅಡಿಯಲ್ಲಿ ಇರುವ ಅತ್ಯಂತ ಅಪಾಯಕಾರಿ ಪರಿಸ್ಥಿತಿಯನ್ನು ತೋರಿಸುತ್ತದೆ.

ಕೇರಳ ಎಲ್‌ಡಿಎಫ್ ಮೇಲೆ ಗುರಿ

ಎಲ್‌ಡಿಎಫ್ ಸರ್ಕಾರ ಮತ್ತು ಕೇರಳದ ಮುಖ್ಯಮಂತ್ರಿಯನ್ನು ವೈಯಕ್ತಿಕ ನಿಂದನೆ ಮತ್ತು ಅವಹೇಳನಗಳಿಗೆ ಗುರಿಪಡಿಸುವುದನ್ನು ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಬಿಜೆಪಿಯ ತಾಳಕ್ಕೆ ತಕ್ಕಂತೆ ಇದೇ ರೀತಿಯ ಚಟುವಟಿಕೆಗಳಲ್ಲಿ ತೊಡಗಿದೆ. ಇಂತಹ ಪ್ರಯತ್ನಗಳಿಗೆ ಕೇರಳದ ಜನತೆ ತಕ್ಕ ತಿರುಗೇಟು ನೀಡಲಿದ್ದಾರೆ.

ಬೆಳೆಯುತ್ತಿರುವ ಜನರ ಹೋರಾಟ

ವಿವಿಧ ವಿಭಾಗಗಳ ಜನರ ನಡುವೆ ಜನಗಳ ಹೋರಾಟಗಳು ಬೆಳೆಯುತ್ತಿವೆ ಎಂಬುದನ್ನು ಪೊಲಿಟ್ ಬ್ಯೂರೋ ಗಮನಿಸಿತು.

ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಮಾರ್ಚ್ 20 ರಂದು ದೆಹಲಿ ರಾಮಲೀಲಾ ಮೈದಾನದಲ್ಲಿ ಕಿಸಾನ್ ಮಹಾ ಪಂಚಾಯತ್ ಅನ್ನು ಯಶಸ್ವಿಯಾಗಿ ನಡೆಸಿದೆ ಮತ್ತು ಕೃಷಿಯ ಮೇಲೆ ಬೆಳೆಯುತ್ತಿರುವ ಕಾರ್ಪೊರೇಟ್ ನಿಯಂತ್ರಣದ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಗೆ ಕರೆ ನೀಡಿದೆ.

ಮಹಾರಾಷ್ಟ್ರ ಕಿಸಾನ್ ಸಭಾ ಮಾರ್ಚ್ 12 ರಂದು ನಾಶಿಕ್‌ನಿಂದ ಮುಂಬೈಗೆ ಮೂರನೇ ಲಾಂಗ್ ಮಾರ್ಚ್ ಅನ್ನು ಪ್ರಾರಂಭಿಸಿತು. ಪಾದಯಾತ್ರೆ ಮುಂಬೈ ತಲುಪುವ ಮೊದಲೇ ಶಿಂಧೆ–ಬಿಜೆಪಿ ರಾಜ್ಯ ಸರ್ಕಾರವು ಈರುಳ್ಳಿಗೆ ಕ್ವಿಂಟಲ್ ಗೆ 350 ರೂ. ಗಳ ಸಬ್ಸಿಡಿ, 88,000ಕ್ಕೂ ಹೆಚ್ಚು ರೈತರ ಸಾಲ ಮನ್ನಾ ಇತ್ಯಾದಿ ಸೇರಿದಂತೆ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾಗಿ ಬಂದಿದೆ.

ಹಲವಾರು ರಾಜ್ಯಗಳಲ್ಲಿ ಮುಷ್ಕರಗಳನ್ನು ಪ್ರಾರಂಭಿಸಿದ ವಿದ್ಯುಚ್ಛಕ್ತಿ ನೌಕರರು ಬಿಜೆಪಿ ಸರ್ಕಾರವು ಒಗ್ಗಟ್ಟಿನ ಮತ್ತು ದೃಢನಿಶ್ಚಯದ ಟ್ರೇಡ್ ಯೂನಿಯನ್ ಕ್ರಮಗಳಿಗೆ ತಲೆಬಾಗುವಂತೆ ಮಾಡಿದ್ದಾರೆ. ರಾಜ್ಯ ಸರ್ಕಾರಿ ನೌಕರರು, ಅಂಗನವಾಡಿ ನೌಕರರು ಮತ್ತು ಯೋಜನಾ ನೌಕರರು ದೇಶದ ಹಲವೆಡೆ ಮುಷ್ಕರ ನಡೆಸಿದ್ದಾರೆ.

ಏಪ್ರಿಲ್ 5 ರಂದು ಮಜ್ದೂರ್–ಕಿಸಾನ್ ಸಂಸತ್ ಚಲೋಗೆ ಪಕ್ಷದ ಸೌಹಾರ್ದ ಮತ್ತು ಬೆಂಬಲವನ್ನು ಪೊಲಿಟ್ ಬ್ಯೂರೋ ಪುನರುಚ್ಚರಿಸಿದೆ.

ಕೇಂದ್ರ ಸಮಿತಿ ಸಭೆ

ಮುಂದಿನ ಕೇಂದ್ರ ಸಮಿತಿಯು ಏಪ್ರಿಲ್ 27, 28 ಮತ್ತು 29 ರಂದು ನವದೆಹಲಿಯಲ್ಲಿ ಸಭೆ ಸೇರಲಿದೆ.

ಅಮೆರಿಕದ ಬ್ಯಾಂಕುಗಳು ಮುಳುಗಿರುವುದರ..... ಪುಟ 13 ರಿಂದ

ಪ್ರಸ್ತುತ ಹಣದುಬ್ಬರಕ್ಕೆ ಕಾರಣವಾಯಿತು ಕೂಡ. ಆದರೂ ಅದು ಅಮೆರಿಕದ ಅರ್ಥವ್ಯವಸ್ಥೆಯನ್ನು ಸಾಕಷ್ಟು ಉದ್ಯೋಗ ಸೃಷ್ಟಿಯ ಉನ್ನತ ಮಟ್ಟಕ್ಕೆ ಕೊಂಡೊಯ್ಯಲಿಲ್ಲ. ಅಮೆರಿಕದ ಅಧಿಕೃತ ನಿರುದ್ಯೋಗ ದರವು ಶೇ. 4ಕ್ಕೆ ಇಳಿಯಿತು ಎಂಬುದೇನೊ ನಿಜ. ಆದರೆ, ಅದೇ ಸಮಯದಲ್ಲಿ ಕಾರ್ಮಿಕ ಶಕ್ತಿಯ ಭಾಗವಹಿಸುವಿಕೆಯ ದರದಲ್ಲಿ ಇಳಿಕೆ ಕಂಡುಬಂದಿದೆ. ಕಾರ್ಮಿಕ ಶಕ್ತಿಯ ಭಾಗವಹಿಸುವಿಕೆಯ ದರವು 2008ರ ಮಧ್ಯಭಾಗದಲ್ಲಿದ್ದ ಅದೇ ಮಟ್ಟದಲ್ಲಿ ಮುಂದುವರಿದಿದೆ ಎಂದು ಊಹಿಸಿಕೊಂಡು ಹಾಕಿದ ಲೆಕ್ಕಾಚಾರದ ಪ್ರಕಾರ, ನಿರುದ್ಯೋಗ ದರವು 2008ರ ನಂತರದ ಅವಧಿಯುದ್ದಕ್ಕೂ ಹೆಚ್ಚಿನ ಮಟ್ಟದಲ್ಲೇ ಇದೆ. ಹಣದುಬ್ಬರವು ಅಮೆರಿಕಾವನ್ನು ಬಲವಾಗಿ ಅಪ್ಪಳಿಸಿದಾಗ, ಬಡ್ಡಿ ದರವನ್ನು ಇದ್ದಕ್ಕಿದ್ದಂತೆ ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಯಿತು. ಹಣಕಾಸು ನೀತಿಯಲ್ಲಿನ ಈ ತರ್ಕಬದ್ಧವಲ್ಲದ ನಿಲುವಿಗೆ, ಬಡ್ಡಿ ದರದಲ್ಲಿನ ಈ ಅತಿರೇಕದ ಚಲನೆಗೆ, ಕಾರಣವೆಂದರೆ ಜಾಗತಿಕವಾಗಿ ಚಲಿಸುವ ಹಣಕಾಸು ಬಂಡವಾಳದ ಪ್ರಾಬಲ್ಯದ ಅಡಿಯಲ್ಲಿ, ಪರ್ಯಾಯವೇ ಇಲ್ಲ ಎಂಬುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ತರ್ಕಹೀನತೆಯು ಸರ್ಕಾರದ ತಿಕ್ಕಲುತನದಿಂದ ಉದ್ಭವಿಸಲಿಲ್ಲ; ಅದು ಜಾಗತಿಕ ಹಣಕಾಸು ಬಂಡವಾಳದ ಪ್ರಾಬಲ್ಯದಿಂದಾಗಿ ಉದ್ಭವಿಸಿದೆ.

ಬಡ್ಡಿ ದರಗಳ ಈ ರೀತಿಯ ಹುಚ್ಚಾಪಟ್ಟೆ ಏರಿಳಿತಗಳ ಪ್ರತಿಕೂಲ ಪರಿಣಾಮವು ಮತ್ತೊಂದು ಅಂಶದಿಂದಲೂ ಉಲ್ಬಣಗೊಳ್ಳುತ್ತದೆ. ಬಡ್ಡಿ ದರ ಕುಸಿದಾಗ ಮತ್ತು ಬಾಂಡ್ ಬೆಲೆಗಳು ಏರಿದಾಗ, ಇದು ಅರ್ಥವ್ಯವಸ್ಥೆಯನ್ನು ಉತ್ತೇಜಿಸುತ್ತದೆಯೋ ಅಥವಾ ಇಲ್ಲವೋ ಎಂಬುದು ಬೇರೆ ವಿಷಯ, ಕೊನೆಯ ಪಕ್ಷ ಅದು ಬ್ಯಾಂಕಿಂಗ್ ವ್ಯವಸ್ಥೆಗೆ ಯಾವುದೇ ಅಪಾಯವನ್ನು ಉಂಟುಮಾಡುವುದಿಲ್ಲ. ಬ್ಯಾಂಕಿನ ಆಸ್ತಿಗಳ ಮೌಲ್ಯದ ಹೆಚ್ಚಳವು ಅದನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸುವುದಿಲ್ಲ. ಆದರೆ ಬಡ್ಡಿ ದರವು ಏರಿಕೆಯಾದಾಗ ಮತ್ತು ಬಾಂಡ್ ಬೆಲೆಗಳು ಕುಸಿದಾಗ, ಬ್ಯಾಂಕಿನ ಆಸ್ತಿಗಳ ಮೌಲ್ಯವು ಅದರ ಬಾಧ್ಯತೆಗಳ ಮೌಲ್ಯಕ್ಕೆ ಹೋಲಿಸಿದರೆ ಕುಸಿಯುತ್ತದೆ. ಇದು "ಮಾರುಕಟ್ಟೆ"ಯಲ್ಲಿ ಪ್ರಚೋದಿಸುವ ಪ್ರತಿಕ್ರಿಯೆಗಳು ಬ್ಯಾಂಕ್‌ಅನ್ನು ಕಾರ್ಯಸಾಧು–ಅಲ್ಲದ ಪರಿಸ್ಥಿತಿಗೆ ತಳ್ಳಬಹುದು. ಬಡ್ಡಿ ದರದ ಇಳಿಕೆಯ ಪರಿಣಾಮ ಮತ್ತು ಏರಿಕೆಯ ಪರಿಣಾಮ ಇವುಗಳ ನಡುವಿನ ಈ ಅಸಮತೋಲನದ ಪರಿಣಾಮವಾಗಿ ಅದು ಬ್ಯಾಂಕಿಂಗ್ ವ್ಯವಸ್ಥೆಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ.

ಹಣದುಬ್ಬರಕ್ಕೆ ಪ್ರತಿಕ್ರಿಯೆಯಾಗಿ ಎಲ್ಲೆಡೆಯೂ ಬಡ್ಡಿ ದರ ಏರಿಕೆಯನ್ನೇ ಒಂದು ಅಧಿಕೃತ ನೀತಿಯಾಗಿ ಅಳವಡಿಸಿಕೊಳ್ಳಲಾಗಿದೆ. ಹಾಗಾಗಿ, ಬಡ್ಡಿ ದರದ ತೀವ್ರ ಏರಿಕೆಯಿಂದ ಅಮೆರಿಕದ ಬ್ಯಾಂಕಿಂಗ್ ವ್ಯವಸ್ಥೆ ಮಾತ್ರವಲ್ಲ, ಇಡೀ ಬಂಡವಾಳಶಾಹಿ ಜಗತ್ತಿನ ಬ್ಯಾಂಕಿಂಗ್ ವ್ಯವಸ್ಥೆಯು ಅಪಾಯಕ್ಕೊಳಗಾಗಿದೆ. ಕ್ರೆಡಿಟ್ ಸ್ಯೂಸ್‌ನಂತಹ ಪ್ರಖ್ಯಾತ ಬ್ಯಾಂಕ್ ಸಹ ಇತ್ತೀಚೆಗೆ ಅದರ ಷೇರು ಬೆಲೆಗಳು ನೆಲ ಕಚ್ಚಿದ ನಂತರ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಅದರ ಪ್ರತಿಸ್ಪರ್ಧಿಯಾಗಿದ್ದ ಯುಬಿಎಸ್ ಬ್ಯಾಂಕ್ ಅದನ್ನು ಸ್ವಾಧೀನಪಡಿಸಿಕೊಂಡಿದೆ.

ಅದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ, ಬಂಡವಾಳಶಾಹಿ ಜಗತ್ತಿನ ಬ್ಯಾಂಕಿಂಗ್ ವ್ಯವಸ್ಥೆಗೆ ಎದುರಾಗಿರುವ ಅಪಾಯದ ಮಟ್ಟವು ಇನ್ನೂ ತಗ್ಗಿಲ್ಲ. ಹಣದುಬ್ಬರವನ್ನು ಎದುರಿಸಲು ಬಡ್ಡಿ ದರಗಳನ್ನು ಇನ್ನಷ್ಟು ಏರಿಸಲು ಫೆಡರಲ್ ರಿಸರ್ವ್ ಬೋರ್ಡ್ ಈ ಹಿಂದೆ ಯೋಜಿಸಿತ್ತು. ಅಮೆರಿಕದ ಈ ಎರಡು ಬ್ಯಾಂಕುಗಳ ಕುಸಿತದ ನಂತರ ಅದು ಈಗ ನಿಧಾನ ನೀತಿಯನ್ನು ಅನುಸರಿಸಬಹುದು. ಆದರೆ ಮುಂದುವರಿಯುತ್ತಿರುವ ಹಣದುಬ್ಬರವು, ಬಡ್ಡಿ ದರಗಳನ್ನು ಏರಿಸುವುದನ್ನು ಬಿಟ್ಟರೆ ಬೇರೆ ಆಯ್ಕೆಯೇ ಇಲ್ಲ ಎನ್ನುವಂತೆ ಮಾಡಿದೆ. ಏಕೆಂದರೆ, ಬಂಡವಾಳಶಾಹಿಯ ಅಡಿಯಲ್ಲಿ ಹಣದುಬ್ಬರದ ವಿರುದ್ಧ ಹೋರಾಡುವ ಏಕೈಕ ಮಾರ್ಗವೆಂದರೆ ನಿರುದ್ಯೋಗವನ್ನು ಸೃಷ್ಟಿಸುವುದೇ ಆಗಿದೆ ಮತ್ತು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿ ಈ ಕಾರ್ಯವನ್ನು ಬಡ್ಡಿ ದರಗಳ ಏರಿಕೆಯ ಮೂಲಕವೇ ಸಾಧಿಸಲಾಗುತ್ತದೆ. ಬಂಡವಾಳಶಾಹಿಯು ಅದರ ನವ ಉದಾರವಾದಿ ಹಂತದಲ್ಲಿ ಬಿಕ್ಕಟ್ಟಿಗೆ ಸಿಲುಕಿ ಒದ್ದಾಡುತ್ತಿರುವಾಗ, ಅದರ ಅಂತ್ಯ ಸಮೀಪಿಸಿದೆ ಎಂಬುದನ್ನು ಯುರೋಪಿನಾದ್ಯಂತ ನಡೆಯುತ್ತಿರುವ ಕಾರ್ಮಿಕರ ಪ್ರತಿಭಟನೆಗಳು ಒತ್ತಿಹೇಳುತ್ತಿವೆ.

'ನೆತನ್ಯಾಹು! ನಿನ್ನ ಕ್ಷಿಪ್ರಕ್ರಾಂತಿ ನಿಲ್ಲಿಸು, ಇಲ್ಲದಿದ್ರೆ ನಿನ್ನನ್ನೇ ನಿಲ್ಲಿಸುತ್ತೇವೆ': ನೋವಾ ಹರಾರಿ

ಜಗದ ಸುತ್ತ

ವಸಂತರಾಜ ಎನ್.ಕೆ.

ಇಸ್ರೇಲಿನ ನೆತನ್ಯಾಹು ಸರಕಾರ ಪ್ರಸ್ತಾವಿಸಿರುವ ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳ ವಿರುದ್ಧ ಅಭೂತಪೂರ್ವವಾದ ತೀವ್ರ ಪ್ರತಿಭಟನೆ ಮತ್ತು ಪ್ರತಿರೋಧ ನಡೆಯುತ್ತಿದೆ. ಇಂತಹ ಪ್ರತಿಭಟನಾ ಸಭೆಯೊಂದರಲ್ಲಿ ಇಸ್ರೇಲಿನ ಪ್ರಸಿದ್ಧ ಲೇಖಕ ಚಿಂತಕ ಯುವಲ್ ನೋವಾ ಹರಾರಿ ಈ ಎಚ್ಚರಿಕೆ ಕೊಟ್ಟರಂತೆ. ಕಳೆದ ಸುಮಾರು ಮೂರು ತಿಂಗಳುಗಳಿಂದ ನಡೆಯುತ್ತಿರುವ ತೀವ್ರವಾದ ಸತತ ಪ್ರತಿಭಟನೆ ಮತ್ತು ನೆತನ್ಯಾಹು ಅವರ ಹಠಮಾರಿತನ ಇಸ್ರೇಲನ್ನು ಹಿಂದೆಂದೂ ಕಾಣದಂತೆ ಧ್ರುವೀಕರಿಸಿದೆ. ಇಸ್ರೇಲನ್ನು ಒಂದು ಆಂತರಿಕ ಯುದ್ಧದ ಸ್ಥಿತಿಗೆ ತಂದು ನಿಲ್ಲಿಸಿದೆ.

ಈಗ ಅಧಿಕಾರ ವಹಿಸಿಕೊಂಡ ನೆತನ್ಯಾಹು ಸರಕಾರ ಇಸ್ರೇಲಿನ ಏಳು ದಶಕಗಳ ಇತಿಹಾಸದಲ್ಲೇ ಅತ್ಯಂತ ಉಗ್ರ ಬಲಪಂಥೀಯ ಸರಕಾರ. ಅವರ ಲಿಕುಡ್ ಪಕ್ಷ, ಎರಡು ಜ್ಯೂ ಧಾರ್ಮಿಕ ಉಗ್ರಗಾಮಿ ಪಕ್ಷಗಳ ಮತ್ತು ಇತರ ಪಕ್ಷಗಳ ಕೂಟದ ಸರಕಾರ. ನೆತನ್ಯಾಹು ಅಧಿಕಾರ ವಹಿಸಿಕೊಂಡ ಕೂಡಲೇ ಜನರ ಜೀವನ ವೆಚ್ಚ ತಗ್ಗಿಸುವ, ಅರಬ್ ದೇಶಗಳ ಜತೆ ಶಾಂತಿ ವರ್ತುಲವನ್ನು ವಿಸ್ತರಿಸುವುದು ಸೇರಿದಂತೆ ನಾಲ್ಕು ಮುಖ್ಯ ಗುರಿಗಳನ್ನು ಘೋಷಿಸಿದ್ದರು. ಆದರೆ ತಕ್ಷಣ ಮಿಂಚಿನ ವೇಗದಲ್ಲಿ ಕೈಗೊಂಡಿದ್ದು ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳನ್ನು ಮಾಡುವ ಸರಣಿ ಕಾನೂನುಗಳನ್ನು. ಇದರ ಮೊದಲು ಇಂತಹ ದೂರಗಾಮಿ ಪರಿಣಾಮ ಬೀರುವ ಕಾನೂನುಗಳ ಕುರಿತು ವಿರೋಧ ಪಕ್ಷಗಳೊಂದಿಗೆ ಅಥವಾ ಸಮಾಜದ ವಿವಿಧ ಜನವಿಭಾಗಗಳೊಂದಿಗೆ ಯಾವುದೇ ಸಂವಾದ ನಡೆಸಲಿಲ್ಲ. ಈ ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳ ಮಾಹಿತಿ ದೊರೆಯುತ್ತಿದ್ದಂತೆ ಇದಕ್ಕೆ ವಿರೋಧ ಪಕ್ಷಗಳಿಂದ, ವಿವಿಧ ಜನವಿಭಾಗಗಳಿಂದ ತೀವ್ರ ವಿರೋಧ ವ್ಯಕ್ತವಾಯಿತು. ನ್ಯಾಯಾಂಗ ಸಹ ಇದನ್ನು ತೀವ್ರವಾಗಿ ವಿರೋಧಿಸಿದೆ.

ಇಸ್ರೇಲಿನ ಹೆಚ್ಚು ಕಡಿಮೆ ಎಲ್ಲ ನಗರಗಳಲ್ಲಿ ಹಿಂದೆಂದೂ ಕಾಣದ ಭಾರಿ ಸಂಖ್ಯೆಯಲ್ಲಿ ಸಮಾಜದ ವಿವಿಧ ವಿಭಾಗಗಳ ಜನ ಬೀದಿಗಿಳಿದರು. ಕಳೆದ ಮೂರು ತಿಂಗಳುಗಳ ಕಾಲ ಪ್ರತಿದಿನ ಎಂಬಂತೆ ಭಾರಿ ಪ್ರದರ್ಶನಗಳು ನಡೆದವು. ರಸ್ತೆ ತಡೆಗಳು, ಪ್ರದರ್ಶನಗಳು ನಡೆದವು. ರಸ್ತೆ ತಡೆಗಳು ಎಷ್ಟು ತೀವ್ರವಾಗಿದ್ದವೆಂದರೆ ಸ್ವತಃ ನೆತನ್ಯಾಹು ಕೆಲವು ವಿದೇಶ ಪ್ರವಾಸಗಳನ್ನು ರದ್ದು ಮಾಡಬೇಕಾಯಿತು. ದೇಶದೊಳಗಿನ ಸಾರಿಗೆ ಸಾಗಾಣಿಕೆಗಳು ಸ್ತಬ್ಧವಾದವು. ವಿದ್ಯಾರ್ಥಿಗಳು, ಅಧ್ಯಾಪಕರು ತರಗತಿಗಳನ್ನು ಬಹಿಷ್ಕರಿಸಿ ವಿ.ವಿ. ಶಿಕ್ಷಣ ಸಂಸ್ಥೆಗಳೂ ಸ್ತಬ್ಧವಾದವು. ಹಲವು ಕಡೆ ಮಿಲಿಟರಿ ಮೀಸಲು ಪಡೆಗಳ ಸದಸ್ಯರ ಸಂಘಟನೆಗಳು ಅಧಿಕೃತವಾಗಿ ಪ್ರತಿಭಟನೆಗೆ ಕರೆ ಕೊಟ್ಟವು. ಹಲವು ಪ್ರಮುಖ ಲೇಖಕರು, ಕಲಾವಿದರು, ಬುದ್ಧಿಜೀವಿಗಳು ಪ್ರತಿಭಟನೆಗಳಲ್ಲಿ ಭಾಗವಹಿಸಿದರು. . ಹಲವು ಹಿರಿಯ ಅಧಿಕಾರಿಗಳು ಸೇರಿದಂತೆ ಮಿಲಿಟರಿಯ ದೊಡ್ಡ ವಿಭಾಗ ಈ ಬದಲಾವಣೆಗಳಿಗೆ ವಿರುದ್ಧವಾಗಿದ್ದು, ಹಲವು ಹಿರಿಯ ನಿವೃತ್ತ ಅಧಿಕಾರಿಗಳು ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ರಕ್ಷಣಾ ಮಂತ್ರಿ ಪ್ರಸ್ತಾವಿತ ನ್ಯಾಯಾಂಗ ಬದಲಾವಣೆಗಳು ರಾಷ್ಟ್ರೀಯ ಭದ್ರತೆಗೆ ಮಾರಕ ಎನ್ನುವ ಸಾರ್ವಜನಿಕ ಹೇಳಿಕೆ ನೀಡಿದ ಕೂಡಲೇ ಅವರನ್ನು ನೆತನ್ಯಾಹು ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಿದರು. ಇಸ್ರೇಲಿನ ಅಧ್ಯಕ್ಷರೇ ಈ ಕಾನೂನುಗಳ ಪ್ರಸ್ತಾವಗಳು ದೇಶವನ್ನು ಆಂತರಿಕ ಯುದ್ಧದತ್ತ ಒಯ್ಯುತ್ತಿವೆ. ಈ ಕಾನೂನುಗಳನ್ನು ತಡೆ ಹಿಡಿಯಬೇಕೆಂದು ಸಾರ್ವಜನಿಕವಾಗಿ ಮನವಿ ಮಾಡಿದರು. ಆದರೂ ನೆತನ್ಯಾಹು ತಮ್ಮ ಹಠ ಬಿಡಲಿಲ್ಲ. ಆಂತರಿಕ ವ್ಯವಹಾರಗಳ ಸಚಿವ ಮತ್ತು ಉಗ್ರ ಧಾರ್ಮಿಕ ಪಕ್ಷದ ನಾಯಕ ಪ್ರತಿಭಟನಾಕಾರರು ಅರಾಜಕತಾವಾದಿಗಳು ಎಂದು ಕರೆದಿದ್ದು ಪ್ರತಿಭಟನೆಯ ತೀವ್ರತೆಯನ್ನು ಇನ್ನಷ್ಟು ಹೆಚ್ಚಿಸಿತು. ಇಸ್ರೇಲಿನ ಟ್ರೇಡ್ ಯೂನಿಯನುಗಳು ಅನಿರ್ದಿಷ್ಟ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟವು. ಮಾರ್ಚ್ 27ರ ಹೊತ್ತಿಗೆ ಇಡೀ ದೇಶವೇ ಸ್ತಬ್ಧವಾಗುವ ಸೂಚನೆ ಕಂಡು ಬಂದವು. ದೇಶ ಆಂತರಿಕ ಯುದ್ಧದತ್ತ ಜಾರುವ ಸೂಚನೆ ಕಂಡು ಬಂದಾಗ ಮತ್ತು ಮಿಲಿಟರಿ ಸಹ ಸರಕಾರದ ನೆರವಿಗೆ ಬರದಿರುವ ಸಾಧ್ಯತೆ ಕಂಡು ಕೊನೆಗೂ ನೆತನ್ಯಾಹು ಹಿಂಜರಿದರು. ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳನ್ನು ಮಾಡುವ ಸರಣಿ ಕಾನೂನುಗಳನ್ನು, ಸಂವಾದದ ಮೂಲಕ ಹೆಚ್ಚಿನ ಸಾರ್ವತ್ರಿಕ ಸಹಮತ ಮೂಡುವ ವರೆಗೆ ಸ್ಥಗಿತಗೊಳಿಸುವ ಘೋಷಣೆ ಮಾಡಿದರು.

ಪ್ರತಿಭಟನೆ ನಡೆಸುತ್ತಿದ್ದ ಹಲವು ಸಂಘಟನೆಗಳ ಕೂಟದ ಹೆಚ್ಚಿನ ಸಂಘಟನೆಗಳು ನೆತನ್ಯಾಹು ಅವರನ್ನು ನಂಬುವುದಿಲ್ಲ. ಸ್ವಲ್ಪ ಸಮಯದ ನಂತರ ಮತ್ತೆ ಈ ಕಾನೂನುಗಳನ್ನು ಮುಂದೊತ್ತುತ್ತಾರೆ ಎಂಬುದರ ಬಗ್ಗೆ ಅವರಿಗೆ ಸಂಶಯವಿಲ್ಲ. ಆದರೂ ರಾಷ್ಟ್ರೀಯ ಬಿಕ್ಕಟ್ಟನ್ನು ತಿಳಿಗೊಳಿಸುವ ಉದ್ದೇಶದಿಂದ ಸದ್ಯಕ್ಕೆ ಪ್ರತಿಭಟನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಆದರೆ ಹಲವು ಮಾಜಿ ಮಿಲಿಟರಿ ಪಡೆಗಳ ಮತ್ತು ಮೀಸಲು ಪಡೆಗಳ ಸಿಬ್ಬಂದಿ ಸೇರಿದಂತೆ ಹಲವು ಸಂಘಟನೆಗಳು ಪ್ರತಿಭಟನೆಗಳನ್ನುಮುಂದುವರೆಸಿವೆ. ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳನ್ನು ಮಾಡುವ ಸರಣಿ ಕಾನೂನುಗಳ ಪ್ರಸ್ತಾವವನ್ನು ಪೂರ್ಣವಾಗಿ ವಾಪಸು ತೆಗೆದುಕೊಳ್ಳುವವರೆಗೆ ಪ್ರತಿಭಟನೆಗಳನ್ನು ಮುಂದುವರೆಸುವುದಾಗಿ ಹೇಳಿವೆ. ನೆತನ್ಯಾಹು ಈ ಪ್ರಸ್ತಾವವನ್ನು ಪೂರ್ಣವಾಗಿ ವಾಪಸು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅವರ ವೈಯಕ್ತಿಕ ಭವಿಷ್ಯ ಈ ಕಾನೂನುಗಳನ್ನು ಜಾರಿಗೆ ಮಾಡುವುದರ ಮೇಲೆ ಅವಲಂಬಿಸಿದೆ.



ನೆತನ್ಯಾಹು ಪ್ರಸ್ತಾವಿಸಿರುವ ಹೆಚ್ಚು ಕಡಿಮೆ ಆಂತರಿಕ ಯುದ್ಧಕ್ಕೆ ಕಾರಣವಾದ ನ್ಯಾಯಾಂಗದ ಆಮೂಲಾಗ್ರ ಬದಲಾವಣೆಗಳಾದರೂ ಏನು? ಮೊದಲನೆಯದಾಗಿ ಒಂದು ಕಾನೂನು ಪ್ರಕಾರ ಪ್ರಸಕ್ತ ಮತ್ತು ಯಾವುದೇ ಭವಿಷ್ಯದ ಪ್ರಧಾನಿ ವಿರುದ್ಧ ಪಾರ್ಲಿಮೆಂಟ್ ಅಥವಾ ಕೋರ್ಟುಗಳು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣಗಳ ಕಾರಣದಿಂದ ಪ್ರಧಾನಿ ಪಟ್ಟದಿಂದ ತೆಗೆಯುವಂತಿಲ್ಲ. ಇದು ನೆತನ್ಯಾಹು ಅವರಿಗೆ ತುರ್ತಿನದು, ಏಕೆಂದರೆ ಅವರು ಹಲವು ಗಂಭೀರ ಭ್ರಷ್ಟಾಚಾರದ ಪ್ರಕರಣಗಳು ಕೋರ್ಟಿನ ಮುಂದಿವೆ. ಅವರ ಮಡದಿ ಈಗಾಗಲೇ ಸರಕಾರಿ ನಿಧಿಯ ದುರ್ಬಳಕೆಯಲ್ಲಿ ದೋಷಿಯಾಗಿ ಘೋಷಿಸಲಾಗಿದೆ. ಎರಡನೆಯದಾಗಿ ನ್ಯಾಯಾಧೀಶರನ್ನು ನೇಮಕ ಮಾಡುವ 9 ಸದಸ್ಯರ ಸಮಿತಿಯ ರಚನೆಯನ್ನು ಇನ್ನೊಂದು ಕಾನೂನು ಬದಲಾಯಿಸಲು ಹೊರಟಿದೆ. ಈ ಬದಲಾವಣೆಗಳ ನಂತರ ಸರಕಾರದ ಪ್ರತಿನಿಧಿಗಳು ಮತ್ತು ಅದರಿಂದ ನೇಮಕವಾದವರು ಈ ಸಮಿತಿಯಲ್ಲಿ ಬಹುಮತ ಹೊಂದಿರುತ್ತಾರೆ. ಹಾಗಾಗಿ ಕಾರ್ಯಾಂಗದ ಕೈಮೇಲಾಗುತ್ತದೆ. ನ್ಯಾಯಾಂಗದ ಸ್ವಾಯತ್ತತೆಗೆ ಹೊಡೆತ ಬೀಳುತ್ತದೆ. ಮಾತ್ರವಲ್ಲ, ಸರಕಾರದ ಆಡಳಿತಾತ್ಮಕ, ನೀತಿಯ ಧೋರಣೆಗಳು ಮತ್ತು ಕಾರ್ಯಾಚರಣೆಗಳನ್ನು 'ಸಂವಿಧಾನ-ವಿರೋಧೀ' ಎಂದು ವಜಾ ಮಾಡುವ ಕೋರ್ಟುಗಳ ಅಧಿಕಾರವನ್ನು ಗಮನಾರ್ಹವಾಗಿ ಮೊಟಕು ಮಾಡಲಾಗುತ್ತಿದೆ.

ಮುಂದುವರೆದು ನ್ಯಾಯಾಂಗದ ಇತರ ಸುಧಾರಣೆಗಳ ಭಾಗವಾಗಿ 'ರಬ್ಬಿನಿಕಲ್' (ಧಾರ್ಮಿಕ) ಕೋರ್ಟುಗಳ ವ್ಯಾಪ್ತಿಯನ್ನು ಧಾರ್ಮಿಕ ಕಾನೂಣು ಬಳಸಿ ಸಿವಿಲ್ ಪ್ರಕರಣಗಳನ್ನು ಇತ್ಯರ್ಥ ಪಡಿಸುವತ್ತ ವಿಸ್ತರಿಸುವ, ಅವಿಶ್ವಾಸ ಮತದ ಮೂಲಕ ಸರಕಾರವನ್ನು ಬದಲಾಯಿಸುವ ಪಾರ್ಲಿಮೆಂಟನ್ನು ವಿಸರ್ಜಿಸುವುದನ್ನು ನಿರ್ಬಂಧಿಸುವ ಇತ್ಯಾದಿ ಕಾನೂನುಗಳ ಪ್ರಸ್ತಾವಗಳೂ ಸೇರಿವೆ.

ಇಸ್ರೇಲಿನಲ್ಲಿ ವಿವರವಾದ ಲಿಖಿತ ಸಂವಿಧಾನವಿಲ್ಲದೆ ಬರಿಯ ಕೆಲವು ಮೂಲಭೂತ ಕಾನೂನುಗಳು ಮಾತ್ರವಿರುವುದರಿಂದ ನ್ಯಾಯಾಂಗಕ್ಕೆ ವಿಶೇಷ ಪಾತ್ರವಿದೆ. ವ್ಯಕ್ತಿಗಳ, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸುವುದು, ಸರಕಾರದ ಅತಿರೇಕಗಳನ್ನು ತಡೆಯುವುದು ನ್ಯಾಯಾಂಗದ ಕೆಲಸವಾಗಿದೆ. ನ್ಯಾಯಾಂಗ ಈ ಕೆಲಸಗಳನ್ನು ಮಾಡುತ್ತಾ ಬಂದಿದೆ. ವಿಶೇಷವಾಗಿ ಪ್ಯಾಲೆಸ್ಟೈನ್ ಮತ್ತು ಇತರ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ, ಪ್ಯಾಲೆಸ್ಟೈನ್ ಪ್ರದೇಶಗಳಲ್ಲಿ ಜ್ಯೂ ವಲಸೆಗಾರರ ದೌರ್ಜನ್ಯಗಳ ವಿರುದ್ಧ, ಜ್ಯೂ ಉಗ್ರ ಧಾರ್ಮಿಕ ವಾದಿಗಳು ರಾಜಕೀಯ ಪಾತ್ರದ ವಿರುದ್ಧ, ಇಸ್ರೇಲಿ ಸರಕಾರದ ಉಗ್ರ ರಾಷ್ಟ್ರೀಯತೆಯ ಮೇಲೂ ಕಡಿವಾಣ ಹಾಕಿದೆ. ಇದನ್ನು ಬೆಳೆಯುತ್ತಿರುವ ಉಗ್ರ ಧಾರ್ಮಿಕ ಬಲಪಂಥೀಯ ಪಕ್ಷಗಳು ವಿರೋಧಿಸುತ್ತಿವೆ. ನ್ಯಾಯಾಂಗವು ಕಾರ್ಯಾಂಗದ ಮೇಲೆ ರಾಷ್ಟ್ರೀಯತೆಯ ವಿರುದ್ಧ ಕೆಲಸ ಮಾಡುತ್ತಿದೆ. ಅದರ ಅಧಿಕಾರಗಳನ್ನು ಕಾರ್ಯಾಂಗದ ಜತೆ 'ಸಮತೋಲನ'ಗೊಳಿಸಬೇಕು ಎಂದು ವಾದಿಸುತ್ತಿವೆ. ಪ್ರಸಕ್ತ ಸರಕಾರದಲ್ಲಿ ಈ ಶಕ್ತಿಗಳ ಪ್ರಭಾವ ಹೆಚ್ಚಾಗಿದ್ದು ಇವನ್ನು ಈಗಲೇ ಮಾಡಬೇಕೆಂದು ಪಟ್ಟು ಹಿಡಿದಿವೆ. ಇಲ್ಲದಿದ್ದರೆ ಬೆಂಬಲ ವಾಪಸು ತೆಗೆದು ನೆತನ್ಯಾಹು ಸರಕಾರವನ್ನು ಉರುಳಿಸುವ ಬೆದರಿಕೆ ಹಾಕಿದ್ದಾರೆ. ಹೀಗಾಗಿ ನೆತನ್ಯಾಹು ಗೆ ವೈಯಕ್ತಿಕವಾಗಿ ಅಪರಾಧ ಪ್ರಕರಣಗಳಿಂದ ತಪ್ಪಿಸಿಕೊಳ್ಳಲು, ಸರಕಾರ ಉರುಳಿಸಿಕೊಳ್ಳಲು ಈ ಕಾನೂನುಗಳನ್ನು ಜಾರಿಗೊಳಿಸುವುದು ಅನಿವಾರ್ಯವಾಗಿತ್ತು.

ಆದರೆ ಈ ಕಾನೂನುಗಳನ್ನು ವಿರೊಧಿಸುವ ವಿಭಾಗಗಳು ಬಲವಾಗಿವೆ. ಪ್ರಜಾಪ್ರಭುತ್ವ ಬಯಸುವ ಉದಾರವಾದಿ ವಿಭಾಗಗಳು, ಮಹಿಳೆಯರು, ಮಧ್ಯಮ ವರ್ಗ, ಬುದ್ಧಿಜೀವಿಗಳು, ಅಲ್ಪಸಂಖ್ಯಾತತರು, ಮುಖ್ಯವಾಗಿ ಮಿಲಿಟರಿ ಇಸ್ರೇಲ್ ಒಂದು ಬಹುತ್ವದ ನಡುಪಂಥೀಯ ಪ್ರಜಾತಂತ್ರವಾಗಿರಬೇಕೆಂದು ಬಯಸುತ್ತವೆ. ಉಗ್ರ ರಾಷ್ಟ್ರವಾದಕ್ಕೂ ಅವರು ವಿರೋಧವಾಗಿದ್ದಾರೆ. ಉಗ್ರ ಧಾರ್ಮಿಕ ಶಕ್ತಿಗಳ ಕೈಮೇಲಾದರೆ ವೈಯಕ್ತಿಕ, ಮಹಿಳೆಯರ, ಅಲ್ಪಸಂಖ್ಯಾಣಟಿಜಜಜಿುಟಿಜಜತರುಗಳ ಸ್ವಾತಂತ್ರ್ಯಕ್ಕೆ ತೀವ್ರ ಕುತ್ತು ಒದಗುತ್ತದೆ ಎಂಬ ತೀವ್ರ ಆತಂಕ ಅವರಿಗಿದೆ. ಹಾಗಾಗಿ ಅವರ ವಿರೋಧ, ಪ್ರತಿರೋಧ ತೀವ್ರವಾಗಿರುತ್ತದೆ.

ಹಾಗಿದ್ದರೆ ಮುಂದೇನು? ನೆತನ್ಯಾಹು, ಅವರ ಸರಕಾರ, ಉಗ್ರ ಧಾರ್ಮಿಕ ಶಕ್ತಿಗಳಿಗೆ ಇದು ಅಳಿವು-ಉಳಿವಿನ ಪ್ರಶ್ನೆ. ಅವರು ಈ ಕಾನೂನುಗಳನ್ನು ಜಾರಿ ಮಾಡಿದರೂ, ಕೋರ್ಟುಗಳು ಅದನ್ನು ವಜಾ ಮಾಡುವುದು ಖಂಡಿತ. ಆಗ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಬಹುದು. ಆದರೆ ಉಗ್ರ ಧಾರ್ಮಿಕ ಪಕ್ಷಗಳು ತಮ್ಮ ಒತ್ತಡ ಮುಂದುವರೆಸಿವೆ. ಅವುಗಳನ್ನು ಸಂತಪ್ತ ಪಡಿಸಲು ಆ ಪಕ್ಷದ ಆಂತರಿಕ ಸಚಿವನಿಗೆ ಅವನ ನಾಯಕತ್ವದಲ್ಲಿ ರಾಷ್ಟ್ರೀಯ ಭದ್ರತಾ ಪಡೆ ರಚಿಸಲು ಅನುಮತಿ ನೀಡಿದೆ. ಅಂತರ್‌ರಾಷ್ಟ್ರೀಯವಾಗಿಯೂ ಪಾಸ್ಚಿಮಾತ್ಯ ದೇಶಗಳು ಈ ಕಾನೂನಿನ ಬಗ್ಗೆ ಕಳವಳ ವ್ಯಕ್ತಪಡಿಸಿರುವುದರಿಂದ ಅವರ ಬೆಂಬಲ ಸಹ ಸಿಗಲಿಕ್ಕಿಲ್ಲ. ಎರಡು ವಿಭಾಗಗಳ ನಡುವೆ ಸಂಘರ್ಷ ತೀವ್ರವಾದರೆ ಮಿಲಿಟರಿ ಸಹ ನೆತನ್ಯಾಹು ಸರಕಾರದ ರಕ್ಷಣೆಗೆ ನಿಲ್ಲುವ ಸಾಧ್ಯತೆ ಕಡಿಮೆ ಇರುವುದರಿಂದ ಆಂತರಿಕ ಯುದ್ಧದ ಪರಿಸ್ಥಿತಿ ಬರಬಹುದು.





NEW No. MAG(3)/NPP/205/2021-2022
JANASHAKTHI KANNADA VARA PATRIKE APRIL 3-9, 2023 Price: Rs. 10/- Date of Publication: 31 MARCH 2023 RNI No. KARKAN /2006/17926 Posted on 05-04-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಭಾರತದ ಅಗ್ರಗಣ್ಯ ಸೃಜನಶೀಲ ಕಲಾವಿದರಲ್ಲಿ ಒಬ್ಬರಾದ ವಿವಾನ್ ಸುಂದರಂ ಮಾರ್ಚ್ 29ರಂದು ನಿಧನರಾಗಿದ್ದಾರೆ. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅತೀವ ಶೋಕ ವ್ಯಕ್ತಪಡಿಸಿದೆ. ವಿವಾನ್ ಸುಂದರಂ ಅವರು ನಿರಂತರವಾಗಿ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಮತ್ತು ಜನತೆಯ ಆಶಯಗಳನ್ನು ಪ್ರತಿಪಾದಿಸಿದವರು ಎಂದು ಶ್ರದ್ಧಾಂಜಲಿ ಅರ್ಪಿಸುತ್ತ ಅವರ ಕುಟುಂಬ ಮತ್ತು ಸ್ನೇಹಿತರಿಗೆ ಪೊಲಿಟ್ ಬ್ಯೂರೋ ತನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ

ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು, ಅವರು ನಮ್ಮ ದೇಶದ ಅತ್ಯಂತ ಸೃಜನಶೀಲ ಕಲಾವಿದರಲ್ಲಿ ಒಬ್ಬರಾಗಿದ್ದರು ಎಂದು ಗೌರವ ಸಲ್ಲಿಸಿದೆ. ಜನಪರ ಕಲಾವಿದರಾಗಿದ್ದ ಅವರು ದುಡಿಯುವ ವರ್ಗ ಮತ್ತು ತುಳಿತಕ್ಕೊಳಗಾದವರ ಪರವಾದ ಬದ್ಧತೆ ಹೊಂದಿದ್ದರು. ವಿಶ್ವವಿಖ್ಯಾತ ಕಲಾವಿದರಾಗಿದ್ದ ಅವರು ಯಾವಾಗಲೂ ಜನರ ನವ ಉದಾರವಾದ–ವಿರೋಧಿ, ಕೋಮುವಾದ–ವಿರೋಧಿ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಕಾಣುತ್ತಿದ್ದರು ಎಂದು ಶ್ರದ್ಧಾಂಜಲಿ ಅರ್ಪಿಸುತ್ತ ಅವರ ಕುಟುಂಬ ಮತ್ತು ಸ್ನೇಹಿತರಿಗೆ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.



ಜನತೆಯ ಕಲಾವಿದ–ವಿವಾನ್ ಸುಂದರಂ

ಮೇ 28, 1943 ರಂದು ಶಿಮ್ಲಾದಲ್ಲಿ ಜನಿಸಿದ ವಿವಾನ್ ಸುಂದರಂ ಅವರ ತಂದೆ ಭಾರತದ ಕಾನೂನು ಆಯೋಗದ ಮಾಜಿ ಅಧ್ಯಕ್ಷ ಕಲ್ಯಾಣ್ ಸುಂದರಂ ಮತ್ತು ತಾಯಿ ಹೆಸರಾಂತ ಭಾರತೀಯ ಆಧುನಿಕ ಕಲಾವಿದೆ ಅಮೃತಾ ಶೇರ್–ಗಿಲ್ ಅವರ ಸಹೋದರಿ ಇಂದಿರಾ ಶೇರ್–ಗಿಲ್.ಎಂ.ಎಸ್. ಬರೋಡಾ ವಿಶ್ವವಿದ್ಯಾಲಯದ ಲಲಿತ ಕಲೆಗಳ ವಿಭಾಗದಲ್ಲಿ 1961–65ರ ಅವಧಿಯಲ್ಲಿ ಅಧ್ಯಯನ ಮಾಡಿದ ಅವರು ನಂತರ ಲಂಡನ್‌ನ ಸ್ಲೇಡ್ ಸ್ಕೂಲ್ ಆಫ್ ಆರ್ಟ್‌ನಲ್ಲಿ (1966–68) ಸಿನಿಮಾ ಇತಿಹಾಸವನ್ನು ಅಧ್ಯಯನ ಮಾಡಿದರು.

ಮೇ 1968 ರಲ್ಲಿ ವಿಶ್ವಾದ್ಯಂತ ಭುಗಿಲೆದ್ದ ವಿದ್ಯಾರ್ಥಿಗಳ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು, ಲಂಡನ್‌ನಲ್ಲಿ ವಿದ್ಯಾರ್ಥಿ ಕಮ್ಯೂನ್ ಅನ್ನು ಸ್ಥಾಪಿಸಲು ಸಹಾಯ ಮಾಡಿದರು, ಅಲ್ಲಿ ಅವರು 1970 ರವರೆಗೆ ವಾಸವಾಗಿದ್ದರು. 1971 ರಲ್ಲಿ ಭಾರತಕ್ಕೆ ಹಿಂದಿರುಗಿದ ನಂತರ ಅವರು ವಿಶೇಷವಾಗಿ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಕಲಾವಿದರು ಮತ್ತು ವಿದ್ಯಾರ್ಥಿಗಳ ಗುಂಪುಗಳೊಂದಿಗೆ ಪ್ರತಿಭಟನೆಗಳಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ತಮ್ಮ ಕಾಲೇಜು ವರ್ಷಗಳಲ್ಲಿ ಚಿತ್ರಕಲೆಯಿಂದ ಆರಂಭವಾಗಿದ್ದ ವಿವಾನ್ ಸುಂದರಂ ಅವರ ಕಲಾಜೀವನ ರೆಡಿಮೇಡ್‌ಗಳು, ಛಾಯಾಚಿತ್ರಗಳು ಮತ್ತು ವೀಡಿಯೊಗಳಿಂದ ಹಿಡಿದು ಶಿಲ್ಪಕಲಾ ಸ್ಥಾವರಗಳ ನಿರ್ಮಾಣದವರೆಗೆ ವಿಸ್ತರಿಸಿತು. ಭಾರತದ ಹಲವು ನಗರಗಳಲ್ಲಿ ಮಾತ್ರವಲ್ಲದೆ ಲಂಡನ್, ಪ್ಯಾರಿಸ್, ಟೊರಾಂಟೊ, ಮಾಂಟ್ರಿಯಲ್, ವಾಂಕುವರ್, ಆಮ್‌ಸ್ಟರ್ ಡ್ಯಾಮ್, ಬುಡಾಪೆಸ್ಟ್, ಕೊಪನ್ ಹೆಗನ್, ನ್ಯೂಯಾರ್ಕ್, ಡಲ್ಲಾಸ್, ಚಿಕಾಗೊ ಮತ್ತು ಲಾಸ್ ಎಂಜೆಲ್ಸ್ ನಲ್ಲಿ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ನಡೆಸಿದ್ದರು.


ಕಲಾರಂಗದಲ್ಲಿ ಇವರ ವಿಶೇಷ ಕೊಡುಗೆಯೆಂದರೆ, ಹತ್ತಾರು ಬಹುಮಾಧ್ಯಮ ಕಲಾ ಸ್ಥಾವರಗಳ ನಿರ್ಮಾಣ. ಈ ರಂಗದಲ್ಲಿ ಇವರು ಭಾರತದಲ್ಲಿ ಹರಿಕಾರರು ಎಂದೆನಿಸಿಕೊಂಡಿದ್ದಾರೆ. ಇವುಗಳಲ್ಲಿ ಮುಂಬೈಯ 1993ರ ಕೋಮು ಹಿಂಸಾಚಾರದ ಕುರಿತಾದ "ಮೆಮೋರಿಯಲ್" (ಸ್ಮಾರಕ) ಮತ್ತು ಮುಂಬೈಯಲ್ಲಿ 1946ರಲ್ಲಿ ನಡೆದ ರಿನ್ ನಾವಿಕರ ಬಂಡಾಯ ಕುರಿತಾಗಿ ಅಶೀಷ್ ರಾಜ್ಯಾಧ್ಯಕ್ಷರೊಂದಿಗೆ ರೂಪಿಸಿದ ಒಂದು ಸಾರ್ವಜನಿಕ ಕಲಾ ಯೋಜನೆ "ಮೀನಿಂಗ್ಸ್ ಆಫ್ ಫೇಲ್ಡ್ ಆಕ್ಷನ್: ಇನ್ಸರೆಕ್ಷನ್ 1946" (ವಿಫಲ ಕಾರ್ಯಾಚರಣೆಯ ಅರ್ಥಗಳು: 1946ರ ಬಂಡಾಯ) ಗಮನಾರ್ಹವಾದದ್ದು.

ಅಗ್ರಗಣ್ಯ ಕಲಾವಿದರೂ ಅಲ್ಲದೆ, ನುರಿತ ಕಲಾಸಂಘಟಕರೂ ಆಗಿದ್ದ ಅವರು ಕಲಾವಿದ–ಕಾರ್ಯಕರ್ತರೆಂದು ಗುರುತಿಸಿಕೊಂಡಿದ್ದು ಹಲವು ಕಲಾವಿದರ ಗುಂಪುಗಳು ಮತ್ತು ಕಲಾಸಮುದಾಯಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರಿಗೆ ಕಲೆ ಮತ್ತು ರಾಜಕೀಯ ಪ್ರತ್ಯೇಕ ರಂಗಗಳಾಗಿರಲಿಲ್ಲ, ಒಂದು ಸಮಷ್ಟಿಯಾಗಿತ್ತು ಎಂದು ಅವರ ಸಹಯೋಗಿಗಳು ಹೇಳುತ್ತಾರೆ. 'ಜರ್ನಲ್ ಆಫ್ ಆರ್ಟ್ಸ್ ಅಂಡ್ ಐಡಿಯಾಸ್' ಎಂಬ ಕಲಾಪತ್ರಿಕೆ 1981ರಲ್ಲಿ ಆರಂಭವಾದಾಗಿನಿಂದ 1999ರ ವರೆಗೆ ಅದರ ಸಂಪಾದಕೀಯ ತಂಡದ ಭಾಗವಾಗಿದ್ದ ಅವರು ಸಫ್ದರ್ ಹಾಶ್ಮಿ ನೆನಪಿನಲ್ಲಿ ಸ್ಥಾಪಿಸಿದ 'ಸಹಮತ್'ನ ಸ್ಥಾಪಕ ಟ್ರಸ್ಟಿಗಳಲ್ಲಿ ಒಬ್ಬರು. ಅದು ದೇಶದ ಬಹುತ್ವದ ಸಂಸ್ಕೃತಿಯನ್ನು ಪ್ರತಿಪಾದಿಸುತ್ತ ನಡೆಸಿದ ಹಲವು ಚಟುವಟಿಕೆಗಳ ರೂವಾರಿಯೂ ಆಗಿದ್ದರು.


"..ಮೇ 1968ರಲ್ಲಿ ವಿದ್ಯಾರ್ಥಿ ಆಂದೋಲನದೊಂದಿಗೆ ಆರಂಭವಾದ ನನ್ನ ರಾಜಕೀಯಕರಣ ಸಿಪಿಐ(ಎಂ)ನ ಸಂಗಾತಿಗಳ ಸಂಪರ್ಕದೊಂದಿಗೆ ನಿರ್ದಿಷ್ಟ ಸೈದ್ಧಾಂತಿಕ ದೆಸೆ ಪಡೆಯಿತು. ಎಂದೂ ಸಿಪಿಐ(ಎಂ) ಸದಸ್ಯನಾಗಿರದಿದ್ದರೂ, ನಾನು ವಿಶೇಷವಾಗಿ 1990ರಿಂದ 2003ರ ಅವಧಿಯಲ್ಲಿ ಕೆಲವು ನೇರ–ನೇರಾ ರಾಜಕೀಯದ ಭಾಗವಾಗಿದ್ದೆ." ಎಂದು ಅವರು ಹೇಳಿದ್ದರು.

'ಜರ್ನಲ್ ಆಫ್ ಆರ್ಟ್ಸ್ ಅಂಡ್ ಐಡಿಯಾಸ್' ಕಲಾಪತ್ರಿಕೆಯ ಕಲ್ಪನೆ ಮೂಡಿ ಬಂದದ್ದು ಕಲೆಯ ರಾಜಕೀಯ ಸ್ವಭಾವ ಕುರಿತಂತೆ ಪ್ರಶ್ನೆಗಳನ್ನು ಎತ್ತಬೇಕು ಎಂದು ತಮ್ಮಂತಹ ಕೆಲವರಿಗೆ ಅನಿಸಿದಾಗ, ಆಗ ಕೇರಳದ ಮುಖ್ಯಮಂತ್ರಿಯಾಗಿದ್ದ ಇಎಂಎಸ್ ನಂಬೂದಿರಿಪಾಡ್ ಅವರು ನೀಡಿದ ಸಲಹೆಯ ಹಿನ್ನೆಲೆಯಲ್ಲಿ ಎಂದೂ ಅವರು ಸಂದರ್ಶನವೊಂದರಲ್ಲಿ ತಿಳಿಸಿದ್ದರು.





"ಮೆಮೋರಿಯಲ್" ಕಲಾ ಸ್ಥಾವರದಲ್ಲಿನ 'ಮೊಸೋಲಿಯಂ'(ಭವ್ಯ ಸಮಾಧಿ) ಮತ್ತು 'ಫಾಲನ್ ಮಾರ್ಟಲ್'(ಮೃತಜೀವಿ) ತ್ರಿಕೋಣ ಸಮಾಧಿಯೊಳಗೆ ಮುಂಬೈ ಗಲಭೆಗಳಲ್ಲಿ ಬಲಿಯಾದ ವ್ಯಕ್ತಿಯ ಶವದ ಒಂದು ಪತ್ರಿಕಾ ಫೋಟೋವನ್ನು ಒಂದು ಪ್ಲಾಸ್ಟರ್ ಅಚ್ಚಾಗಿ ಪರಿವರ್ತಿಸಿದ ಕೃತಿ ಮತ್ತು ಕೊಲೆಯಾದ ವ್ಯಕ್ತಿಯ ಫೋಟೋದಲ್ಲಿನ ದೇಹದೊಳಕ್ಕೆ 3600 ಮೊಳೆಗಳನ್ನು ನೆಟ್ಟು ರಚಿಸಿದ ಕೃತಿ.



ಕಾರ್ಲ್ ಮಾರ್ಕ್ಸ್ – ವಿವಾನ್‌ರವರ ಒಂದು ಚಿತ್ರಕೃತಿ





"ಮೀನಿಂಗ್ಸ್ ಆಫ್ ಫೇಲ್ಡ್ ಆಕ್ಷನ್: ಇನ್ಸರೆಕ್ಷನ್ 1946": ಹಡಗಿನಂತಹ ಒಂದು ರಚನೆಯೊಳಗೆ 1946ರ ರಿನ್ ನಾವಿಕರ ಮತ್ತು ಅವರ ಬೆಂಬಲಕ್ಕೆ ನಿಂತ ಮುಂಬೈಯ ಕಾರ್ಮಿಕ ವರ್ಗದ ಹೋರಾಟದ ನೆನಪನ್ನು ಕಟ್ಟಿಕೊಡುವ 'ಆಪ್ತ ರಂಗ'

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**